

# ಶ್ರೀಸರ್ವಮೂಲ ಸಂದೇಶ

## "ಸಕಲ ಶಾಸ್ತ್ರಗಳ ಸಾರ"

**ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।**

**ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಸ್ಸದಾ॥**

ಎಲ್ಲಾ ಶಾಸ್ತ್ರಗಳನ್ನು ಮಥನ ಮಾಡಿ, ಕೂಲಂಕಷವಾಗಿ ವಿಚಾರ ಮಾಡಿ ನಿಶ್ಚಿತವಾದ ಮುಖ್ಯ ವಿಷಯವೆಂದರೆ- ಮುಕ್ತಿಗಾಗಿ ಯಾವಾಗಲೂ ಹರಿಯನ್ನು ಧ್ಯಾನಿಸಬೇಕು ಎಂದು.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–2 ಸರ್ವಧಾರಿ ಸಂ.॥ ಪುಷ್ಯ–ಮಾಘ ಫೆಬ್ರವರಿ 2009**

ಸಂಸ್ಥಾಪಕರು:

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀವಿದ್ಯಾಮಾನ್ಯ ಪ್ರಕಾಶನ

ಶ್ರೀಮದ್ ಹೃಷೀಕೇಶ ತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

**www.livepravachana.com**

**E-MAIL**

**sarvamoola@udupishripalimarumatha.org**

## ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 4 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 6 |
| **ಏಕವಾಟದಲ್ಲಿ ಮಧ್ವನವಮಿ** | **ಸಗ್ರಿ** | **8** |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಪಲಿಮಾರಿನ ವಸಂತೋತ್ಸವ** | | 12 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 14 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 17 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 19 |
| **ಜೀವನಯಜ್ಞ** | ಶ್ರೀ ಸುನಂದಕೀ | 21 |
| **ಮಾರ್ಕಂಡೇಯಪುರಾಣ** | ವಿ॥ ಅದ್ವೇ ಲಕ್ಷ್ಮೀಶಾಚಾರ್ಯ | 23 |
| **ವಿಷ್ಣುಪುರಾಣ** | ಸ್ಫೂರ್ತಿ | 25 |
| **ಶ್ರೀಮಧ್ವಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 27 |
| **ಹರಿಕಥಾಮೃತಸಾರ** | ವಿ॥ ಕೆ. ಅಪ್ಪಣಾಚಾರ್ಯ | 29 |
| **ಅವಲೋಕನ** | | 31 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 33 |
| **ಸುಂದರನೊಳಡಗಿದ ಸೌಂದರ್ಯ** | **ವಿ॥ ಡಿ. ಗುರುಪ್ರಸಾದ ಭಟ್** | 35 |
| **ಅನುಭವ ಕಥನ** | | 38 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ

**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು

ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು

ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

–ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ಸರ್ವಭಕ್ಷೋಽಪಿ ಯುಕ್ತಾತ್ಮಾ ನಾದತ್ತೇ ಪಾಪಂ ಅಗ್ನಿವತ್**

ಅವಧೂತರು ಅಗ್ನಿಯಿಂದ ಕಲಿತ ಪಾಠವನ್ನು ಯದುರಾಜರಿಗೆ ಒಪ್ಪಿಸುತ್ತಾರೆ. ಸರ್ವವನ್ನು ತಿಂದರೂ ಅಗ್ನಿಯಂತೆ ಜ್ಞಾನಿ. ಭಗವಂತನಲ್ಲಿ ಮನಸ್ಸನ್ನಿಟ್ಟವನಾಗಿ ಖಂಡಿತಾ ಪಾಪವನ್ನು ಹೊಂದಲಾರ. ಬೆಂಕಿಗೆ ಸಂಸ್ಕೃತ ಭಾಷೆ ನೀಡಿದ ನಾಮಧೇಯ ಅಗ್ನಿ. ಯಾಕೆ ಬೆಂಕಿ ಅಗ್ನಿ. **ಅತ್ತಿ ಇತಿ ಅಗ್ನಿಃ** ತಿನ್ನುವವನು ಆದುದರಿಂದ ಅಗ್ನಿ. ಸಿಕ್ಕಿದ್ದನ್ನೆಲ್ಲಾ ತಿನ್ನುತ್ತಾನೆ. ಸಿಕ್ಕಿದ್ದನ್ನೆಲ್ಲಾ ಮಾತ್ರವಲ್ಲ, ಪಕ್ಕದ ವಸ್ತುವಿಗೂ ಕೆನ್ನಾಲಗೆ ಚಾಚಿ ಉರಿದು ಬೂದಿ ಮಾಡುತ್ತಾನೆ. ಸಮಗ್ರವಾದ ಖಾಂಡವವನವನ್ನೇ ಸುಟ್ಟ ಘಟನೆಯಂತೂ ಮಹಾಭಾರತದ ಇತಿಹಾಸದಲ್ಲೇ ದಾಖಲಾದುದು. ಖಾಂಡವವನವನ್ನು ತಿನ್ನಬೇಕಾದರೆ ಅಗ್ನಿಯ ತಾಕತ್ತಾದರೂ ಅದೆಷ್ಟು. ಖಾಂಡವವನವನ್ನು ಯಾಕೆ ಅಗ್ನಿ ತಿಂದ! ಅದಕ್ಕೆ ಕಾರಣ ತಿಳಿಸಿದ್ದಾರೆ. ತನ್ನ ಹೊಟ್ಟೆ ಹಾಳಾದ್ದಕ್ಕೆ ಖಾಂಡವ ಕಾಡನ್ನು ಅಗ್ನಿ ತಿಂದ. ಎಲ್ಲಿಯಾದರೂ ಉಂಟೆ? ಹೊಟ್ಟೆ ಹಾಳಾದರೆ ತಿನ್ನಬೇಕೆಂದು. ಹೊಟ್ಟೆ ಹಾಳಾದರೆ ಉಪವಾಸವಿರಬೇಕೆನ್ನುತ್ತಾರೆ ಹೊರತು ಅಜೀರ್ಣ ರೋಗಕ್ಕೆ ಇನ್ನಷ್ಟು ತಿನ್ನುವುದಲ್ಲವಲ್ಲ. ತಿಂದರೆ ಇನ್ನಷ್ಟು ರೋಗ ಉಲ್ಬಣವಾಗುತ್ತೆ ಅಷ್ಟೆ. ಆದರೆ ನಮ್ಮಲ್ಲಿ ಒಂದು ಕ್ರಮವಿದೆ. ಹೊಟ್ಟೆ ಹಾಳಾದರೆ ಔಷಧವಾದರೂ ತಿನ್ನಬೇಕಲ್ಲ. ಔಷಧ ತೆಗೆದುಕೊಳ್ಳದೆ ಹೋದರೆ ಆರೋಗ್ಯ ಕೆಟ್ಟು ಹೋಗುತ್ತದೆ. ಅಗ್ನಿ ತನ್ನ ಅಜೀರ್ಣರೋಗ ಪರಿಹಾರಕ್ಕಾಗಿ ಖಾಂಡವವನವನ್ನು ತಿಂದದ್ದು ಔಷಧದಂತೆ. ಖಾಂಡವವನವನ್ನೇನು ಪ್ರಳಯಕಾಲದಲ್ಲಿ ಇಡೀ ಜಗತ್ತನ್ನೇ ಸುಟ್ಟು ಬೂದಿಮಾಡಿಬಿಡುತ್ತಾನೆ ಅಗ್ನಿಯ ಮೂಲಕ.

ಅಗ್ನಿಗೆ ಇದು ಭಕ್ಷ್ಯ. ಇದು ಅಭಕ್ಷ್ಯ ಅನ್ನುವ ಕಲ್ಪನೆಯೇ ಇಲ್ಲ. ಕೊಟ್ಟದ್ದನ್ನೆಲ್ಲಾ– ಸಿಕ್ಕಿದ್ದನೆಲ್ಲಾ ಅಗ್ನಿ ತಿನ್ನುತ್ತಾನೆ. ಅಗ್ನಿಗೆ ಯಾವ ಲೇಪವೂ ಇಲ್ಲ. ಪಾಪಿಗಳು ಕೊಟ್ಟದ್ದನ್ನೂ ತಿನ್ನುತ್ತಾನೆ. ಪುಣ್ಯಾತ್ಮರು ಕೊಟ್ಟದ್ದನ್ನೇ ತಿನ್ನಬೇಕೆಂಬ ನಿಯಮ ಅಗ್ನಿಗೆ ಇಲ್ಲ. ಭಕ್ತಿಯಿಂದ ಶ್ರದ್ಧೆಯಿಂದ ಆಹುತಿ ಕೊಟ್ಟು ಹೋಮ ಮಾಡಿದವರ ಪಾಪವನ್ನು ಸ್ವೀಕರಿಸುತ್ತಾನೆ.

ನಂಬಿದವರ ಸಲಹುವವರಲ್ಲಿ ಶ್ರೀಕೃಷ್ಣನೇ ಅಗ್ರಗಣ್ಯ

ಬಂಗಾರದ ದೋಷ ಬೆಂಕಿಗೆ ಇಟ್ಟಾಗ ತಾನೇ ನಿರ್ಮೂಲವಾಗುವುದು. ಅಂತಯೇ ಬಂಗಾರದಂತೆ ಸಾತ್ವಿಕರ ಪಾಪವನ್ನು ಅಗ್ನಿನಾರಾಯಣ ಸಂಹಾರ ಮಾಡುತ್ತಾನೆ.

ಹೇಗೆ ಅಗ್ನಿ ಹಾಗೆಯೇ ಬ್ರಹ್ಮಜ್ಞಾನಿಯೂ ಕೂಡ. ಬ್ರಹ್ಮಜ್ಞಾನಿಗೂ ಕೂಡ ಯಾವುದೇ ಲೇಪ ಇಲ್ಲ. ಬ್ರಹ್ಮಜ್ಞಾನಿ ಹೇಗೆಯೇ ಇರಲಿ, ಬ್ರಹ್ಮಜ್ಞಾನಕ್ಕೆ ಹಾನಿ ಇಲ್ಲ. ಅದರ ಫಲ ಮುಕ್ತಿಗೂ ಹಾನಿಯಿಲ್ಲ. ಬ್ರಹ್ಮಜ್ಞಾನಿಯ ಆಚಾರದಂತೆ ಅಹಾರವೂ ಪ್ರಶ್ನಾತೀತ. ಯಾವುದೇ ಆಹಾರದ ನಿಯಂತ್ರಣ ಇಲ್ಲ. ಬ್ರಹ್ಮಜ್ಞಾನಿ ತಿನ್ನುವುದು ರಾಗದಿಂದಲ್ಲ, ಭೋಗಕ್ಕಾಗಿ ಅಲ್ಲ. ರುಚಿಬೇಕಾಗಿಲ್ಲ. ಶರೀರದ ನಿರ್ವಹಣೆಗಾಗಿ. ಪ್ರಾರಬ್ಧ ಕರ್ಮದ ಫಲ ಈ ಶರೀರ. ಈ ತನುವನ್ನು ಭೋಗಿಸಿಯೇ ಕಳಕೊಳ್ಳಬೇಕಾದದ್ದು. ಅದಕ್ಕಾಗಿಯೇ ತಿನ್ನುವುದು. ಆದ್ದರಿಂದ ಹೊಟ್ಟೆಗಾಗಿ ಸಿಕ್ಕಿದ್ದೆನ್ನೆಲ್ಲಾ ತಿನ್ನುತ್ತಾನೆ. ಭಕ್ಷ್ಯ-ಅಭಕ್ಷ್ಯ ವಿವೇಕವಿಲ್ಲ. ಅಗತ್ಯಕ್ಕಿಂತ ಹೆಚ್ಚಿನ ಬೇಡಿಕೆಯಿಲ್ಲ. ಛಾಂದೋಗ್ಯ ಉಪನಿಷತ್ ತಿಳಿಸಿದ ಕಥೆ ಸುಪ್ರಸಿದ್ಧ. ಒಬ್ಬ ಜ್ಞಾನಿ ಎಂಜಲು ಆಹಾರವನ್ನು ಬೇಡಿ ತಿಂದನಂತೆ. "ನೀರು ಕುಡಿ" ಎಂದು ಕೊಟ್ಟರೆ ತಿರಸ್ಕರಿಸಿದನಂತೆ. ನೀರು ಎಂಜಲು ಎಂದು ಉಪೇಕ್ಷಿಸಿದನಂತೆ. ಆಹಾರ ತಿನ್ನದಿದ್ದರೆ ಸತ್ತು ಹೋಗುತ್ತಿದ್ದೆ. ನೀರು ಕುಡಿಯದೇ ಇದ್ದರೆ ಏನೂ ಆಗದು. ನೀರು ಬೇಕಾದಷ್ಟು ಸಮೃದ್ಧವಾಗಿದೆ. ನೀರು ಮುಟ್ಟಲೇ ಇಲ್ಲವಂತೆ. ಜ್ಞಾನಿ ತನ್ನ ಆಹಾರಕ್ಕಾಗಿ ತಲೆ ಎಂದೂ ಕೆಡಿಸಿಕೊಳ್ಳಲಾರ. ತನ್ನ ಹೊಟ್ಟೆ ಪಾಡಿಗಾಗಿ ದುಡಿಯುವವನಲ್ಲ. ಸಿಕ್ಕಿದಷ್ಟರಲ್ಲೇ ತೃಪ್ತಿಪಡುವವ. ಹೆಚ್ಚಾದ್ರೆ ಅದಕ್ಕೂ ತಲೆಕೆಡಿಸಿಕೊಂಡು ಬಾಯಿಬಿಡುವವನಲ್ಲ. ಆದರೆ ಈ ಘಟನೆಯಿಂದ ದುರುಪಯೋಗವಾಗುವುದೇ ಜಾಸ್ತಿ. ಭಗವಂತನ ಅಪರೋಕ್ಷ ಜ್ಞಾನವೇ ನಿಜವಾದ ಜ್ಞಾನ. ದೇವರನ್ನು ಪ್ರತ್ಯಕ್ಷಕಂಡ ಜ್ಞಾನಿಗೆ ಭಕ್ಷ್ಯಾ-ಭಕ್ಷ್ಯ ವಿವೇಕವಿಲ್ಲ. ಅದೂ ಆಪತ್ಕಾಲದಲ್ಲಿ ಎಂದು ಇಲ್ಲಿ ಹೇಳಿದ್ದು.

**"ಸರ್ವಾನ್ನಾನುಮತಿ ಪ್ರಾಣಾತ್ಯಯೇ ತದ್ದರ್ಶನಾತ್"** ಎಂಬ ಬ್ರಹ್ಮಸೂತ್ರದ ಅರ್ಥವೂ ಇದೇ. ಭಾಗವತ ಸಕಲ ಬ್ರಹ್ಮಸೂತ್ರಗಳ ಸಾರ. ಸಕಲ ಶ್ರುತಿಗಳ ಅರ್ಥನಿರ್ಣಯಕೋಸ್ಕರ ಶ್ರೀವೇದವ್ಯಾಸದೇವರು ಬ್ರಹ್ಮಸೂತ್ರವನ್ನು ರಚಿಸಿದರು. ಅದೇ ವೇದವ್ಯಾಸದೇವರು ಶ್ರೀಮದ್‌ಭಾಗವತವನ್ನೂ ನೀಡಿದ್ದಾರೆ. ಒಂದಕ್ಕೆ ಒಂದು ಪೂರಕ. ಸಂವಾದಕೂಡ. **"ಅರ್ಥೋಯಂ ಬ್ರಹ್ಮಸೂತ್ರಾಣಾಂ"** ಎಂಬುದಕ್ಕೆ ಇದೂ ಒಳ್ಳೆಯ ನಿದರ್ಶನ.

---

ಇದು ವೇದ-ಮಹಾಭಾರತ ಮುಂತಾದ ಇತಿಹಾಸ-ಪುರಾಣಗಳ ಸಾರ.

ವಿದ್ವತ್ ಪ್ರಪಂಚ

# ಗೀತಾಮೃತ



–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಮಾತೃಸಂಹಿತಾರೂಪವಾಗಿ ಅರ್ಜುನನಿಗೆ ಶ್ರೀಕೃಷ್ಣ ಉಪದೇಶವನ್ನು ಆರಂಭಿಸಿದನು. ಹೇ! ಅರ್ಜುನ ನೀನು ಯಾರಿಗಾಗಿ ದುಃಖವನ್ನು ಮಾಡುತ್ತಿಯೋ ಅವರು ದುಃಖಕ್ಕೆ ಅನರ್ಹರು. ಅಂದರೆ ಅವರ ವಿಷಯದಲ್ಲಿ ವಿಷಾದವನ್ನು ಮಾಡುವುದು ಉಚಿತವಲ್ಲ. ಜ್ಞಾನಿಗಳು ಜೀವಂತವಾಗಿರುವವರನ್ನು ಕುರಿತು ಶೋಕಮಾಡದೇ ಇರುವಂತೆ ಸಾಯಲಿಕ್ಕೆ ಸನ್ನದ್ಧರಾದವರ ಕುರಿತೂ ಶೋಕಿಸುವುದಿಲ್ಲ. ನೀನಾಡಿದ ಮಾತುಗಳೂ ಕೂಡ ಪ್ರಾಜ್ಞ ಸಮ್ಮತವಲ್ಲ. ಸ್ವಬುದ್ಧಿ ಕಲ್ಪಿತವಾಗಿಯೇ ನಿನಗೆ ಅನುಕೂಲವಾಗುವ ಹಾಗೆಯೇ ನೀನು ಮಾತನಾಡುತ್ತಿದ್ದಿ. ನೀನು ಯಾವ ಕಾರಣಕ್ಕಾಗಿ ದುಃಖಮಾಡುತ್ತಿದ್ದಿ? ಅವರ ಆತ್ಮನಾಶಕ್ಕೊ? ಅಥವಾ ದೇಹನಾಶಕ್ಕೋ? ಆತ್ಮ–ದೇಹ ಇವೆರಡರ ಪೈಕಿ ಆತ್ಮಕ್ಕೆ ಯಾವಾಗಲೂ ನಾಶವಾಗಲಿ ಸೃಷ್ಟಿಯಾಗಲಿ ಇಲ್ಲ. ನೀನು ನಾನು ಇತರರು ಎಲ್ಲರ ಆತ್ಮವೂ ಕೂಡ ನಿತ್ಯವೇ ಆಗಿದೆ. ಆದ್ದರಿಂದ ಬಂಧುಗಳ ಆತ್ಮನಾಶನಿಮಿತ್ತಕವಾಗಿ ದುಃಖ ಮಾಡುವ ಪ್ರಸಕ್ತಿಯೇ ಇಲ್ಲ. ಇನ್ನು ಬಂಧುಗಳ ದೇಹನಾಶಕ್ಕಾಗಿ ದುಃಖ ಮಾಡುವುದಾದರೆ ಅದೂ ತಪ್ಪು. ಯಾಕೆಂದರೆ ಈ ಜೀವಿಯ ದೇಹದಲ್ಲಿ ಬಾಲ್ಯಾವಸ್ಥೆ ಹೋಗಿ ಯವ್ವನಾವಸ್ಥೆಯು ಬರುವುದು. ಅನಂತರ ವಾರ್ಧಕ್ಯವು ಉಂಟಾಗುವುದು. ಈ ಅವಸ್ಥಾ ಬದಲಾವಣೆಗಳಲ್ಲಿ ಬಾಲ್ಯದ ದೇಹ ನಾಶವಾಗಿ ಯವ್ವನಾವಸ್ಥೆಯ ದೇಹ ಬರುತ್ತದೆ. ಅದೇ ರೀತಿ ಯವ್ವನಾವಸ್ಥೆಯ ದೇಹ ನಾಶವಾಗಿ ವಾರ್ಧಕ್ಯ ದೇಹ ಬರುತ್ತದೆ. ಈ ದೇಹ ಬದಲಾವಣೆಯಾಗುವಾಗ ಮನುಷ್ಯ ದುಃಖಿಸುವುದಿಲ್ಲ. ದೇಹ ನಾಶವಾಗುವುದಕ್ಕಾಗಿಯೇ ದುಃಖಿಸುವುದಾದರೆ ಈ ಅವಸ್ಥಾ ಬದಲಾವಣೆಗಳಲ್ಲೂ ಕೂಡ ದೇಹ ನಾಶವಾಗುವಾಗ ದುಃಖಿಸಬೇಕು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಸಂತೋಷವನ್ನು ವ್ಯಕ್ತಪಡಿಸುತ್ತಾನೆ. ಒಂದು ದೇಹಹೋದರೆ ತಕ್ಷಣ ಇನ್ನೊಂದು ದೇಹ ಬರುತ್ತದೆ ಎಂಬ ಸಮಾಧಾನವನ್ನು ಹೇಳಿದರೆ ಅದೇ ರೀತಿ ದೇಹ ನಾಶದಲ್ಲೂ ಕೂಡ ಮುಂದಿನ ಜನ್ಮದಲ್ಲಿ ಇನ್ನೊಂದು ದೇಹ ಬಂದೇ ಬರುತ್ತದೆ. ಆದ್ದರಿಂದ ಪ್ರಕೃತ ಬಂಧುಗಳ ದೇಹವು ಯುದ್ಧದಲ್ಲಿ ನಷ್ಟವಾದರೆ ಇನ್ನೊಂದು ದೇಹ ಬರುವ ಕಾರಣ ಹಾಗೂ ಯಾವುದಾದರೂ ಒಂದು

(......13ನೇ ಪುಟದಲ್ಲಿ)

ಆತನನ್ನು ನಂಬಿ ಕೆಟ್ಟವರಿಲ್ಲ.

ಪ್ರವಚನ ಮಾಲಿಕೆ

ಭಾಗ–11

# ವಿದುರನೀತಿ

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ,

ಬರಹಃ ಕೃಷ್ಣಾ

ನಮ್ಮಲ್ಲಿ ಜೀವನಚಕ್ರ ಎಂದು ಕರೆಯುವುದುಂಟು. ಬ್ರಹ್ಮನು ಆ ಜೀವನ ಚಕ್ರದ ಒಂದೊಂದು ಅರದಲ್ಲಿ ಒಂದೊಂದು ಪ್ರಾಣಿಯನ್ನು ಇಟ್ಟನು. ಏನು ತೃಪ್ತಿ ಕಾಣದೆ ಕೊನೆಗೆ ಮಾನವನನ್ನು ಸೃಷ್ಟಿಸಿ ಆ ಚಕ್ರದ ಮೇಲೆ ಇಟ್ಟನು. ಚಕ್ರ ತಿರುಗಲು ಪ್ರಾರಂಭಿಸಿದಾಗ ಸಹಜವಾಗಿ ಮೇಲಿನ ಅರದಲ್ಲಿದ್ದದ್ದು ಕೆಳಗೆ  ಬಂದಿತು. ಚಕ್ರದ ಮೇಲಿನ ಮನುಷ್ಯ ಈಗ ಕೆಳಗೆ ಹೋದನು. ಕೆಳಗಿದ್ದ ಪ್ರಾಣಿಗಳೆಲ್ಲ ಈಗ ಮೇಲೆ ಬಂದವು. 'ನಾನು ನನ್ನದು' ಇಲ್ಲದಿರುವ ಪ್ರಾಣಿಗಳು ಈ ದಿವಸ ಮನುಷ್ಯನಿಗಿಂತ ಚೆನ್ನಾಗಿ ಬದುಕಿಕೊಂಡಿದ್ದಾವೆ. ಮನುಷ್ಯನು ಅವನತಿಯ ಕಡೆಗೆ ಹೋಗುತ್ತಿದ್ದಾನೆ.

**ಏಕಯಾ ದ್ವೇ ವಿನಿಶ್ಚಿತ್ಯ**–ಚತುರ್ಮುಖಬ್ರಹ್ಮನು ಮಾನವನನ್ನು ಸೃಷ್ಟಿ ಮಾಡಿ ಇತರ ಪ್ರಾಣಿಗಳಿಗಿಂತ ಅವನನ್ನು ಎತ್ತರದಲ್ಲಿ ಇಡುವ ಉದ್ದೇಶದಿಂದ ಮಾನವನಿಗೆ ಒಂದು ವಿವೇಕವನ್ನು ಕೊಟ್ಟ. ಆ ಒಂದು ವಿವೇಕದಿಂದ ಎರಡನ್ನು ತೀರ್ಮಾನ ಮಾಡಬೇಕು. ನ್ಯಾಯ–ಅನ್ಯಾಯ, ಸತ್ಯ–ಸುಳ್ಳು, ಇವುಗಳ ವಿವೇಚನೆ ಮಾಡುವುದು ಒಬ್ಬ ಮಾನವನ ಕರ್ತವ್ಯ. ಧೃತರಾಷ್ಟ್ರ, ನಿನಗಿರುವ ವಿವೇಚನೆಯಲ್ಲಿ ಸರಿಯೋ, ತಪ್ಪೋ ಎಂದು ನೋಡು. ತಂದೆ ಇಲ್ಲದ ಪಾಂಡವರನ್ನು, ತನ್ನ ಮಕ್ಕಳಂತೆ ನೋಡಿಕೊಳ್ಳದೆ, ಸ್ವಯಂ ಧುರ್ಯೋಧನನಿಗೆ ಪಗಡೆ ಆಟ ಆಡಲು ಬಾರದಿದ್ದರೂ, ಶಕುನಿಯನ್ನು ಮುಂದಿಟ್ಟು ಮೋಸದಿಂದ ಆಟ ನಡೆಯುವುದು ಗೊತ್ತಿದ್ದೂ, ಪಾಂಡವರನ್ನು ಕಾಡಿಗೆ ಅಟ್ಟಿದೆಯಲ್ಲವೆ?ನಿನಗೆ ವಿವೇಚನ ಶಕ್ತಿ ಇದೆ ಎಂದು ಹೇಳುವುದೋ ಇಲ್ಲವೆಂದು ಹೇಳುವುದೋ? ವಿವೇಚನ ಶಕ್ತಿ ಇಲ್ಲವೆಂದಾದರೆ ಕುರುವಂಶಕ್ಕೆ ಅವಮಾನ. ಆದ್ದರಿಂದ ಮಾನವನೆಂದಾದ ಮೇಲೆ ತನ್ನಲ್ಲಿದ್ದ ವಿವೇಚನ ಶಕ್ತಿಯನ್ನು ಬೆಳೆಸಿಕೊಂಡು, ತಾನು ಮಾಡಿರತಕ್ಕಂತದ್ದು ತಪ್ಪೋ ಒಪ್ಪೋ ಎಂದು ವಿಮರ್ಶೆ ಮಾಡಬೇಕು. ಧೃತರಾಷ್ಟ್ರ, ನಮಗೆಲ್ಲರಿಗೂ ಶಾಸ್ತ್ರ  ಎನ್ನತಕ್ಕಂತದ್ದು ಒಂದೇ. ಆ ಒಂದು ಶಾಸ್ತ್ರದಿಂದ ಎರಡನ್ನು ತೀರ್ಮಾನಿಸಬೇಕು. ಪಾಪ–ಪುಣ್ಯ, ಸ್ವರ್ಗ–ನರಕ, ಮೋಕ್ಷ–

ಆದ್ದರಿಂದ ಶ್ರೀ ಕೃಷ್ಣನನ್ನು ಸರ್ವೋತ್ತಮನೆಂದು ತಿಳಿದು ಆರಾಧಿಸಬೇಕು

ಅಂದಃತಮಸ್ಸನ್ನು ಹೇಳವುದು ಒಂದೇ ಶಾಸ್ತ್ರ. ಇದನ್ನು ಶಾಸ್ತ್ರದಿಂದ ತೀರ್ಮಾನ ಮಾಡಬೇಕು.

**ತ್ರೀನ್ ಚತುರ್ಭಿಃ**– ಅಂದರೆ ಯಾವುದು ಮೂರು? ಬೇಕಾದವರು, ಬೇಡದವರು. ಉದಾಸೀನರು. ನಾವು ತ್ರಿವಿಧ ಜೀವರೆಂದು ಹೇಳುತ್ತೇವೆ. ಮೋಕ್ಷಕ್ಕೆ ಬೇಕಾದವರು, ಬೇಡದವರು, ಮೋಕ್ಷದ ಬಗ್ಗೆ ಉದಾಸೀನರು. ಹಾಗೆಯೇ ಅಂಧಃ ತಮಸ್ಸಿಗೆ ಬೇಕಾದವರು, ಬೇಡದವರು, ಅಂಧಃತಮಸ್ಸಿನ ಬಗ್ಗೆ ಉದಾಸೀನರು. ಸಮಾಜದಲ್ಲಿಯೂ ಇಂತಹ ಮೂರು ರೀತಿಯ ಜನರನ್ನು ಕಾಣಬಹುದು. ಒಬ್ಬ ರಾಜನಾದವನು ಎಲ್ಲರನ್ನೂ ತನ್ನವರನ್ನಾಗಿ ಮಾಡಿಕೊಳ್ಳಬೇಕು. ಬೇಕಾದವರಂತೂ ತನಗೆ ಇದ್ದೇ ಇರುತ್ತಾರೆ. ಬೇಡದವರನ್ನು–ಯಾಕೆ ಬೇಡವೆಂದು, ಅವರಿಗೆ ತನ್ನ ಮೇಲೆ ದ್ವೇಷದ ಕಾರಣವನ್ನು ತಿಳಿದು, ವಿಮರ್ಶೆಮಾಡಿ, ಅದಕ್ಕೆ ಪರಿಹಾರವನ್ನು ಮಾಡಿ ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳಬೇಕು. ಉದಾಸೀನರನ್ನು ನಾಲ್ಕು ವಿಧದಿಂದ ತನ್ನವರನ್ನಾಗಿ ಮಾಡಿಕೊಳ್ಳಬೇಕು. ಸಾಮ, ದಾನ, ಬೇಧ, ದಂಡ– ಈ ನಾಲ್ಕರಿಂದ ಮೂರು ರೀತಿಯ ಜನರನ್ನು ಹಿಡಿತಕ್ಕೆ ತಂದುಕೊಳ್ಳಬೇಕು. ಸಾಮ ಎಂದರೆ ರಾಗಕ್ಕೆ ಹೆಸರು. ಸಾಮವೇದವು ಒಂದು ರಾಗದಿಂದ ಋಕ್ಕನ್ನು ಹೇಳುತ್ತದೆ. ಆದ್ದರಿಂದ ಒಬ್ಬ ರೇಗಾಡಿದರೆ, ಅವನನ್ನು ಚೆನ್ನಾಗಿ, ಬೈಯದೆ ಸ್ವಲ್ಪ ರಾಗದಿಂದ ಮಾತಾಡಿದರೆ ಅವನು ನಿಮ್ಮ ಹಿಡಿತಕ್ಕೆ ಬರುತ್ತಾನೆ. ಇನ್ನೂ ಹಿಡಿತಕ್ಕೆ ಬರದಿದ್ದರೆ ಸ್ವಲ್ಪ ದಾನ ಮಾಡಿ. ಅದಕ್ಕೂ ಜಗ್ಗದಿದ್ದಲ್ಲಿ, ಅವನ ಮತ್ತು ಅವನಿಗೆ ಬೇಡವಾದ್ದದ್ದನ್ನು ಹೇಳಿಕೊಡುವ ಜನರ ಮಧ್ಯ 'ಬೇಧ' ಭಿನ್ನಾಭಿಪ್ರಾಯ ತನ್ನಿ. ಇವನು ಜಗ್ಗುತ್ತಾನೆ. ಅದಕ್ಕೂ ಜಗ್ಗಲಿಲ್ಲವಾದರೆ ಕೊನೆಗೆ ದಂಡ ಪ್ರಯೋಗ ಮಾಡಿ ಅವನನ್ನು ಹಿಡಿತಕ್ಕೆ ತಂದುಕೊಳ್ಳಬೇಕು. ಧೃತರಾಷ್ಟ್ರ, ಈ ನಾಲ್ಕು ಉಪಾಯಗಳನ್ನು ರಾಜನಾದವನು ಇಟ್ಟುಕೊಂಡರೆ ರಾಜ್ಯ ಬೆಳೆಸಲು ಸಾಧ್ಯವಾಗುತ್ತದೆ. ಇನ್ನೊಂದು ರೀತಿಯಲ್ಲಿ ನೋಡುವುದಾದರೆ, ಧರ್ಮ, ಅರ್ಥ, ಕಾಮ, ಮೋಕ್ಷ ಎನ್ನತಕ್ಕಂತಹ ನಾಲ್ಕರಿಂದ ಬಾಲ್ಯ, ಯೌವ್ವನ, ವಾರ್ಧಕ್ಯ– ಈ ಮೂರನ್ನು ಹಿಡಿತದಲ್ಲಿ ಇಟ್ಟುಕೋ. ಧರ್ಮಾಚರಣೆಯ ಮೂಲಕ ಬಾಲ್ಯವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಯೌವ್ವನದಲ್ಲಿ ವಿದ್ಯಾಭ್ಯಾಸ ಮಾಡಿ ಅರ್ಥ (ದುಡ್ಡು) ಸಂಪಾದನೆ ಮಾಡಬೇಕು. ವಾರ್ಧಕ್ಯದಲ್ಲಿ ನಾವು ಮುನಿಗಳ ವೃತ್ತಿಯಲ್ಲಿ ಇರಬೇಕು. ಭಗವಂತನ ತಿಳುವಳಿಕೆಯ ಕಾಮನೆಯನ್ನು ಸಂಪಾದನೆ ಮಾಡಬೇಕು. ಕೊನೆಗೆ ಈ ಮೂರು ಅವಸ್ಥೆಯಿಂದ ನಾಲ್ಕನೆಯದಾದ ಮೋಕ್ಷವನ್ನು ಪಡೆಯಬೇಕು. ★

**ಕೃಷ್ಣನ ಕಥೆಯನ್ನು ಕೇಳುತ್ತಿರಬೇಕು.**

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ ಪ್ರವಚನ:ಬನ್ನಂಜೆ ಗೋವಿಂದಾಚಾರ್ಯ

ಅಂ. ಆಃ ಬಿಟ್ಟು ಎಲ್ಲ ಸ್ವರಗಳು ನಾದಜನ್ಯಗಳು. ವರ್ಣಾಕ್ಷರದ ಕೊನೆಯ ಮೂರು ಅಕ್ಷರಗಳು ಅಂದರೆ ಗ ಘ ಙ, ಜ ಝ ಞ, ಡ ಢ ಣ, ದ ಧ ನ, ಬ ಭ ಮ ಇವು ನಾದಜನ್ಯ ಶಬ್ದಗಳು. ಒಟ್ಟು 14 + 15 ಹೀಗೆ 29 ಅಕ್ಷರಗಳು ನಾದಜನ್ಯ ಶಬ್ದಗಳು. ಇವುಗಳನ್ನೇ ಘೋಷಾಕ್ಷರಗಳೆನ್ನುತ್ತಾರೆ. ಅಲ್ಲದೆ ಯರಲವಗಳು ಸಹ ನಾದಜನ್ಯ ಶಬ್ದಗಳು. ಕಖ, ಚಛ, ಟಠ, ತಥ ಪಫ ಹಾಗೂ ಶಷ ಸಹ ಶಬ್ದಗಳನ್ನು ಶ್ವಾಸಜನ್ಯ ಶಬ್ದಗಳೆನ್ನುತ್ತಾರೆ. ಇವನ್ನೇ ಅಘೋಷಾಕ್ಷರಗಳೆಂದೂ ಸಹ ಕರೆಯುತ್ತಾರೆ. ಇದರಲ್ಲಿ ಪುನಃ ಎರಡನೇ ಮಹಾಪ್ರಾಣಗಳಾದ ಘ, ಝ, ಢ ಧ ಭಗಳು ಪೂರ್ತಿ ನಾದಜನ್ಯ ಶಬ್ದಗಳಲ್ಲ. ಇವುಗಳು ಶ್ವಾಸಜನ್ಯವೂ ಹೌದು. ಆದ್ದರಿಂದ ಇವುಗಳನ್ನು ಉಭಯ ಪ್ರಧಾನ ಶಬ್ದಗಳೆನ್ನುತ್ತಾರೆ. ಇವುಗಳು ಶ್ವಾಸಜನ್ಯವು ಹೌದು ನಾದಜನ್ಯವೂ ಹೌದು. ಘ ಶಬ್ದಕ್ಕೆ ಹೆಚ್ಚು ಶ್ವಾಸ ಹಾಗೂ ನಾದವನ್ನು ಕೊಡಬೇಕಾಗುತ್ತದೆ. ಇದರ ಹಾಗೆ ಶ್ವಾಸಜನ್ಯ ಶಬ್ದಗಳಲ್ಲಿಯೂ ವ್ಯತ್ಯಾಸಗಳಿವೆ. 'ಕ' ಕ್ಕೆ ಎಷ್ಟು ಶ್ವಾಸದ ಒತ್ತಡಬೇಕೋ 'ಖ' ಕ್ಕೆ ಅದಕ್ಕಿಂತ ಹೆಚ್ಚು ಗಾಳಿಯ ಒತ್ತಡಬೇಕು. ಮಹಾಪ್ರಾಣಗಳಿಗೆ ಹೆಚ್ಚು ಶ್ವಾಸಪ್ರಧಾನ ಶಬ್ದಗಳೆನ್ನುತ್ತಾರೆ. 'ಕ' ಕ್ಕಿಂತ 'ಖ' ಹೆಚ್ಚು ಶ್ವಾಸಜನ್ಯ ಇದರಂತೆ 'ಚ' ಕ್ಕಿಂತ 'ಛ' ಹೆಚ್ಚು ಶ್ವಾಸಜನ್ಯ. ಅಲ್ಲದೆ ಗ ಕ್ಕಿಂತ ಘ ಹೆಚ್ಚು ಘೋಷಾಕ್ಷರ. ಪೇಟ್ಲೆಯ ತೂತು ದೊಡ್ಡದಾಗಿದ್ದರೆ ದೊಡ್ಡ ಶಬ್ದ ಬರಬೇಕಾದರೆ ದೊಡ್ಡ ಕಾಯಿ ಹಾಗೂ ಹೆಚ್ಚು ಬಲಪ್ರಯೋಗ ಮಾಡಬೇಕಾಗುತ್ತದೆ. ಇದರ ಹಾಗೆ 'ಕ್ಷ' ಶಬ್ದ ಹೇಳಬೇಕಾದರೆ ಕಂಠದ ನಾಳಗಳು ಅರಳಿದಾಗ ಗಾಳಿಗೆ ಬೇಕಾದಷ್ಟು ಸ್ಥಳ ಸಿಕ್ಕಿ ನಾದ ಕಮ್ಮಿ ಬರುತ್ತದೆ. ನಾದ ಹೆಚ್ಚಾಗಬೇಕಾದರೆ ಗಾಳಿಯ ಪ್ರಮಾಣವು ಹೆಚ್ಚಿಸಿ ಒತ್ತಡವನ್ನು ಸಹ ಹೆಚ್ಚಿಸಿದಾಗ ಮಾತ್ರ ಘೋಷಾಕ್ಷರಗಳೆನಿಸಿದ ಘ, ಝ ಇತ್ಯಾದಿಗಳನ್ನು ಸರಿಯಾಗಿ ಹೇಳಬಹುದು. ಇವಿಷ್ಟು ಒಳಗಿನ ಪ್ರಯತ್ನಗಳು.

ಬಾಹ್ಯ ಪ್ರಯತ್ನಗಳೆಂದರೇನು? ಎನ್ನುವುದನ್ನು ತಿಳಿದುಕೊಳ್ಳಬೇಕು. ಅ ಆ ಉಚ್ಚರಿಸುವಾಗ ತುಟಿಗಳು ಅತ್ಯಂತ ವ್ಯಸ್ತವು ಆಗಬಾರದು. ತೀರ ಅಗಲಿಸದೆ, ತೀರ ಸಂಕೋಚಿಸದೆ ಹೇಳಬೇಕು. ಸ್ವಲ್ಪ ತುಟಿ ತೆಗೆದು ಉಚ್ಚರಿಸಬೇಕು. ಸಾಯಂಕಾಲ ಅರಳಿದ

ಅವರಿಗೆ ಅರ್ಪಿಸಿದ ಪವಿತ್ರಾನ್ನವನ್ನು ಸ್ವೀಕರಿಸಬೇಕು

ಮಲ್ಲಿಗೆ ಮೊಗ್ಗಿನ ತರ ತುಟಿಗಳನ್ನು ಅರಳಿಸಿ ಅ ಆ ಕಾರವನ್ನು ಉಚ್ಚರಿಸಬೇಕು. ಇ ಈ ಉಚ್ಚರಿಸಿದಾಗ ನಾಲಿಗೆಯ ಎರಡು point ಗಳು ದವಡೆಯ ಬುಡವನ್ನು ಸ್ಪರ್ಶಿಸುತ್ತವೆ. ಉಊ ಉಚ್ಚರಿಸುವಾಗ ತುಟಿಗಳು ಮೊಗ್ಗಿನ ಹಾಗೆ ಸಂಕೋಚಗೊಳ್ಳುತ್ತವೆ. ಋ ೠ ಲ್ ಗಳನ್ನು ಉಚ್ಚರಿಸುವಾಗ ನಾಲಿಗೆ ಹಲ್ಲುಗಳನ್ನು ಸ್ಪರ್ಷಿಸುತ್ತದೆ. ಹೀಗೆಯೇ ಅಂ ಎಂಬುದು ಮೂಗಿನಿಂದ ಅಃ ಎಂಬುದು ಕಂಠದಿಂದ ಉಚ್ಚರಿಸಬೇಕು. ಅಂ ಉಚ್ಚರಿಸುವಾಗ ತುಟಿ ಮುಚ್ಚಿಕೊಳ್ಳುತ್ತದೆ. ಅಃ ಉಚ್ಚರಿಸುವಾಗ ತುಟಿಗಳು ತೆರೆದುಕೊಳ್ಳುತ್ತವೆ. ಕವರ್ಗ ಉಚ್ಚರಿಸುವಾಗ ನಾಲಿಗೆಯ ಬುಡದಲ್ಲಿ ಸ್ಪಂದನ ಆಗುತ್ತದೆ. ಚ ವರ್ಗ ಹೇಳುವಾಗ ನಾಲಿಗೆ ದವಡೆಯನ್ನು ಮುಟ್ಟುತ್ತದೆ. ಟ ವರ್ಗ ಹೇಳುವಾಗ ನಾಲಿಗೆ ಶಿರಸ್ಸನ್ನು ಮುಟ್ಟಿ ಮೂಗಿನಿಂದ ಸ್ವಲ್ಪ ಸ್ವರ ಬರುತ್ತದೆ. ಅಲ್ಲದೆ ನಾಲಿಗೆ ದೋಣಿಯ ಆಕಾರವನ್ನು ತಾಳುತ್ತದೆ. ತವರ್ಗ ಹೇಳುವಾಗ ನಾಲಿಗೆ ಮೇಲಿನ ದಂತಕ್ಕೆ ಸ್ಪರ್ಷಿಸುತ್ತದೆ. ಪವರ್ಗ ಹೇಳುವಾಗ ತುಟಿಗಳು ಮುಚ್ಚಿ ತೆರೆಯುತ್ತದೆ. ಯಂ ಹೇಳುವಾಗ ಯಾವ ಗಂಭೀರವಾದ ಚಲನೆಯು ಉಂಟಾಗುವುದಿಲ್ಲ. ಲ ಹೇಳುವಾಗ ದಂತ ಮೇಲಿನ ಹಲ್ಲಿಗೆ ತಾಗುತ್ತದೆ. ರ ಹೇಳುವಾಗ ನಾಲಿಗೆ ಶಿರಸ್ಸನ್ನು ಸ್ವಲ್ಪ ಮುಟ್ಟುತ್ತದೆ. ವ ಹೇಳುವಾಗ ನಾಲಿಗೆ ಕೆಳಗಿನ ದಂತವನ್ನು ಸ್ವಲ್ಪ ಸ್ಪರ್ಷಿಸುತ್ತದೆ. ಹೀಗೆ ಹ ಕಾರ ಕಂಠದಿಂದ ಉಚ್ಚರಿಸಲ್ಪಡುತ್ತದೆ. ವರ್ಗದ ಕೊನೆಯ ಅಕ್ಷರಗಳನ್ನು ಅನುನಾಸಿಕಗಳೆನ್ನುತ್ತಾರೆ; ಅಲ್ಲದೆ ಜಿಹ್ವಾಮೂಲವೂ ಹೌದು. ಮಕಾರಕ್ಕೆ ಮೂಗು ಸಹ ಸ್ಥಾನವಾಗುತ್ತದೆ. ಇವುಗಳನ್ನೆಲ್ಲವನ್ನೂ ಯಾವನು ತಿಳಿದುಕೊಂಡಿರುತ್ತಾನೋ ಅವನು ಬಲಿಷ್ಠ ಎಂದೆನಿಲ್ಪಡುತ್ತಾನೆ. ಅವನು ಬಲವನ್ನು ತಿಳಿದುಕೊಂಡಿರುತ್ತಾನೆ. ಇದು ಇಲ್ಲದಿದ್ದರೆ ಅವನು ದುರ್ಬಲ.

ಇನ್ನು 'ಸಾಮ ಸಂತಾನಃ' ಎಂದರೆ ಏನು ಅರ್ಥ ಎಂದು ತಿಳಿಯೋಣ. ಅಕ್ಷರಗಳನ್ನು ವಿಶೇಷವಾಗಿ ಸಂಯೋಜಿಸಿದಾಗ ಶಬ್ದ ಆಗುತ್ತದೆ. ಮನೆ ಎಂಬ ಶಬ್ದ ಉಂಟಾಗಬೇಕಾದರೆ ಮಕಾರ, ಅಕಾರ, ನಕಾರ ಮತ್ತು ಏಕಾರಗಳನ್ನು ಕ್ರಮವಾಗಿ ಸಂಯೋಜಿಸಬೇಕು. ಇದೇ ಕ್ರಮದಲ್ಲಿ ಪದಗಳನ್ನು ಸಂಯೋಜಿಸಿದಾಗ ಸಮಾನವಾದ purpose ಬರುತ್ತದೆ. ಸಮಾನವಾದ ಉದ್ದೇಶದಿಂದ ಒಂದು ವಸ್ತು ಹೇಳುವಾಗ ಶಬ್ದ ಆಗುತ್ತದೆ. ಈ ರೀತಿಯ ಸಾಮ (ಶಬ್ದ)ವನ್ನು ಯಾಕೆ ತಿಳಿದುಕೊಳ್ಳಬೇಕು? ನದೀ ಹಾಗೂ ದೀನ ಎರಡೂ ಶಬ್ದಗಳು ಅಕ್ಷರಗಳ ದೃಷ್ಟಿಯಿಂದ ಒಂದೇ. ಆದರೆ ಅರ್ಥದ ದೃಷ್ಟಿಯಿಂದ ಮಾತ್ರ ಬೇರೆ. ಅಕ್ಷರಗಳ ಸಮತೆ ಭಿನ್ನವಾಗಿದೆ. ಆದ್ದರಿಂದ ಅರ್ಥವು ಭಿನ್ನವಾಗಿರುತ್ತದೆ.

**(ಸಶೇಷ)**

**ಶ್ರೀಕೃಷ್ಣನ ಮೂರ್ತಿಯನ್ನು ಸಂದರ್ಶಿಸಬೇಕು**

# ಆ ಮುಸ್ಲಿಂ ರಾಜನೇ ಕೊಟ್ಟಿದ್ದಿರಬಹುದೇ?

ಸಂಗ್ರಹ: ಸಗ್ರಿ

ಬದರಿಗೆ ಶಿಷ್ಯ ಸಹಿತರಾಗಿ ಯಾತ್ರೆ ನಡೆಸುತ್ತಿದ್ದ ಶ್ರೀಮಧ್ವಾಚಾರ್ಯರು ದೋಣಿಯ ವ್ಯವಸ್ಥೆಯಿಲ್ಲದ ಒಂದೆಡೆ ಗಂಗಾನದಿಯ ನೀರಿನ ಮೇಲೆಯೇ ಶಿಷ್ಯ ಸಹಿತರಾಗಿ ದಾಟಿ ರಾಜನ ಸೈನಿಕರ ಬೆದರಿಕೆಗೆ ಸ್ವಲ್ಪವೂ ಮಣಿಯದೆ ಮುಂದುವರಿದುದನ್ನು ಕಂಡ ಮುಸ್ಲಿಂರಾಜ ಆಚಾರ್ಯರ ಧೈರ್ಯಾದಿಗಳನ್ನೂ, ಮುಸ್ಲಿಂ ಭಾಷೆಯಲ್ಲೇ ದೇವರ ಸರ್ವೋತ್ತಮತ್ವವನ್ನು ಸರಳವಾಗಿ ಸಮರ್ಥಿಸಿದುದನ್ನೂ ಮೆಚ್ಚಿಕೊಂಡು ತನ್ನ ರಾಜ್ಯದ ಒಂದು ಭಾಗವನ್ನೇ ಉಡುಗೊರೆಯಾಗಿ ದಾನ ಮಾಡಿದ ಎಂದು ಅವರ ಚರಿತ್ರೆಯಲ್ಲಿ ಉಲ್ಲೇಖಗೊಂಡಿದೆ. ಬದರಿಗೆ ಪಯಣಿಸುತ್ತಿದ್ದ ಆಚಾರ್ಯರು ಪ್ರಾಯಶಃ ಆಗ ಆ ಭೂಮಿಯ ಭಾಗವನ್ನು ಸ್ವೀಕರಿಸಿರಲಿಕ್ಕಿಲ್ಲ. ಆ ಖಿಲ್ಜಿರಾಜನೇ ವರ್ಕಾಡಿಯ ಮುಸಲ್ಮಾನನಾಗಿ ಹುಟ್ಟಿ ಅವತ್ತು ಏನು ದಾನ ಮಾಡಿದ್ದ ಭೂಮಿಯ ಭಾಗವನ್ನು ಶ್ರೀವಿದ್ಯಾಧೀಶತೀರ್ಥರಲ್ಲಿ ಸನ್ನಿಹಿತರಾಗಿರುವ ಶ್ರೀಮಧ್ವಾಚಾರ್ಯರಿಗೆ ದಾನ ಮಾಡಿದ್ದಿರಲೂಬಹುದು.

ಅದಮಾರುಮಠದ ಶ್ರೀವಿಶ್ವಪ್ರಿಯತೀರ್ಥರು ಏಕವಾಟದ ಶ್ರೀವಿಷ್ಣುಮೂರ್ತಿ ದೇವಾಲಯದಲ್ಲಿ ನಡೆದ ಮಧ್ವನವಮಿಉತ್ಸವದ ಅಧ್ಯಕ್ಷತೆ ವಹಿಸಿ ಹೀಗೆ ಅಭಿಪ್ರಾಯಪಟ್ಟರು.

ದೇವಾಲಯಕ್ಕೆ ಬಂದಾಗ ದೇವರಲ್ಲಿ ಅದು ಇದು ಕೊಡು ಎನ್ನುವ ಬದಲು ನಿನ್ನನ್ನೇ ಕೊಡು ಎನ್ನಬೇಕೆಂದೂ, ಹಿಂದುಗಳಲ್ಲಿ ಅನೇಕ ದೇವತೆಗಳ ಹಾಸ್ಯಾಸ್ಪದ ವಿಚಾರಕ್ಕೆ ವೈದಿಕವಾಙ್ಮಯದ ಆಧಾರದಲ್ಲಿ ಏಕದೇವತಾವಾದದ ಮೆರುಗು ಕೊಟ್ಟು ಪರಿಷ್ಕರಿಸಿದವರು ಶ್ರೀಮಧ್ವರೆಂದೂ ಶ್ರೀಪಾದರು ಪ್ರತಿಪಾದಿಸಿದರು.

ವಿದ್ವಾಂಸರ ಪ್ರವಚನ ಮಾಲಿಕೆಯಲ್ಲಿ ಸಗ್ರಿ ರಾಘವೇಂದ್ರ ಉಪಾಧ್ಯಾಯರು ರೋಗರುಜಿನಗಳ ರೂಪದಲ್ಲಿ ದೇವರು ನೀಡುವ ದಂಡನೆ ಅವನ ಅನುಗ್ರಹರೂಪದಿಂದ ಸ್ವೀಕರಿಸಬೇಕೆಂದು ಸಂದೇಶಿಸಿರುವ ಶ್ರೀಮಧ್ವರ ಸಂದೇಶವನ್ನು, ದಿನೇಶಭಟ್ಟರು ಭಗವದ್ ಭಕ್ತಿಗೆ ಪೂರಕವಾಗಿ ಶ್ರೀಮಧ್ವರು ತಿಳಿಸಿರುವ ಪಂಚಭೇದಗಳ ವಿಚಾರವನ್ನು ಪ್ರತಿಪಾದಿಸಿದರು.

ಯುವವಿದ್ವಾಂಸರಾದ ವಾಸುದೇವ ಉಪಾಧ್ಯಾಯ ಭೂತವೊಂದು ಮಗುರೂಪದಲ್ಲಿದ್ದ ಶ್ರೀವಾಸುದೇವನ ಮಹತ್ವವನ್ನು ಸಾರಿದ ವಿಚಾರವನ್ನು , ರಾಘವೇಂದ್ರ ಆಚಾರ್ಯ ತಂತ್ರಸಾರಸಂಗ್ರಹದಲ್ಲಿ ಆಚಾರ್ಯರು ಪರಿಚಯಿಸಿರುವ ಅಷ್ಟ ಮಹಾಮಂತ್ರಗಳ

(11ನೇ..ಪುಟಕ್ಕೆ)

ಇದು ಬರಿಯ ಮಾತಲ್ಲ. ಅನುಭಾವಿಗಳ ಅನುಭವದ ಮಾತು.

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

ಲೇಶ ಕಾಣೆನು ಜನನ ಮರಣದಿ
ಘಾಸಿಯಾದೆನು ನೊಂದೆನಕಟಾ
ಲೇಸೆನಿಸಿ ನೋಡಲು ಪರಾತ್ಪರ ವಸ್ತು ನೀನಾಗಿ ।
ನೀ ಸಲಹುವವನಲ್ಲವೇ ಕರು
ಣಾ ಸಮುದ್ರನು ನೀನಿರಲು ಕಮ
ಲಾಸನನ ಹಂಗೇನು ರಕ್ಷಿಸು ನಮ್ಮನನವರತ ॥೭೩॥

ನಾನು ನನ್ನ ಬದುಕಿನಲ್ಲಿ ಏನೂ ಒಳ್ಳೆಯದನ್ನು ಕಂಡಿಲ್ಲ. ಮತ್ತೆ ಮತ್ತೆ ಹುಟ್ಟುವುದು ಸಾಯುವುದು, ಇದರಲ್ಲಿ ನಾನು ದಣಿದೆ, ನೊಂದೆನಯ್ಯಾ! ಚೆನ್ನಾಗಿ ನೋಡಿದಾಗ ಪರಾತ್ಪರ ವಸ್ತುವಾಗಿ ನೀನೇ ಕಾಣುವಿ. ನೀನೇ ಎಲ್ಲರನ್ನು ಸಲಹುವವನಲ್ಲವೆ? ಕರುಣಾಸಾಗರ ನೀನು ರಕ್ಷಕನಾಗಿರುವಾಗ ಬ್ರಹ್ಮನ ಹಂಗೇನು? ರಕ್ಷಿಸು ಅನವರತ ನಮ್ಮನ್ನು.

## ಲೇಸಕಾಣೆನು ಜನನ ಮರಣದಿ

ಹುಟ್ಟುವುದು, ಮೂರುದಿನ ಬದುಕ್ಕಿದ್ದು ಸಾಯುವುದು. ಇದೇ ನನ್ನ ಪಾಡು, ಶ್ರೀಹರಿ, ಇದರಲ್ಲಿ ಏನು ಸೊಗಸಿದೆ, ಹೇಳು. ಬಾಲ್ಯದಲ್ಲಿ ಆಟ, ಯೌವ್ವನದಲ್ಲಿ ಹಾರಾಟ, ಮುಪ್ಪಿನಲ್ಲಿ ಹಾಯಾಗಿರುವುದು ಇನ್ನೇನು ಬೇಕೆನ್ನುವೆಯ? ಹುಟ್ಟುವುದಕ್ಕೆ ಮುನ್ನ ತಾಯಿಯ ಉದರದಲ್ಲಿ ಗರ್ಭಕೋಶದ ಚೀಲದೊಳಗೆ ಬಂದಿಯಾಗಿರುತ್ತೇನೆ. ಒಂದಿಷ್ಟು ಮಿಸುಕಾಡಲು ಸ್ವಾತಂತ್ರ್ಯವಿಲ್ಲ. ಬಾಯಿ ತೆರೆದು ಗಟ್ಟಿಯಾಗಿ ಅಳಲೂ ಅವಕಾಶವಿಲ್ಲ. ಅದಕ್ಕೆ ಹುಟ್ಟಿ ಕಣ್ಣು ಬಿಡುವುದಕ್ಕೆ ಮುನ್ನ ಒಂದೇ ಸವನೆ ಚೆನ್ನಾಗಿ ಅತ್ತು ಅತ್ತು ಬಳಿಕ ಸುಮ್ಮನಾಗುತ್ತೇನೆ. ಮರಣದಂಡನೆಗೊಳಗಾದ ವ್ಯಕ್ತಿಯನ್ನು ವಧಸ್ಥಾನಕ್ಕೊಯ್ಯುವಾಗ ಭೋಗಭಾಗ್ಯ ರಾಶಿರಾಶಿಯಾಗಿ ಬಂದರೆ ಆತ ಅದರಲ್ಲೇನು ಸೊಗಸು ಕಾಣಬಲ್ಲ? ಮೃತ್ಯು ಬಾಯಿ ತೆರೆದು ನುಂಗಲು ಸಿದ್ಧಳಾಗಿ ನಿಂತಿರುತ್ತಾಳೆ! ಓ, ಆ ಮರಣ ದುಃಖ! ಅಳುವುದಕ್ಕೂ ತ್ರಾಣವಿಲ್ಲ! ಮೂರ್ಛೆ ಬಂದಿರುತ್ತದೆ. ಮೂರ್ಛೆಯಲ್ಲಿ ನೋವು ಸಂಕಟ ಮರೆಯಾಗುವುದಿಲ್ಲ. ನೋವಲ್ಲದೆ ಇನ್ನೇನೂ ಇಲ್ಲದ ಅಸಹಾಯಕವಾದ ಅವಸ್ಥೆ ಅದು.

ಪ್ರತಿದಿನ ಆತನನ್ನು ಪೂಜಿಸಬೇಕು

ಬದುಕಿನ ಜಂಜಾಟದ ನಡುವೆಯೂ ಒಂದಿಷ್ಟು 'ಸುಖ' ಅನುಭವಿಸುವುದು ಜಾಣತನ ಎನ್ನುವಿಯ? ಅಲ್ಲ, ಅದು ದಡ್ಡತನ. ಈ ಸುಖ ಹೆಸರಿಗೆ ಮಾತ್ರ ಸುಖ. ದುಃಖವನ್ನೇ ಉಣ್ಣುತ್ತೇನೆ. ಮುಂದೆ ಸುಖ ಬಂದೀತೆಂಬ ಆಸೆಯಿಂದಲೆ ಬದುಕಿರುತ್ತೇನೆ. ಈ ನಿರೀಕ್ಷೆಯಲ್ಲಿಯೇ ಆಯುಷ್ಯವನ್ನು ಕಳೆಯುತ್ತೇನೆ. ನಿನ್ನನ್ನು ಮರೆಯುತ್ತೇನೆ. ಇದು ಎಲ್ಲಕ್ಕಿಂತ ದೊಡ್ಡ ಅನರ್ಥ. ಅದಕ್ಕೆ ಬಲಿಯಾಗುವುದು ನಿಜವಾಗಿ ದಡ್ಡತನ, ಜಾಣತನವಲ್ಲ. ನಿನ್ನನ್ನು ಮರೆತರೆ ಒಂದು ಜನ್ಮದಲ್ಲಿ ಕಡಿಮೆ ಎಂದರೆ ಮುಂದಿನ ಹತ್ತು ಜನ್ಮಗಳಿಗೆ ಬೇಕಾಗುವ ಕರ್ಮ ಮಾಡುತ್ತೇನೆ. ತಿರುಗಿ ಹುಟ್ಟುತ್ತೇನೆ. ಸಾಯುತ್ತೇನೆ.

## ಘಾಸಿಯಾದೆನು ನೊಂದೆನಕಟಾ!

ಈ ಜನನ ಮರಣಗಳಿಂದ ನಾನು ತುಂಬ ದಣಿದಿದ್ದೇನೆ. ನೊಂದಿದ್ದೇನೆ. ಅಯ್ಯೋ! ಎಂದಿದ್ದೇನೆ. ಅದಕ್ಕೆ ಪರಿಹಾರವನ್ನು ಮಾತ್ರ ಕಾಣದಾದೆ. ಮಾಡಿದ್ದುಣ್ಣೋ ಮಹಾರಾಯ ಎನ್ನುತ್ತಾನೆ ಬ್ರಹ್ಮ. ಅದು ನಾ ಬರೆದ ನಿನ್ನ ಹಣೆ ಬರಹ ಎನ್ನುತ್ತಾನೆ. ಸೃಷ್ಟಿಯಲ್ಲಿ ಎಲ್ಲವೂ ಕರ್ಮಾಧೀನ ಎನ್ನುತ್ತಾನೆ.

## ಲೇಸೆನಿಸಿ ನೋಡಲು ಪರಾತ್ಪರ ವಸ್ತು ನೀನಾಗಿ

ಚೆನ್ನಾಗಿ ವಿಚಾರ ಮಾಡಿ ನೋಡಿದಾಗ ಕರ್ಮ ಬಲು ಘೋರ, ಭಯಂಕರ. ಸೂಕ್ಷ್ಮ. ಕಣ್ಣಿಗೆ ಕಾಣದಂಥ ವಸ್ತು ಅದು. ಅದನ್ನು ನಾನು ಕಾಣಲಾರೆ. ಕಂಡು ತಕ್ಕ ನಿವಾರಣೋಪಾಯವನ್ನು ಕೈಗೊಳ್ಳಲಾರೆ. ಪ್ರಾಯಶ್ಚಿತ್ತ ಮಾಡಿದರೂ ಅದು ಸರಿಯಾಗಿ ಆಗದೆ ಇನ್ನಷ್ಟು ಕರ್ಮ ಹುಟ್ಟಲು ದಾರಿ ಮಾಡಿಕೊಡುತ್ತದೆ. ಕರ್ಮ ಒಂದು ಮುಳ್ಳಿನ ಬೇಲಿ. ಅದರ ಮೇಲೆ ಬಿದ್ದಿರುವ ನವಿರಾದ ಬಟ್ಟೆ ನಾನು. ಜಾಣತನದಿಂದ ಎತ್ತಬೇಕು. ಯಾರೂ ಇಲ್ಲ, ನೀನೆ ಅದಕ್ಕೆ ಶಕ್ತ. ಬೇರೆಲ್ಲ ದೇವರುಗಳೂ ಹೇಳುವುದಿಷ್ಟೆ.

**'ವರಂ ವರಯ ಭದ್ರಂ ತೇ ಋತೇ ಕೈವಲ್ಯಮಾತ್ಮನಃ'**

'ಇದೊಂದನ್ನು ಹೊರತು ಬೇರೇನಾದರೂ ಕೇಳು' ಎನ್ನುತ್ತಾರೆ. ಸಲಹುವವನು ನೀನೆ ಅಲ್ಲವೆ?

## ಕರುಣಾ ಸಮುದ್ರನು ನೀನಿರಲು ಕಮಲಾಸನನ ಹಂಗೇನು?

**'ತ್ವಮೇಕ ಆತ್ಮಾತ್ಮವತಾ ಮನಾದಿರನಂತಪಾರಃಕವಿರವ್ಯಯಾತ್ಮಾ'**

**ಕೃಷ್ಣನ ಪಾದದ ತುಳಸಿಯನ್ನು ಆಘ್ರಾಣಿಸಬೇಕು**

'ಬ್ರಹ್ಮದೇವ, ನೀನು ಅದ್ವಿತೀಯ, ಎಲ್ಲ ಜೀವಿಗಳ ಅಂತರ್ಯಾಮಿ. ಎಲ್ಲರನ್ನು ಸಂಸಾರದಿಂದಾಚೆಗೆ ದಾಟಿಸುವವ. ಸರ್ವಜ್ಞ, ಮುಕ್ತರಿಗೊಡೆಯ' ಎಂದು ಭಾಗವತ (7.3.30) ಹೇಳುತ್ತಿದ್ದರೂ ಆ ಬ್ರಹ್ಮನಿಗೂ ಮುಕ್ತಿ ಕೊಡುವವನು, ಅಂತರ್ಯಾಮಿ ನೀನು. ಕಾದ ಕಬ್ಬಿಣದಲ್ಲಿ ಬೆಂಕಿಯಂತೆ ಅವನೊಳಗೆ ನೀನು ಇರುವುದರಿಂದ ಅವನಿಗೆ ಈ ಹೊಗಳಿಕೆ. ನಿನ್ನನ್ನು ಮರೆತು ಸಂಸಾರದ ಕತ್ತಲಭಾವಿಯಲ್ಲಿ ಬಿದ್ದವರಿಗೆ ಮುನಿಸಿಕೊಳ್ಳದೆ ಸಹಾಯದ ಹಸ್ತವನ್ನು ಚಾಚುವ ಕರುಣಾಸಾಗರನು ನೀನು. ನಿನ್ನಾಜ್ಞೆಯಾದರೆ ಆ ಕಮಲಾಸನನೂ ನನ್ನನ್ನು ಎತ್ತ ಬಲ್ಲ, ನಿಜ. ಆದರೆ ಅವನನ್ನು ಒಲಿಸುವುದು ಕಷ್ಟ. **'ಕ್ಲೇಶೋಽಧಿಕತರಸ್ತೇಷಾಂ'**ಎಂದು ರಮಾ ಬ್ರಹ್ಮಾದಿಗಳ ಉಪಾಸನೆ ಕಷ್ಟ ಎನ್ನುತ್ತಿದೆ ಗೀತೆ. **'ನ ಹ್ಯಚ್ಯುತಂಪ್ರೀಣಯತೋ ಬಹ್ವಾಯಾಸಃ'** 'ನೀನು ಸುಲಭವಾಗಿ ಒಲಿಯುವೆ' ಎನ್ನುತ್ತಿದೆ ಭಾಗವತ. ಅದರಿಂದ ಕಮಲಾಸನನ ಹಂಗೇನು? ನೀನೇ ರಕ್ಷಿಸು. ★

---

(8ನೇ ಪುಟದಿಂದ)

ಹಿರಿಮೆಯನ್ನೂ, ಸಂತೋಷ ಭಟ್ ಪ್ರಶ್ನೋಪನಿಷತ್ತಿನಲ್ಲಿ ಬಂದ ಪ್ರಾಣದೇವರ ಮಹಿಮೆಯನ್ನೂ ತಮ್ಮ ಭಾಷಣದಲ್ಲಿ ತಿಳಿಸಿದರು. ಸುರೇಶಾಚಾರ್ಯ ಕಾರ್ಯಕ್ರಮವನ್ನು ನಿರೂಪಿಸಿರುವರು. ಶ್ರೀ ಎಂ.ಬಿ. ಪುರಾಣಿಕರು ಸ್ವಾಗತಿಸಿದರು. ಪುತ್ತಿಗೆ ಬಲರಾಮ ಭಟ್ಟರು ವಂದಿಸಿದರು.

ಶ್ರೀದಿನೇಶ ಭಟ್ಟರ ಪೌರೋಹಿತ್ಯದಲ್ಲಿ ವಾಯುಸ್ತುತಿ ಪುರಶ್ಚರಣ ಹೋಮ ನಡೆದಿತ್ತು. ಯೋಗದೀಪಿಕಾ ಹಾಗೂ ತತ್ವದೀಪಿಕಾದ ವಿದ್ಯಾರ್ಥಿಗಳ ವಾಯುಸ್ತುತಿ ಪುರಶ್ಚರಣ ಪ್ರಕ್ರಿಯೆಯ ಪಾರಾಯಣದೊಂದಿಗೆ ಶ್ರೀಮಹಾವಿಷ್ಣುದೇವಾಲಯದ ಮಧ್ವಗುರುಗಳ ಪ್ರತೀಕಕ್ಕೆ ಶ್ರೀವಿಶ್ವಪ್ರಿಯತೀರ್ಥರು ಮಧುವಿನ ಅಭಿಷೇಕ ನಡೆಸಿಕೊಟ್ಟರು. ಉಪನಿಷತ್ತುಗಳಲ್ಲಿ ಪ್ರಸ್ತುತಗಳಾದ ಪ್ರಾಣದೇವನ ನೂರಹತ್ತು ನಾಮಗಳ ಸಾಮೂಹಿಕ ಪಾರಾಯಣದೊಂದಿಗೆ ಶ್ರೀವಿಶ್ವಪ್ರಿಯತೀರ್ಥರು ದೇವಾಲಯದ ಪ್ರಾಣದೇವನಿಗೆ ಹಾಗೂ ಶ್ರೀಮಧ್ವಾಚಾರ್ಯರಿಗೆ ತುಲಸಿ, ಪುಷ್ಪಾರ್ಚನೆ ನಡೆಸಿದರು. ಅದಮಾರುಮಠದ ಶ್ರೀಚತುರ್ಭುಜ ಕಾಳಿಯಮರ್ದನ ಕೃಷ್ಣನ ಆರಾಧನೆಯನ್ನೂ ನೆರವೇರಿಸಿದರು.

ಏಕವಾಟದ ಮಹಾವಿಷ್ಣುವಿನ ಸನ್ನಿಧಿಯಲ್ಲಿ ಇದಂಪ್ರಥಮವಾಗಿ ನಡೆದಿರುವ ಮಧ್ವನವಮೀಮಹೋತ್ಸವದ ಸಂಯೋಜನೆಗೆ ಯಶಸ್ಸಿಗೆ ನಿಮಿತ್ತರಾದ ಸುರೇಶಾಚಾರ್ಯ, ಕೇಶವ ಜೋಗಿತ್ತಾಯ, ಎಂ.ಬಿ. ಪುರಾಣಿಕ ಹಾಗೂ ಊರಭಕ್ತರ ಸ್ಫೂರ್ತಿ, ಪ್ರೋತ್ಸಾಹಗಳು ಉಲ್ಲೇಖಾರ್ಹ. ★

**ಹಾಗೆಂದು ಉಳಿದ ದೇವತೆಗಳಲ್ಲಿ ತಿರಸ್ಕಾರ ಬೇಡ**

# ಪಲಿಮಾರಿನ ವಸಂತೋತ್ಸವ

ತ್ರೈಲೋಕ್ಯಗುರುಗಳಾದ ಶ್ರೀಮಧ್ವಾಚಾರ್ಯರ ನಿಜಶಿಷ್ಯಪ್ರವರರಾದ ಶ್ರೀಹೃಷೀಕೇಶತೀರ್ಥರ ಪರಂಪರೆಯಲ್ಲಿ ಇಪ್ಪತ್ತೈದನೆಯ ಯತಿವರ್ಯರಾಗಿ ಪೀಠವನ್ನಲಂಕರಿಸಿದ ಶ್ರೀರಘುಪ್ರವೀರತೀರ್ಥರ ತಪಸ್ಸಿಗೆ ಒಲಿದ ಘಟಿಕಾಚಲದ ಶ್ರೀಮುಖ್ಯಪ್ರಾಣದೇವರ ಆಡುಂಬೊಲವಾದ, ಮಂಗಳಾಷ್ಟಕಕರ್ತಾರರಾಗಿ ಪ್ರಖ್ಯಾತರಾದ ಶ್ರೀರಾಜರಾಜೇಶ್ವರತೀರ್ಥರು ಹಾಗೂ ಈ ಶತಮಾನದ ಶಕಪುರುಷರಾಗಿ ಮೆರೆದ ಪ್ರಾತಃಸ್ಮರಣೀಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರೇ ಮೊದಲಾದ ಯತಿವರೇಣ್ಯರ ತಪೋಭೂಮಿಯಾದ, ಶ್ರೀವೇದವ್ಯಾಸದೇವರ ನಿತ್ಯಸನ್ನಿಧಾನವಿರುವ, ಪಲಿಮಾರಿನ ಶ್ರೀಮಠದಲ್ಲಿ ಇದೇ ಬರುವ ಚೈತ್ರಶುದ್ಧ ತ್ರಯೋದಶೀಯಿಂದ ಪೂರ್ಣಿಮಾ ಪರ್ಯಂತ(ಏಪ್ರಿಲ್ 07 ರಿಂದ 09 ರವರೆಗೆ) ಹನುಮಜ್ಜಯಂತೀ ಮಹೋತ್ಸವ ನಡೆಯಲಿದೆ. ಇದೇ ಸಂದರ್ಭದಲ್ಲಿ ಪಲಿಮಾರಿನ ಶ್ರೀಮಠದಲ್ಲಿ ನಡೆಯುತ್ತಿರುವ ವೇದ–ವೇದಾಂತ–ಆಗಮ–ಜ್ಯೊತಿಷ್ಯ–ಪೌರೋಹಿತ್ಯವನ್ನು ಅಭ್ಯಸಿಸಿರುವ ವಿದ್ಯಾರ್ಥಿಗಳಿಗೆ ಉತ್ತರಶಾಂತಿ ಪುರಸ್ಸರವಾದ ಶ್ರೀಯೋಗದೀಪಿಕಾ ಗುರುಕುಲದ ಘಟಿಕೋತ್ಸವ ಮತ್ತು ಹರಿವಾಯುಗಳ ಗರಿಷ್ಠ ಮಹಿಮೆಗಳನ್ನು ಪೊಗಳುವ, ಭಗವಂತನ ನೀರಾಜನ ಮಂತ್ರವೆಂದೇ ಪ್ರಸಿದ್ಧವಾದ ಪವಮಾನಮಂತ್ರಗಳಿಂದ **ಅಷ್ಟೋತ್ತರಶತಪವಮಾನ ಹೋಮಗಳು** ನಡೆಯಲಿವೆ.

ಹಾಗೂ

ಬಹುಗ್ರಂಥಪ್ರಣೇತೃಗಳಾದ ಯತಿತತಿನಿರ್ವಾತೃಗಳಾದ, ವಿದ್ವದ್ವೃಂದವಿದ್ಯಾದಾತೃಗಳಾದ, ವಿದ್ಯಾಪೀಠ–ಮಧ್ವಮಠವೃಂದಸಂಸ್ಥಾಪಕರಾದ, ದೇಶಾದ್ಯಂತ ವಾಕ್ಯಾರ್ಥನಡೆಸಿ–ಪ್ರತಿವಾದಿಗಳನ್ನು ಜಯಿಸಿ ವಾದಿಭಯಂಕರರೆನಿಸಿದ, ಪರವಿದ್ಯೆಗೆ ಮಾನ್ಯತೆಯನ್ನು ತಂದುಕೊಟ್ಟು ಪರವಿದ್ಯೆಯಿಂದ ಮಾನ್ಯರಾದ ಶತಮಾನದ ಶಕಪುರುಷರೂ, ಜ್ಞಾನವೃದ್ಧರೂ, ಪ್ರಾತಃಸ್ಮರಣೀಯರೂ, ನಮ್ಮ ಗುರುಗಳೂ ಆದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ನವಮ ಆರಾಧನಾ ಮಹೋತ್ಸವವು ವೈಶಾಖ ಶುದ್ಧ ದಶಮೀಯಿಂದ ಚತುರ್ದಶೀ ಪರ್ಯಂತ (ಮೇ04 ರಿಂದ 08ರ ವರೆಗೆ) ನಡೆಯಲಿದೆ. ಗುರುಗಳ ಆರಾಧನಾ ಅಂಗವಾಗಿ ಮೇ 01 ರಿಂದ ಮೇ04 ರವರೆಗೆ ಪ್ರಸಿದ್ಧ ವಿದ್ವಾಂಸರಾದ ಎ.ಹರಿದಾಸಭಟ್ಟರಿಂದ **"ವಿಷ್ಣುತತ್ವ ವಿನಿರ್ಣಯ"** ಎಂಬ ಪಾಠವು ನಡೆಯಲಿದೆ. ಈ ಪರ್ವಕಾಲದಲ್ಲಿ ಶ್ರೀನಿವಾಸಕಲ್ಯಾಣ ಪರ್ವೋತ್ಸವ, ಶ್ರೀವೇದವ್ಯಾಸಜಯಂತೀ,

**ಪ್ರಾಣಿಗಳಲ್ಲಿ ದಯೆವುಳ್ಳವರಾಗಿರಿ**

ಶ್ರೀನರಸಿಂಹಜಯಂತೀ, ವಸಂತೋತ್ಸವಗಳು ಜರುಗಲಿವೆ.

ಪಲಿಮಾರಿನ ತಪಃಸ್ಥಳದಲ್ಲಿ, ವಸಂತ ಋತುವಿನ ಚೈತ್ರ-ವೈಶಾಖಗಳ ಪವಿತ್ರಕಾಲದಲ್ಲಿ ವಿಚಾರಗೋಷ್ಠೀ-ವಿದ್ವದ್ಗೋಷ್ಠೀ-ಪ್ರಸಿದ್ಧ ವಿದ್ವಾಂಸರುಗಳಿಂದ ಪ್ರವಚನಮಾಲಿಕೆ-ಧಾರ್ಮಿಕ-ಆಧ್ಯಾತ್ಮಿಕ ಚಿಂತನ ಕಾರ್ಯಕ್ರಮಗಳು ನಡೆಯಲಿವೆ. ವ್ಯಾಸ-ದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಗುರುಗಳ ಅಂತರ್ಗತ ಶ್ರೀ ರಾಮ-ಕೃಷ್ಣ-ವೇದವ್ಯಾಸದೇವರ ವಿಶೇಷಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

---

(.3ನೇ......ಪುಟದಿಂದ)

ದಿನ ಈ ದೇಹ ನಾಶವಾಗುವುದು ಅನಿವಾರ್ಯವಾದ ಕಾರಣ ಅದಕ್ಕಾಗಿ ದುಃಖಿಸುವುದು ವ್ಯರ್ಥ. ಧೀರನಾದ ಜ್ಞಾನಿಯಾದ ಪುರುಷನು ಇಂತಹ ಮೋಹವನ್ನು ಹೊಂದುವುದಿಲ್ಲ. ಧೀರನಾಗಿಯೂ ಜ್ಞಾನಿಯಾಗಿಯೂ ಇರುವ ನೀನು ಯಾಕಾಗಿ ನೋವನ್ನು ಹೊಂದುವಿ ಎಂದು ಶ್ರೀಕೃಷ್ಣನು ಅರ್ಜುನನಿಗೆ ಸಮಾಧಾನವನ್ನು ಹೇಳುತ್ತಾನೆ. ಇದಕ್ಕಾಗಿ ಇನ್ನೊಂದು ದೃಷ್ಟಾಂತವನ್ನು ತಿಳಿಸುತ್ತಿದ್ದಾನೆ. ಹಣವನ್ನು ಕೊಟ್ಟು ಅದಕ್ಕೆ ಪ್ರತಿನಿಧಿಯಾದ ಆಭರಣಗಳನ್ನು ಖರೀದಿ ಮಾಡಿದಾಗ ಕೈಯಲ್ಲಿದ್ದ ಹಣವು ಹೋಯಿತು ಎಂದು ಯಾರೂ ದುಃಖಪಡುವುದಿಲ್ಲ. ಹಣಕ್ಕೆ ಪ್ರತಿನಿಧಿಯಾಗಿ ಬೇರೆ ವಸ್ತು ದೊರಕಿತು ಎಂದು ಸಮಾಧಾನವನ್ನು ವ್ಯಕ್ತಪಡಿಸುತ್ತಾನೆ. ಅದರಂತೆ ಜೀರ್ಣವಾದ ದೇಹವು ನಾಶವಾಗಿ ಇನ್ನೊಂದು ನೂತನ ಶರೀರವು ಬರುವುದರಿಂದ ಸ್ವಲ್ಪ ಹಣ ಖರ್ಚುಮಾಡಿದ್ದಕ್ಕೆ ನೂತನ ಪೀತಾಂಬರ ಸಿಕ್ಕಿದರೆ ಹೇಗೆ ಸಂತೋಷವಾಗುತ್ತೋ ಹಾಗೇ ಪ್ರಕೃತದಲ್ಲಿ ಮರಣದ ವಿಷಯದಲ್ಲೂ ಜ್ಞಾನಿಯಾದವನು ಸಂತೋಷವನ್ನು ಪಡುತ್ತಾನೆ. ಮರಣಾನಂತರ ಇದಕ್ಕಿಂತ ಒಳ್ಳೆಯ ಶರೀರ ದೊರಕಿದರೆ ಸಂತೋಷಪಡುವುದು ಸರಿ. ಆದರೆ ಕರ್ಮಾಧೀನವಾಗಿ ಈ ದೇಹ ನಾಶವಾದ ಮೇಲೆ ಅತಿ ನೀಚವಾದ ನರಿ-ನಾಯಿ ಮುಂತಾದ ಯೋನಿಯಲ್ಲಿ ಜನ್ಮ ಸಂಭವವಾದರೆ ದುಃಖವಾಗುವುದಿಲ್ಲವೋ ಎಂಬ ಪ್ರಶ್ನೆ ಬಂದರೆ ಅದಕ್ಕೆ ಈ ರೀತಿಯಾಗಿ ಸಮಾಧಾನವನ್ನು ನೀಡಬಹುದು. ನೀಚವಾದ ನರಿ-ನಾಯಿ ಯೋನಿಯಲ್ಲಿ ಜನ್ಮವಾದರೂ ಕೂಡ ಹಿಂದಿನ ಜನ್ಮದ ಸ್ಮರಣೆ ಇಲ್ಲದ ಕಾರಣ ದುಃಖವಾಗುವ ಸಂಭವವಿಲ್ಲ. ಸಣ್ಣ ಬಾಲಕನ ಕಂಠದ ಅನರ್ಘ್ಯ ಮಾಲಿಕೆಯ ಬದಲಿಗಾಗಿ ಸಿಹಿಯನ್ನು ಕೊಟ್ಟಾಗ ಆ ಮಾಲಿಕೆಯ ಮಹತ್ವ ತಿಳಿಯದ ಮಗು ಅ ಕಂಠದ ಮಾಲಿಕೆಗಾಗಿ ಹೇಗೆ ದುಃಖ ಪಡುವುದಿಲ್ಲವೋ ಅದೇ ರೀತಿ ನೀಚ ಯೋನಿಯನ್ನು ಹೊಂದಿರತಕ್ಕಂತಹ ಜೀವನು ಹಿಂದಿನ ಜನ್ಮ ವೃತ್ತಾಂತವನ್ನು ತಿಳಿಯದಿದ್ದ ಕಾರಣ ದುಃಖಪಡುವುದಿಲ್ಲ. ★

**ಭಗವದ್ಗೀತೆ-ವಿಷ್ಣುಸಹಸ್ರನಾಮ-ಕೃಷ್ಣಾಷ್ಟೋತ್ತರವನ್ನು ಎಂದಿಗೂ ಬಿಡಬೇಡಿ**

# ಅಧರ್ಮಕ್ಕೆ ಉಳಿವಿಲ್ಲ, ಧರ್ಮಕ್ಕೆ ಅಳಿವಿಲ್ಲ

–ವಿ॥ ರಾಮವಿಟ್ಠಲಾಚಾರ್ಯ ಬೆಂಗಳೂರು

ವಾಸುಕಿ ತನ್ನ ಮಗಳಾದ ಜರತ್ಕಾರುವನ್ನು ತಪಸ್ವಿ ಜರತ್ಕಾರುವಿಗೆ ವಿವಾಹ ಮಾಡಿಕೊಳ್ಳುವಂತೆ ವಿಜ್ಞಾಪನೆ ಮಾಡಿದನು. ನನ್ನ ಕರಾರಿಗೆ ಒಪ್ಪಿದರೆ ವಿವಾಹವಾಗುತ್ತೇನೆಂದ ಜರತ್ಕಾರು. ಅಪ್ರಿಯವಾಗಿ ನಡೆದುಕೊಳ್ಳಬಾರದು. ಹಾಗೆ ನಡೆದರೆ ಅಂದೇ ಅವಳನ್ನು ಬಿಡುತ್ತೇನೆ ಎಂದು ಕರಾರು ಹೇಳಿದನು. ಜರತ್ಕಾರುವಿನ ಉಗ್ರ ಕರಾರಿಗೆ ತಕರಾರು ಹೇಳದೆ ವಾಸುಕಿ ತನ್ನ ತಂಗಿಯನ್ನು ಜರತ್ಕಾರುವಿಗೆ ಧಾರೆಯೆರೆದ. ವಿವಾಹ ಮಾಡಿಕೊಂಡ ಜರತ್ಕಾರು ವಾಸುಕಿ ವ್ಯವಸ್ಥೆ ಮಾಡಿದ ವಾಸಭವನದಲ್ಲಿ ತಂಗಿದ. ಏಕಾಂತದಲ್ಲಿ ಕಾಂತೆಗೆ ಮತ್ತೆ ಹೇಳಿದ. ಅಪ್ರಿಯವನ್ನು ಹೇಳಬಾರದು. ಅಪ್ರಿಯವನ್ನು ಮಾಡಬಾರದು. ಹಾಗೇನಾದರೂ ಆದರೆ ನಾನು ಮನೆ ಬಿಟ್ಟು ಹೋಗುತ್ತೇನೆ.

ದುಃಖದಿಂದಲೇ ವಾಸುಕಿಯ ತಂಗಿ ಸಮ್ಮತಿಸಿದಳು. ಅಂದಿನಿಂದ ತುಂಬ ಎಚ್ಚರಿಕೆಯಿಂದ ಪತಿಗೆ ಪ್ರಿಯಳಾಗಿಯೇ ಬದುಕಿದಳು. ಋತುಸ್ನಾತಳಾಗಿ ಒಮ್ಮೆ ಪತಿಯನ್ನು ಸೇರಿ ರಮಿಸಿದಳು. ಅಗ್ನಿಯಂತೆ ಪ್ರಜ್ವಲಿಸುವ ಗರ್ಭ ಅವಳ ಉದರದಲ್ಲಿ ಬೆಳೆಯಹತ್ತಿತು.

ಕೆಲವು ದಿವಸ ಕಳೆದವು. ಅಂದೊಮ್ಮೆ ಪರಿಶ್ರಾಂತನಾದ ಜರತ್ಕಾರು ಹೆಂಡತಿಯ ತೊಡೆಯಲ್ಲಿ ತಲೆಯಿಟ್ಟು ವಿಶ್ರಾಂತಿ ಪಡೆದ. ಸಾಯಂಸಂಧ್ಯೆಯ ಸಮಯ ಬಂತು. ಸೂರ್ಯ ಪಡುವಣದ ಕಡಲಲ್ಲಿ ಜಾರುತ್ತಿದ್ದಾನೆ. ಪತಿರಾಯ ಮಡಿಲಲ್ಲಿ ನಿದ್ರೆಗೆ ಜಾರಿದ್ದಾನೆ. ಸಂಧ್ಯಾಕಾಲದಲ್ಲಿ ಮಲಗಿ ಸಂಧ್ಯಾವಂದನೆ ಮಾಡದೆ ಕಾಲ ಕಳೆದರೆ ಧರ್ಮಲೋಪವಾಗುತ್ತದೆಯೆಂದು ಹೆದರಿದಳು ಜರತ್ಕಾರು. ಅಪ್ರಿಯವಾಗಿ ನಡೆದರೆ ಬಿಟ್ಟು ಹೋಗುತ್ತೇನೆಂದು ಬೆದರಿಸುವ ಗಂಡ ನಿದ್ರಾಭಂಗದಿಂದ ಕೋಪಗೊಂಡರೇನು ಗತಿ? ಎಂದು ಭಯವಾಯಿತು. ಧರ್ಮಲೋಪ–ಭರ್ತೃಕೋಪಗಳಲ್ಲಿ ಯಾವುದು ಮೇಲು? ಎಂದು ಚಿಂತೆಗೆ ಒಳಗಾದಳು. ಭರ್ತೃಕೋಪಕ್ಕಿಂತಲೂ ಧರ್ಮಲೋಪವೇ ದೊಡ್ಡ ಅಪರಾಧವೆಂದು ಭಾವಿಸಿ ಸಂಧ್ಯಾಕಾಲಾತಿಕ್ರಮವಾದರೆ ಗಂಡನಿಗೆ ಪುಣ್ಯಲೋಪವಾಗುತ್ತದೆಂದು ಅವನನ್ನು ಎಬ್ಬಿಸುವ ನಿರ್ಧಾರಕ್ಕೆ ಬಂದಳು. ಮೆಲ್ಲನೆ ಉಸುರಿದಳು. ಸ್ವಾಮಿ! ಪಶ್ಚಿಮದಲ್ಲಿ ಸಂಧ್ಯಾರಾಗದ ರಂಗೇರಿದೆ. ರವಿ ಮರೆಯಾಗುತ್ತಿದ್ದಾನೆ. ಎದ್ದು ಕೈಕಾಲು ತೊಳೆದು ಸಂಧ್ಯಾನುಷ್ಠಾನ

ಎಲ್ಲಾ ದೇವತೆಗಳ ಬಗ್ಗೆ ಚೆನ್ನಾಗಿ ಅರಿತು ಗೌರವಿಸಬೇಕು

ಮಾಡಿರಿ. ಸಾಯಂ ಅಗ್ನಿಹೋತ್ರದ ಸಮಯವೂ ಸಮೀಪಿಸುತ್ತಿದೆ.

ಎಚ್ಚರಗೊಂಡ ಜರತ್ಕಾರು ಸಿಹಿಮಿಡಿಯಾದ. ನನಗೆ ಅವಮಾನ ಮಾಡುತ್ತಿರುವಿ. ಇನ್ನಿಲ್ಲಿ ನಿಮ್ಮೊಂದಿಗೆ ವಾಸ ಮಾಡುವುದಿಲ್ಲ. ಬಂದ ಹಾಗೆ ಹಿಂತಿರುಗುತ್ತೇವೆ. ನಾನು ಏಳುವವರೆಗೆ ಸೂರ್ಯನಿಗೆ ಮುಳುಗುವ ಶಕ್ತಿಯಿಲ್ಲವೆಂದು ಮಲಗಿದ್ದೆ. ಅವಮಾನವಾದೆಡೆಯಲ್ಲಿ ವಾಸವು ತರವಲ್ಲ. ಹೊರಡುತ್ತೇನೆಂದ.

ಗಾಬರಿಯಾದ ಪತ್ನಿ ದೈನ್ಯದಿಂದ ನುಡಿದಳು. ಛೇ! ಛೇ ಸ್ವಾಮಿ! ತಮಗೆ ಅವಮಾನ ಮಾಡುವ ಉದ್ದೇಶ ನನಗಿಲ್ಲ. ಧರ್ಮಲೋಪವಾಗದಿರಲೆಂದು ಎಚ್ಚರಗೊಳಿಸಿದೆಯಷ್ಟೆ.

ನಾನು ಮಾಡಿಕೊಂಡ ಒಪ್ಪಂದ ಮೀರಿದ ಮೇಲೆ ನಾನಿಲ್ಲಿರುವುದಿಲ್ಲ. ಮಾತು ತಪ್ಪಲಾರೆ. ಇದುವರೆಗೆ ಸುಖವಾಗಿ ವಾಸಮಾಡಿದ್ದೆ. ನಿಮ್ಮ ಅಣ್ಣನಿಗೆ ನಡೆದ ಸಂಗತಿಯನ್ನು ತಿಳಿಸು. ನಾನು ಹೊರಟ ಮೇಲೆ ನೀನೂ  ಶೋಕಿಸದಿರು ಎಂದ ಜರತ್ಕಾರು.

ಚಿಂತೆಶೋಕಗಳಿಂದ ತತ್ತರಿಸಿದ ಭಾರ್ಯೆ ಕಾಂತಿಹೀನಳಾದಳು. ಶಾಂತಿ ಹೀನಳಾದಳು. ಹೃದಯ ಕಂಪಿಸಿತು. ಆದರೂ ಕಷ್ಟಪಟ್ಟು ಧೈರ್ಯ ತಳೆದು ಕೈಮುಗಿದು ಅಂಗಲಾಚಿ ಬೇಡಿಕೊಂಡಳು–ಮುನೇ! ಧರ್ಮಜ್ಞನೇ ಪ್ರಿಯಹಿತಳಾದ ನನ್ನನ್ನು ತಾವು ಬಿಡಬಾರದು. ನನ್ನನ್ನು ನಿಮಗೆ ಧಾರೆಯೆರದ ವಾಸುಕಿಯ ಉದ್ದೇಶವೇ ಇನ್ನೂ ನೆರವೇರಿಲ್ಲ. ಮಾತೃಶಾಪಕ್ಕೆ ತುತ್ತಾದ ಬಂಧುಗಳಾದ ಸರ್ಪಗಳ ರಕ್ಷಣೆ ನಿಮ್ಮಿಂದ ನಾನು ಪಡೆವ ಸಂತಾನದಿಂದಲೇ ತಾನೆ. ಬಂಧುಗಳ ಹಿತಾರ್ಥವಾಗಿ ನಿಮ್ಮಲ್ಲಿ ವಿನಂತಿಸುತ್ತಿದ್ದೇನೆ. ನಮ್ಮಿರ್ವರ ಸಂಬಂಧ ವ್ಯರ್ಥವಾಗದಿರಲಿ. ಗರ್ಭಾಧಾನ ಮಾಡಿ ಹೊರಟರೆ ಹೇಗೆ?

ಯೋಚಿಸದಿರು ಸಾಧ್ವಿ! ಅಗ್ನಿಯಂತೆ ಪ್ರಜ್ವಲಿಸುವ ಗರ್ಭ ನಿನ್ನ ಉದರದಲ್ಲಿದೆ. ವೇದವೇದಾಂಗಪಾರಂಗತನಾದ ಪರಮಧರ್ಮಾತ್ಮಾ ಋಷಿ ನಿನ್ನ ಮಗನಾಗಿ ಬರುವನು ಎಂದು ಹೇಳಿ ಜರತ್ಕಾರು ತಪಸ್ಸಿಗೆ ಹೊರಟೇ ಹೋದ.

ಅಣ್ಣ ವಾಸುಕಿಯ ಬಳಿಗೆ ಬಂದು ನಡೆದ ವೃತ್ತಾಂತವನ್ನೆಲ್ಲ ಅರುಹಿದಳು ಜರತ್ಕಾರು. ತಂಗಿ! ಮನ್ನಿಸು. ನಿನ್ನನ್ನು ಕರೆದುಕೊಳ್ಳುವಂತೆ ಮುನಿ ಜರತ್ಕಾರುವಿನಲ್ಲಿ ಮನವಿ ಮಾಡಿದರೆ ಪ್ರಯೋಜನವಿಲ್ಲ. ಅಚಲ ನಿರ್ಧಾರದ ಆತ ಶಪಿಸಿಯಾನು.

ನಿನ್ನ ಮಗನಿಂದ ಸರ್ಪಕುಲ ಸಂರಕ್ಷಣೆಯಾಗುತ್ತದೆ. ಹಿಂದೆ ಬ್ರಹ್ಮದೇವರು ದೇವತೆಗಳೊಂದಿಗೆ ಈ ಸಂಗತಿಯನ್ನು ಹೇಳಿದ್ದಾರೆ. ವಾಸುಕಿಯ ತಂಗಿಯ ಮಗನಿಂದ

ಜಗದ್ಗುರು ಮಧ್ವಚಾರ್ಯರಂತಹ ಮಹಾಜ್ಞಾನಿಗಳನ್ನೇ ಗುರುಗಳನ್ನಾಗಿ ಸ್ವೀಕರಿಸಿರಿ

ಸಾಧುಸರ್ಪಗಳ ಸಂರಕ್ಷಣೆಯಾಗುತ್ತದೆ. ಕೇವಲ ದುಷ್ಟ ಸರ್ಪಗಳ ಸಂಹಾರ ಜನಮೇಜಯನ ಸರ್ಪಸತ್ರದಲ್ಲಿ ನಡೆಯುತ್ತದೆ. ಹೀಗೆ ಇವೆಲ್ಲ ಪೂರ್ವಯೋಜಿತ ದೈವನಿರ್ಣಯ. ನಿನ್ನನ್ನು ಜರತ್ಕಾರುವಿಗೆ ದಾನ ಮಾಡಿದ್ದು ವ್ಯರ್ಥವಾಗಲಿಲ್ಲ. ನಿನಗಾದ ತೊಂದರೆ ನನ್ನ ಮನಸ್ಸನ್ನು ಘಾಸಿಗೊಳಿಸುತ್ತದೆ. ಸಮಾಧಾನಳಾಗು.

ವಾಸುಕಿಯ ಅಸಹಾಯಕ ಸ್ಥಿತಿಯನ್ನು, ತನ್ನ ಪರಿಸ್ಥಿತಿಯ ಅನಿವಾರ್ಯತೆಯನ್ನು ಅರ್ಥವಾಡಿಕೊಂಡು ಸಾವರಿಸಿಕೊಂಡ ಜರತ್ಕಾರು ಅಣ್ಣನಿಗೆ ಸಮಾಧಾನದ ಮಾತುಗಳನ್ನಾಡಿದಳು. ಅಣ್ಣ ಯೋಚನೆ ಬೇಡ. ಹೋಗುವಾಗ ನನ್ನ ವಿನಂತಿಗೆ ಸ್ಪಂದಿಸಿದ ಪತಿರಾಯ ನನ್ನುದರದಲ್ಲಿ ಸರ್ಪಕುಲ ಸಂರಕ್ಷಕ ಮಹಾತ್ಮನಿರುವ ಸಂಗತಿಯನ್ನು ತಿಳಿಸಿದ್ದಾರೆ.

ಸಕಾಲದಲ್ಲಿ ಗಂಡು ಮಗುವಿಗೆ ಜರತ್ಕಾರು ಜನ್ಮವಿತ್ತಳು. ತಂದೆ ತಾಯಿಗಳ ಭಯಾಪಹಾರಿಯಾದ ಬಾಲಕ ಶುಕ್ಲಪಕ್ಷದ ಚಂದ್ರನಂತೆ ವಿವರ್ಧಮಾನನಾದ.

ಮಗು ಗರ್ಭದಲ್ಲಿರುವಾಗಲೇ ನಿನ್ನ ಉದರದಲ್ಲಿ ಸತ್ಪುತ್ರ 'ಅಸ್ತಿ'=ಇದ್ದಾನೆ ಎಂದು ಹೇಳಿ ತಂದೆ ತಪಸ್ಸಿಗೆ ಹೋದದ್ದರಿಂದ ಅವನ ಹೆಸರು ಆಸ್ತೀಕ ಎಂದು ಪ್ರಸಿದ್ಧವಾಯಿತು. ಮುಂದೆ ಜನಮೇಜಯನ ಸರ್ಪಸತ್ರದಲ್ಲಿ ಈ ಆಸ್ತೀಕರಿಂದಲೆ ಸರ್ಪಗಳ ನಾಶ ತಪ್ಪುತ್ತದೆ.

ತನ್ನ ಪಿತೃಗಳ ಉದ್ಧಾರಕ್ಕಾಗಿ ಮಾತ್ರ ಮದುವೆಯಾದ ಜರತ್ಕಾರು ಮದುವೆಯ ಬಂಧನದಲ್ಲಿಯೇ ಬಿಡುಗಡೆಯ ಬೀಜವನ್ನು ಬಿತ್ತಿಕೊಂಡ. ಸಂತಾನವನ್ನು ಪಡೆದು ತನ್ನ ವಂಶದ ತಂತು ತುಂಡಾಗದಂತೆ ಎಚ್ಚರ ವಹಿಸಿದ. ಅಂತೆಯೇ ತನ್ನ ಜೀವನದ ಸಾಧನೆಗೆ ವಿವಾಹ ತಡೆಯಾಗದಂತೆಯೂ ಎಚ್ಚರ ವಹಿಸಿದ. ಜರತ್ಕಾರುವಿನ ಅಲಿಪ್ತ ನೀತಿ ಅನುಕರಣೆಗೂ ಎಟುಕುವುದಿಲ್ಲ! ವಿಚ್ಛೇದನದ ಕರಾರಿಗೆ ಒಪ್ಪಿ ಮದುವೆಯಾದ ವಾಸುಕಿಯ ತಂಗಿಯ ದಿಟ್ಟತನವೂ ಅದ್ಭುತ! ಗಂಡನ ಉಗ್ರಕರಾರು ತಿಳಿದಿದ್ದರೂ ಭರ್ತೃ ಕೋಪಕ್ಕಿಂತಲೂ ಧರ್ಮಲೋಪಕ್ಕೆ ಹೆಚ್ಚು ಹೆದರಿ ಸಂಧ್ಯಾಕಾಲದಲ್ಲಿ ಮಲಗಿದ ಪತಿಯನ್ನು ಎಬ್ಬಿಸಿ ಧರ್ಮಪರವನ್ನಾಗಿಸಿದ ಪತ್ನಿ ಜರತ್ಕಾರುವಿನ ಧರ್ಮನಿಷ್ಠೆ ಭಯಂಕರ!

ಗಂಡಂದಿರಿಗೆ ಸಿಟ್ಟು ಬಂದರೂ ಪರವಾಗಿಲ್ಲ. ಅವರನ್ನು ನಿತ್ಯಕರ್ಮಾನುಷ್ಠಾನದಲ್ಲಿ ತೊಡಗಿಸಲು ಈ ಕಥೆ ಸೂಕ್ಷ್ಮವಾಗಿ ತಿಳಿಸುತ್ತದೆ.

ತಾಯಿ ಧಾರ್ಮಿಕಳಾದರೆ ಮಕ್ಕಳು ಆಸ್ತಿಕರಾಗಲು ಸಾಧ್ಯ.

★

**ಭಗವದ್ಭಕ್ತರಾದ ಸಜ್ಜನರ ಸಂಸರ್ಗವನ್ನು ಎಂದಿಗೂ ಬಿಡಬೇಡಿ.**

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

**ಯಸ್ಮಿನ್ನಿದಂ ವಿಚಿಕಿತ್ಸಂತಿ ಮೃತ್ಯೋ ।**
**ಸಾಂಪರಾಯೇ ಮಹತಿ ಬ್ರೂಹಿ ನಸ್ತತ್ ॥**
**ಯೋಽಯಂ ವರೋ ಗೂಢಮನುಪ್ರವಿಷ್ಟೋ ।**
**ನಾನ್ಯಂ ತಸ್ಮಾನ್ನಾಚಿಕೇತೋ ವೃಣೀತೇ ॥**

ಯಾವ ವಿಷಯದಲ್ಲಿ ಮೃತ-ಮುಕ್ತ ಪ್ರೇರಕನಾಗಿ ಭಗವಂತನು ಇದ್ದಾನೋ ಇಲ್ಲವೋ ಎಂದು ಚರ್ಚಿಸುತ್ತಾರೋ ಅದನ್ನು ಮೋಕ್ಷಕ್ಕಾಗಿ ನನಗೆ ಹೇಳು ನೀನು ನೀಡಬೇಕಾದ ವರ ನಿಗೂಢವಾಗಿರುವುದು ನಿಜ. ಈ ನಚಿಕೇತ ಬೇರೇನನ್ನೂ ಬೇಡುವುದಿಲ್ಲ!

ನಚಿಕೇತನು ತನ್ನ ತೀರ್ಮಾನಕ್ಕೆ ಅಂತಿಮ ಕಾರಣ ನೀಡಿದನು.

1) ನೀನು ಸುಳ್ಳು ಹೇಳುವವನಲ್ಲ. ದೇವತೆಗಳೂ ಸಹ ಚರ್ಚಿಸುತ್ತಾರೆ ಎಂದ ಮೇಲೆ ವಿಷಯ ಗಹನವಾದದ್ದು ಎಂಬುದು ಸ್ಪಷ್ಟವಾಯಿತು.

2) ನೀನು ಒಡ್ಡಿರುವ ಆಮಿಷಗಳ ಭಾರೀ ಸ್ವರೂಪದ ಸಾಲುಗಳನ್ನು ಕಂಡಾಗ ವಿಷಯ ಗಹನವಾಗಿರಬೇಕೆಂಬ ಅನುಮಾನ ಇನ್ನೂ ಗಟ್ಟಿಯಾಯಿತು. ಇದು ಮಾತ್ರ ವರವಾಗಬಲ್ಲದು ಎಂಬುದು ಸ್ಪಷ್ಟ.

3) ಸಾಂಪರಾಯ ಎಂದರೆ ಶ್ರೇಯಸ್ಸು. ಮಹಾಸಾಂಪರಾಯ ಎಂದರೆ ಮೋಕ್ಷ. ಅದಕ್ಕೆ ಅತ್ಯಂತ ರಹಸ್ಯ ವಿದ್ಯೆಯೇ ಬೇಕು ನೀನು ಹೇಳು.

4) ಈ ನಚಿಕೇತ ದೇವತೆಯಾದ ಯಮನ ಬಳಿ ನಿಂತಿದ್ದಾನೆ. ಅವನ ಅನುಗ್ರಹ ಪಡೆದಿದ್ದಾನೆ. ಹೀಗಿರುವಾಗ ಹರಿಯ ಬಗ್ಗೆ ಬಿಟ್ಟು ಕ್ಷುಲ್ಲಕ ವಿಚಾರಗಳನ್ನು ಕೇಳುವವನು ಆಗುವುದಿಲ್ಲ. ಇದು ಸಾಧಕನ ಅಹಂಕಾರ ಅಲ್ಲ. ಆತ್ಮನಿವೇದನೆ.

ಇಲ್ಲಿಗೆ ಕಾಠಕ ಉಪನಿಷತ್ತಿನ ಪ್ರಥಮವಲ್ಲಿ ಮುಕ್ತಾಯವಾಯಿತು.

**ಅನ್ಯತ್ ಶ್ರೇಯೋ ಅನ್ಯದುತೈವ ಪ್ರೇಯಸ್ತೇ ಉಭೇ ನಾನಾರ್ಥೇ ಪುರುಷಂ ಸಿನೀತಃ**
**ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ ಹೀಯತೇ ಅರ್ಥಾತ್ ಯ ಉ ಪ್ರೇಯೋವೃಣೀತೇ**

ಶ್ರೇಯಸ್ಕರವಾದ ಬ್ರಹ್ಮಜ್ಞಾನವೇ ಬೇರೆ. ಮೈಮರೆಸುವ ಮಡದಿ ಮಕ್ಕಳ ಸುಖವೆಂಬ ಪ್ರೇಯವೇ ಬೇರೆ. ಒಂದು ಪಾರತ್ರಿಕ ಸುಖ. ಮತ್ತೊಂದು ಐಹಿಕ ಸುಖ. ಇವೆರಡು ಸಹ ಬೇರೆ ಬೇರೆ ಪ್ರಯೋಜನವುಳ್ಳವುಗಳು. ಅವು ಮನುಷ್ಯನನ್ನು ಬಂಧಿಸುತ್ತವೆ. ಅವುಗಳ ಮಧ್ಯದಲ್ಲಿ ಬ್ರಹ್ಮಜ್ಞಾನ ಬಯಸುವವನಿಗೆ ಭಾರೀ ಮಂಗಳ. ಪ್ರೇಯಸ್ಸೆಂಬ ಐಹಿಕ ಸುಖ ಬಯಸುವವನು ಪರಮಪುರುಷಾರ್ಥವನ್ನು ಕಳೆದುಕೊಳ್ಳುತ್ತಾನೆ.

ಇಲ್ಲಿ ಯಮನು ಸುಖವನ್ನು ಭಾಗಮಾಡುತ್ತಾನೆ. ಏಕೆಂದರೆ ದುಃಖವುಳ್ಳವರೂ ಸಾಯುತ್ತಾರೆ. ಸುಖವುಳ್ಳವರೂ ಸಾಯುತ್ತಾರೆ. ಹೀಗಾಗಿ ಸುಖವು ದುಃಖದ ಬೀಜ. ಹಾಯಾಗಿ ಸತ್ತವನನ್ನು ನೋಡಿ ಅಯ್ಯೋ ಎಂದು ಅಳುವವರೂ ಇದ್ದಾರೆ. ಹೀಗಾಗಿ ಸುಖ ಒಂದರ್ಥದಲ್ಲಿ ಸಾಲದ ಹಣ ಇದ್ದಂತೆ. ಅನುಭವಿಸುವಾಗ ಸುಖ. ತೀರಿಸುವಾಗ ದುಪ್ಪಟ್ಟು ದುಃಖ. ಈ ಮೈಮರೆಸುವ ಸುಖವನ್ನು ಪ್ರೇಯ ಎನ್ನುತ್ತಾರೆ. ಪ್ರೇಯ=ಪರ–ಹೊರಗಿನಿಂದ ಈಯ= ಹೊಂದಲ್ಪಡುವುದು. ಹೀಗಾಗಿ ಈ ಹೊರಗಿನ ಸುಖ ಮೈ–ಮನ ಮರೆಸುತ್ತದೆ. ಹೀಗಾಗಿ ಇದು ಐಹಿಕ ಸುಖ. ಹೊರಗಿನ ವಸ್ತುಗಳಿಂದ ಬರುವ ಸುಖ. ಅದು ಅನೇಕ ಸರಮಾಲೆ. ಕಾರಿನಲ್ಲಿ ತಿರುಗಾಡುವ ಸುಖ ಎಂದರೆ 1) ಕಾರಿನಲ್ಲಿ ಪೆಟ್ರೋಲ್ ಇರಬೇಕು. 2) ಇವನಿಗೆ ಮನಸ್ಸಿನ ಸ್ವಾಸ್ಥ್ಯ ಇರಬೇಕು 3) ರಸ್ತೆ ಸರಿ ಇರಬೇಕು. 4) ವಾಹನಗಳು ತಿರುಗಾಡಲು ಟ್ರಾಫಿಕ್ ಜಾಮ್ ಇರಬಾರದು. 5) ಉಳಿದವರು ಗುರುತಿಸಬೇಕು. ಆಗ ಅದು ಸುಖ. ಇಲ್ಲವಾದಲ್ಲಿ ಅಂಬ್ಯೂಲೆನ್ಸ್ ವ್ಯಾನ್ ನಲ್ಲಿ ಆಸ್ಪತ್ರೆಗೆ ಬರುವವನಿಗೆ ತನ್ನ ಸ್ವಾಸ್ಥ್ಯವೇ ಇಲ್ಲದವನಿಗೆ ಅದು ಪ್ರಶಸ್ತಿ ಆಗದೆ ಪರದಾಟ ಎನಿಸುತ್ತದೆ.

ಹೀಗೆ ಪ್ರೇಯಸ್ಸು ಮನಸ್ಸನ್ನು ಮರೆಸುತ್ತದೆ. ಮುದಗೊಳಿಸುವುದಲ್ಲ ದುಃಖವನ್ನು ಮರೆಸುವುದು. ನೋವು ಬಂದಿರುವವನಿಗೆ ನಿದ್ದೆ ಮಾತ್ರೆ ಕೊಟ್ಟರೆ ನೋವನ್ನು ಮರೆಯುತ್ತಾನೆ. ನೋವು ಮರೆಯಾಯಿತು. ವಾಸಿಯಾಗಲಿಲ್ಲ. ವಿಷಯಪದಾರ್ಥದ ಸುಖ ಹೀಗೆ. ಇದು ನಾನಾರ್ಥೇ= ಇತರರಿಗೆ ತೋರಿಸಿಕೊಳ್ಳಲಿಕ್ಕಾಗಿ ನಾನಾ ಜನರಿಗೋಸ್ಕರವಾಗಿ ಸ್ಪರ್ಧೆಗಾಗಿ ಅವನನ್ನು ಬಂಧನದಲ್ಲಿಡುತ್ತದೆ. ಆದ್ದರಿಂದ ಪ್ರೇಯ ಎಂದರೆ ಪರರಿಗಾಗಿ ಪರವಸ್ತುಗಳಿಂದ ಪರದಾಡುವುದು ಈ ಪ್ರೇಯ–ಪ್ರೇಯಸ್ಸು ಇದನ್ನು ಬಯಸುವವನು ಪರಮ ಪುರಷಾರ್ಥ ಕಳೆದುಕೊಳ್ಳುತ್ತಾನೆ.

**(ಮುಂದುವರಿಯುವುದು)**

ಬಹುಸಜ್ಜನರ ಮಾರ್ಗವನ್ನಾಶ್ರಯಿಸಿ.

ಸ್ತೋತ್ರ ಚಿಂತನೆ

ಭಾಗ–10

# ಶ್ರೀನಾರಾಯಣವರ್ಮ

–ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

ವಾಮನನಂತಹ ಭಕ್ತರನ್ನು ರಕ್ಷಿಸುವ ಕರುಣಾಮೂರ್ತಿ ಜಗತ್ತಿನಲ್ಲಿ ಯಾರೂ ಇಲ್ಲ ಆದ್ದರಿಂದ ವಾದಿರಾಜರು ಸರಸಭಾರತೀವಿಲಾಸದ ಪ್ರಾರಂಭದಲ್ಲಿ ಒಂದು ಸುಂದರವಾದ ಮಾತನ್ನು ಹೇಳುತ್ತಾರೆ.

**ಕೋವಾಜೀವಾಪರಸ್ತ್ರಾತಾ ದೇವಾಚ್ಛ್ರೀ ವಾಜಿದೇವತಃ ।**
**ಯೋರ್ವಾಗಾಯಾತಿಯಶ್ಚೋರ್ಧ್ವಂ ತಾವುಭೌ ವಾಮನಾಶ್ರಿತೌ॥**

ಎಲೈ ಜೀವನೇ! ಉಸಿರನ್ನು ಮೇಲಕ್ಕೆ ಕೆಳಕ್ಕೆ ಕೊಂಡೊಯ್ಯುವ ವಾಮನ ಹಯಗ್ರೀವನನ್ನು ಬಿಟ್ಟು ಉಳಿದ ಯಾರು ನಿನಗೆ ರಕ್ಷಕರು. ನಿತ್ಯವೂ ಧೇನಿಸು. ಇವನ ಹೊರತಾಗಿ ಪೊರೆವ ದೊರೆ ಜಗತ್ತಿನಲ್ಲಿ ಯಾರೂ ಇಲ್ಲ. ಇದ್ದಾರೆ ಎಂದು ಚಿಂತಿಸಿದರೂ ಇವನ ಹೊರತಾಗಿ ಇವನ ಭೃತ್ಯನಾದ ಮುಖ್ಯಪ್ರಾಣನಿದ್ದಾನೆ ಎಂದು ಚಿಂತಿಸು ವಾಮನ–ಪ್ರಾಣರನ್ನು ಬಿಟ್ಟರೆ ಜಗತ್ರಾಣರು ಬೇರೆ ಯಾರೂ ಇಲ್ಲ. ಆದ್ದರಿಂದ ನಿತ್ಯೋಪಕಾರಿಯಾದ ಶ್ರೀಹರಿಯನ್ನು ಮರೆಯಬೇಡ ಎನ್ನುತಾರೆ.

ಇನ್ನೊಂದು ಕ್ರಮದಲ್ಲಿ ಪಿಂಡಾಂಡದಲ್ಲಿ ಈ ವಾಮನನ ಕ್ರಿಯೆಯನ್ನು ಅನುಸಂಧಾನ ಮಾಡಬಹುದು. ಜಗನ್ನಾಥ ದಾಸರು ಹರಿ ಕಥಾಮೃತಸಾರದಲ್ಲಿ ವಾಮನನು ಜಿಹ್ವೆಗೆ ನಿಯಾಮಕ ಎಂದಿದ್ದಾರೆ. ಇಲ್ಲಿ ಜಿಹ್ವೆಯನ್ನೇ ಸ್ಥಳ ಎನ್ನಬಹುದು. ಹೇಗೆಂದರೆ ಸ್ಥಳಗಳಲ್ಲಿ ನೀರು ಇರುವ ಸ್ಥಳವನ್ನೇ ಸ್ಥಳ ಎನ್ನುತ್ತೇವೆ. ನಮ್ಮ ಶರೀರದ ಬಾಹ್ಯೇಂದ್ರಿಯಗಳಲ್ಲಿ ಯಾವಾಗಲೂ ನೀರಿನ ಸ್ಥಳ ನಾಲಿಗೆ. ಇದಕ್ಕೆ ನಿಯಾಮಕನಾದವ ವಾಮನ. ಬ್ರಹ್ಮಚಾರಿಯಾದ ವಾಮನ ಬ್ರಾಹ್ಮಣರ ಬಲಪಾದದಲ್ಲಿದ್ದಾನೆ. ಆದ್ದರಿಂದಲೇ ಬ್ರಾಹ್ಮಣರು ಬಂದ ಕೂಡಲೇ ಪಾದಕ್ಕೆ ನೀರು ಹಾಕುತ್ತೇವೆ. ಏಕೆಂದರೆ ವಾಮನನಿಗೆ ನೀರು ಬಹಳ ಇಷ್ಟ. ಉದರದಲ್ಲಿಯೂ ವಾಮನನಿದ್ದಾನೆ. ನಾಲಿಗೆ ಬಹಳ ಚುರುಕು. ವಾಮನನೂ ಚುರುಕು. 32 ಹಲ್ಲುಗಳ ಮಧ್ಯೆ ನಾಲಿಗೆ ವ್ಯವಹರಿಸುವ ಕ್ರಮ ಬಹಳ ಸೊಗಸು. ಹಲ್ಲುಗಳು ಆಹಾರಗಳನ್ನು ಅಗೆದು ಶ್ರಮಪಟ್ಟರೆ ಕೆಲಸವಿಲ್ಲದೆ ಸುಖವಾಗಿ ನಾಲಿಗೆ ರಸ ಸವಿಯುತ್ತದೆ. ಅದರಂತೆ ಜಗತ್ತಿನ

ದೇಶ ಸೇವೆಯನ್ನು ದೇವರ ಸೇವೆಯೆಂಬ ಭಾವನೆಯಿಂದ ಮಾಡುತ್ತಿರಿ.

ಸಕಲಜೀವರಿಗೂ ಸುಖಪ್ರಾಪ್ತಿಗೆ ಕಷ್ಟಪಡಬೇಕು. ಆದರೆ ನಾಲಿಗೆಯಲ್ಲಿನ ವಾಮನನಿಗೆ ಕಷ್ಟಪಟ್ಟು ಸುಖವಲ್ಲ. ಸುಖವಾಗಿ ಸುಖ. ಹಲ್ಲುಗಳು ಹುಟ್ಟಿ ಸತ್ತು ಹುಟ್ಟುತ್ತವೆ. ಜೀವರಿಗೂ ಹುಟ್ಟುಸಾವುಗಳಿವೆ. ಆದರೆ ಮೊದಲು ಬಂದ ನಾಲಿಗೆಗೆ ವಾಮನ ಅಭಿಮಾನಿಯಾದುದರಿಂದ ಕೊನೆಯ ತನಕವೂ ಬದುಕಿರುತ್ತದೆ. ನಾಲಿಗೆ ಏನು ಮಾತನಾಡಲಿ, ಏನನ್ನೇ ತಿನ್ನಲಿ, ಅದರ ಪರಿಣಾಮ ಶಿಕ್ಷೆ ಉದರಕ್ಕೆ ಶರೀರಕ್ಕೆ ಹೊರತು ನಾಲಿಗೆ ಸುಖವಾಗಿರುತ್ತದೆ. ಈ ಅರ್ಥದಲ್ಲಿಯೇ **'ಮಾಯಾವಟು ವಾಮನಃ'** ಎಂದಿದ್ದಾರೆ. ಜ್ಞಾನೇಂದ್ರಿಯಗಳೆಲ್ಲವೂ ಎರಡು ಎರಡಿದ್ದರೆ; ನಾಲಿಗೆ ಒಂದೇ ಇದ್ದು ಜ್ಞಾನೇಂದ್ರಿಯದವ್ಯಾಪಾರ ಕರ್ಮೇಂದ್ರಿಯದ ವ್ಯಾಪಾರ ಎರಡನ್ನೂ ಮಾಡುತ್ತದೆ. ಆದ್ದರಿಂದ ನಾಲಿಗೆಗೆ ಗಾಯತ್ರಿಯ **'ಣ್ಯ'** ಅಕ್ಷರ ಪ್ರತಿಪಾದ್ಯ ವಾಮನ–ತ್ರಿವಿಕ್ರಮ ನಿಯಾಮಕ.

ಸಕಲಜೀವರೂ ಬೆಳಿಗ್ಗೆಯಿಂದ ಸಂಜೆಯತನಕ ದುಡಿಯುತ್ತಾರೆ. ಧಾನ್ಯ, ಧನಕ್ಕಾಗಿ. 8 ಘಂಟೆ ದುಡಿದು ಧಾನ್ಯತರುತ್ತಾರೆ. 3 ಘಂಟೆ ಪಾಕಮಾಡು ತ್ತಾರೆ. 11 ಘಂಟೆಯಶ್ರಮದ ಗುರಿ 1 ಇಂಚು ಜಿಹ್ವೆಯ 1 ಕ್ಷಣದ ತೃಪ್ತಿಗಾಗಿ. ಪುನಃ ತಿಂದ ಆಹಾರ ಜೀರ್ಣವಾಗಲು 8 ಘಂಟೆ ಕಾಯಬೇಕು. ಒಟ್ಟಿನಲ್ಲಿ 20 ಘಂಟೆಯ ಶ್ರಮ ಅರೆಕ್ಷಣದ ನಾಲಿಗೆಯ ತೃಪ್ತಿಗಾಗಿ. ಅತ್ಯಂತ ಅಣುವಾಗಿ ಜಿಹ್ವೆಯಲ್ಲಿದ್ದ ವಾಮನ ಚಾಪಲ್ಯದ ಮೋಹ ನೀಡಿದ್ದಾನೆ. ಮಾಯಾವಟುವಾಗಿದ್ದಾನೆ. ತಿನ್ನುವ ಮೊದಲೂ ಸುಖವಿಲ್ಲ; ತಿಂದ ಬಳಿಕವೂ ಸುಖವಿಲ್ಲ. ಮಧ್ಯದ ಕ್ಷಣಿಕ ಸುಖಕ್ಕಾಗಿ ಹವಣಿಸಿ ಬವಣೆಪಡುವುದು ಮಾಯಾವಟುವಿನ ಆಟವಲ್ಲದೆ ಮತ್ತೇನು? ಬಹುಷಃ ಹೊಟ್ಟೆಯೊಂದು ತಡೆಯಾಗಿರದಿದ್ದರೆ ಮನುಷ್ಯ ನಿರಂತರ ತಿನ್ನುತ್ತಲೇ ಇರುತ್ತಾನೆ. ಅಷ್ಟೇ ಅಲ್ಲದೇ ಇದೇ ನಾಲಿಗೆ ದೇಹದ ಬೆಳವಣಿಗೆಗೆ ದಿನವಿಡೀ ಹರಟುತ್ತಿರುತ್ತದೆ. ಆತ್ಮನ ಬೆಳವಣಿಗೆಗೆ ಬೇಕಾದ ಹರಿನಾಮವನ್ನು ಕ್ಷಣಕಾಲವೂ ಹಾಡದು. ಬಲಿಯ ಬದುಕಿನಲ್ಲಿ ಅಧಿಕಾರ, ದರ್ಪಗಳಿಗೇ ಅಧಿಕ ಆಯುಷ್ಯ ಸಾಗಿತ್ತು. ಕೊನೆಯ ಕೃಷ್ಣಾರ್ಪಣ ಉದ್ಧರಿಸಿತು. ಅದರಂತೆ ನಮ್ಮ ನಾಲಿಗೆಯ ವ್ಯಾಪಾರಗಳೆಲ್ಲವೂ ನಮ್ಮ ಸ್ವಾರ್ಥ, ಅಧಿಕಾರ, ದರ್ಪಗಳಿಗೆ ಮೀಸಲಾಗಿವೆ. ನಾಲಿಗೆಯ ಕ್ಷಣಕಾಲದ ವ್ಯಾಪಾರ ಹರಿಪರವಾದರೂ ಸಾಕು ಹರಿ ಉದ್ಧರಿಸುತ್ತಾನೆ. ಅದಕ್ಕಾಗಿ ವಾಮನನಾಗಿ ಸ್ವಲ್ಪಸಾಕು ಎಂದು ಕೇಳಲು ನಾಲಿಗೆಯಲ್ಲಿ ಕುಳಿತಿದ್ದಾನೆ. ಈ ವಾಮನ ದಿನನಿತ್ಯವೂ ತನ್ನಿಂದ ಅಭಿಮನ್ಯವಾದ ನಾಲಿಗೆಯನ್ನು ಬಾಹ್ಯ ವ್ಯಾಪಾರಗಳಿಗೆ ಬಳಸಿಕೊಂಡರೂ ಸಿಟ್ಟಾಗನು. ಅವನು ಕೇಳುವುದು 3 ಸಂಧ್ಯೆಗಳಲ್ಲಿ 3 ಪಾದದ ಗಾಯತ್ರಿಯನ್ನು ಕೊಡಿ ಎಂದು. ಅದನ್ನೂ ನೀಡದಿದ್ದಾಗ. ನಮ್ಮಂತಹ ಬಲಿಯನ್ನು ಉದ್ದರಿಸಿ ಹೇಗೆ ಸುತಲವನ್ನು ಕೊಟ್ಟಾನು? **(ಸಶೇಷ)**

**ವೇದ–ಇತಿಹಾಸ–ಪುರಾಣಗಳ ಅಭಿಪ್ರಾಯಕ್ಕೆ ವಿರುದ್ಧವಾದ ದುಷ್ಟವಾದಗಳನ್ನು ಖಂಡಿಸಿರಿ**

# ಜೀವನಯಜ್ಞ
## ಸ್ಥೂಲಶರೀರಚಿಂತನಯಜ್ಞ

ಸಂಕಲನ: ಸುನಂದಕೀ

ಅಸಂಖ್ಯ ಅಸಂಖ್ಯ ಭಗವದ್ರೂಪಗಳಿಂದ ಹಾಗೂ ಸಕಲ ತತ್ವಾಭಿಮಾನಿ ದೇವತೆಗಳಿಂದ ಕೂಡಿದ ನಮ್ಮೆಲ್ಲರ (ಜೀವರೆಲ್ಲರ) ಸ್ಥೂಲದೇಹವನ್ನು ಭಗವಂತನಿಗೆ ಅರ್ಪಿಸುವ ಕ್ರಮವು ಅನೇಕ ಬಗೆಯಾದುದು. ಅದು ಸೌಂದರ್ಯ ಹಾಗೂ ಸೌಕರ್ಯಗಳಿಗೆ ಆಕಾರವಾದ ಈ ದೇಹವನ್ನು ನೀಡಿದ ಆ ಭಗವಂತನಿಗೆ ಕೃತಜ್ಞತಾರ್ಪಣೆಯ ಕ್ರಮ. ಪೂರ್ಣ ಬದುಕನ್ನು ಸಾರ್ಥಕವನ್ನಾಗಿಸುವ ಅನುಸಂಧಾನದ ಕ್ರಮ. ಅನೇಕ ಸಾಧಕರು ಸಾಧಿಸಿ ತೋರಿದ ಕ್ರಮ. ಅದರಲ್ಲಿ ಕೆಲವೊಂದನ್ನು ಚಿಂತಿಸಲು ಈ ಒಂದು ಉಪಕ್ರಮ.

ಮೊದಲಿಗೆ, ನಮ್ಮ ದೇಹವನ್ನು ಆ ದೇವನಿಗೆ ರಥವನ್ನಾಗಿ ಅರ್ಪಿಸೋಣ. ಹೇಗೆಂದರೆ–ಜಗತ್ಪತಿಯಾದ, ಹಾಗೂ ಸಿರಿಯರಸನಾದ ಶ್ರೀಹರಿಯು ಹಾಗೂ ಆತನ ದಾಸರಾದ ಬ್ರಹ್ಮ ರುದ್ರಾದಿದೇವತೆಗಳು ನಮ್ಮ ಈ ಸ್ಥೂಲಶರೀರವನ್ನು ರಥ ರೂಪ ಅಧಿಷ್ಠಾನವನ್ನಾಗಿಸಿಕೊಂಡು ಅನೇಕ ವಿಧದಲ್ಲಿ ವಿಹಾರ ಮಾಡುವರು.

ಪ್ರಸಿದ್ಧ ರಥದಲ್ಲಿ ರಥಿಕನಾಗಿ ರಾಜನಿರುವನು. ಅವನ ಸನಿಹದಲ್ಲಿ ಚಾಮರ ಮತ್ತು ವ್ಯಜನಾದಿಗಳಿಂದ ಸೇವೆಯನ್ನು ಮಾಡಲು ಯುವರಾಜನಿರುವನು. ರಥಕ್ಕೆ ನಾಲ್ಕು ಕುದುರೆಗಳೂ, ಅವುಗಳನ್ನು ಕಟ್ಟಲು ಹಗ್ಗಗಳೂ (ಲಗಾಮು) ಹಾಗೂ ರಥವನ್ನು ನಡೆಸುವ ಸಾರಥಿಗಳೂ ಇರುವರು. ಅದೇ ರೀತಿ ದೇಹಾಖ್ಯರಥದಲ್ಲಿಯೂ ರಥಿಕಾದಿಗಳು ಇರುವರು. ನಮ್ಮ ಅಂತರ್ಯಾಮಿಯಾದ, ಅಸಂಖ್ಯ ರೂಪದಿಂದ ಸನ್ನಿಹಿತನಾದ, ಅಖಿಲಾಂಡಕೋಟಿ ಬ್ರಹ್ಮಾಂಡದೊಡೆಯನಾದ ಭಗವಂತನೇ ನಮ್ಮ ದೇಹವೆಂಬ ರಥದಲ್ಲಿ ಸಂಚರಿಸುವ ರಥಿಕನಾಗಿರುವನು. ಮುಖ್ಯಪ್ರಾಣದೇವರೇ ಭಗವಂತನಿಗೆ ಹತ್ತಿರವಿದ್ದು ಚಾಮರಾದಿಗಳಿಂದ ಸೇವೆಯನ್ನರ್ಪಿಸುವ ಯುವರಾಜರು. ಬಲಭಾಗದ ಕಣ್ಣಿನಲ್ಲಿ ಸೂರ್ಯದೇವರೂ ಎಡಗಣ್ಣಿನಲ್ಲಿ ಸೂರ್ಯಭಾರ್ಯೆ ಸಂಜ್ಞಾದೇವಿಯರು ಈ ಇಬ್ಬರೂ ರಥದ ಅಗ್ರಭಾಗದಲ್ಲಿ ಕಟ್ಟಿರುವ ಅಶ್ವಗಳು. ಹಾಗೆಯೇ ಬಲಗಿವಿಯಲ್ಲಿ ಚಂದ್ರದೇವರು, ಎಡಕಿವಿಯಲ್ಲಿ ತತ್ಪತ್ನೀ ರೋಹಿಣೀ ದೇವಿಯರೂ ಮುಂದಿರುವ ಕುದುರೆಗಳ ಹಿಂದೆ ಕಟ್ಟಿರುವ ಕುದುರೆಗಳು. ಹೀಗೆ ನಾಲ್ಕು ಕುದುರೆಗಳಾದವು. ಅವುಗಳನ್ನು ಕಟ್ಟಲು ವಾಗಿಂದ್ರಿಯದ ಅಭಿಮಾನಿನಿಯಾದ ಪಾರ್ವತೀ ದೇವಿಯರು ನಾಗಾಕಾರದಿಂದ (ಸರ್ಪಾಕಾರ) ಅಶ್ವಗಳನ್ನು ಬಿಗಿದಿರುವ ರಜ್ಜು (ಹಗ್ಗ) ವಾಗಿರುವರು. ಮನೋನಿಯಾಮಕರಾದ ರುದ್ರದೇವರು ಕುದುರೆಗಳನ್ನು

ಮನೆಯ ಮುಂದೆ ಶ್ರೀತುಳಸಿಯ ವನ ಕಂಗೊಳಿಸುತ್ತಿರಲಿ

ನಡೆಸುವ ಸಾರಥಿಯಾಗಿರುತ್ತಾರೆ. ಈ ರೀತಿಯ ರಥ ಚಿಂತನೆಯನ್ನು ನಡೆಸುವ ಮೂಲಕ ನಮ್ಮ ದೇಹವನ್ನು ಭಗವಂತನ ವಿಹಾರಕ್ಕೆ ಅರ್ಪಿಸಬೇಕು.

ಎರಡನೆಯದಾಗಿ ನಮ್ಮ ಶರೀರವನ್ನು ಶ್ರೀಹರಿಯ ವೀಣೆ ಎಂದೂ ಭಾವಿಸಬೇಕು. ಪ್ರಸಿದ್ಧವಾದ ಮನುಷ್ಯ ಸಂಬಂಧಿಯಾದ ಈ ವೀಣೆಯೂ ಕೂಡ ವೇದಾನುಸಾರಿಯೇ ಆಗಿರುತ್ತದೆ.

ಯಾವ ರೀತಿ ದೇವತಾ ವೀಣೆಯಲ್ಲಿ ಶಿರೋಭಾಗವಿದೆಯೋ ಅದೇ ರೀತಿ ಮಾನುಷ ವೀಣೆಯಲ್ಲಿಯೂ ಶಿರೋಭಾಗವಿರುತ್ತದೆ. ದೇವತಾ ವೀಣೆಯಲ್ಲಿ ಉದರವಿರುವಂತೆ ಮನುಷ್ಯ ವೀಣೆಯಲ್ಲೂ 'ಅಂಬ್ರುಣಂ' ಎಂಬುದು ಉದರ ಸ್ಥಾನೀಯವಾಗಿದೆ. ದೈವೀವೀಣೆಯಲ್ಲಿ ಜಿಹ್ವೆ (ನಾಲಿಗೆ)ಯಿರುವಂತೆ ಮಾನುಷೀ ವೀಣೆಯಲ್ಲಿಯೂ ಶೂಕಾ ಅಂದರೆ ದಂಡ (ಉದ್ದವಾಗಿರತಕ್ಕ ಕೋಲು) ಇರುವುದು. ದೈವೀ ವೀಣೆಯಲ್ಲಿ ಬೆರಳುಗಳು ಇರುವಂತೆ ಮಾನುಷ ವೀಣೆಯಲ್ಲಿ ತಂತಿಗಳು ಇರುವುವು. ದೇವವೀಣೆಯಲ್ಲಿ ಕಂಠದಿಂದ ಹೊರಡತಕ್ಕ ಮಂಜುಲವೇ ಆಗಲಿ ಘೋರವೇ ಆಗಲಿ ಧ್ವನಿಗಳು ಹೇಗೋ, ಹಾಗೆಯೇ ಮಾನುಷೀ ವೀಣೆಯಲ್ಲಿಯೂ ತಂತಿಭೇದದಿಂದ ಮಂಜುಲಾದಿ ಭೇದವುಳ್ಳ ಧ್ವನಿಯು ವ್ಯಕ್ತವಾಗುವುದು. ದೈವೀ ವೀಣೆಯು ಚರ್ಮ ಹಾಗೂ ರೋಮಗಳಿಂದ ಮುಚ್ಚಲ್ಪಟ್ಟಿರುವಂತೆ ಮಾನುಷೀ ವೀಣೆಯೂ ಯೋಗ್ಯಾವರಕಗಳಿಂದ ಮುಚ್ಚಲ್ಪಟ್ಟಿರುತ್ತದೆ.

ಈ ರೀತಿ ನಮ್ಮ ಪ್ರಸಿದ್ಧ ವೀಣೆಗೂ ಹಾಗೂ ದೇಹವೆಂಬ ವೀಣೆಗೂ ಸಾಮ್ಯವನ್ನು ಚಿಂತಿಸಿ, ದೇಹವೆಂಬ ದೈವೀವೀಣೆಯನ್ನು ಭಗವಂತನು ನುಡಿಸುವನು ಎಂದು ಚಿಂತಿಸಬೇಕು. ಅಲ್ಲದೆ ಕೇವಲ ನನ್ನ ಶರೀರ ಮಾತ್ರ ದೈವೀ ವೀಣೆಯಲ್ಲ. ಬ್ರಹ್ಮಾದಿ ದೇವತೆಗಳ ಶರೀರಗಳೂ ಕೂಡ ಭಗವಂತನ ವೀಣೆ ಎಂದು ಚಿಂತಿಸಬೇಕು.


**ಗಮನಿಸಿ**

**ಉಡುಪಿಯ ಶಾಖಾಮಠ ಪಲಿಮಾರಿನ ದೂರವಾಣಿ ಸಂಖ್ಯೆ ಬದಲಾಗಿದೆ.**

**ಬದಲಾದ ದೂರವಾಣಿ ಸಂಖ್ಯೆ: 0820–2004368**

**ಶ್ರೀಪಲಿಮಾರುಮಠ, ಪಲಿಮಾರು–574 112**


**ಎಂದಿಗೂ ನಾಸ್ತಿಕರಾಗಬೇಡಿ; ನಾಸ್ತಿಕವಾದಕ್ಕೆ ತಲೆಬಾಗಬೇಡಿ**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅದ್ವೇಲಕ್ಷ್ಮೀಶಾಚಾರ್ಯ

## ಧರ್ಮಪತ್ನಿಯನ್ನೇ ಮಾರಿ ತೀರಿಸಿದ ಋಣ

ಹರಿಶ್ಚಂದ್ರ ಚರಿತೆಯಲ್ಲಿ ಕುತೂಹಲಿಗಳಾದ ಜೈಮಿನಿಗಳು ಮುಂದಿನ ವೃತ್ತಾಂತವನ್ನು ಪಕ್ಷಿಗಳಲ್ಲಿ ಕೇಳಿದಾಗ, ಮುಂದಿನ ಕಥೆಯನ್ನು ಈ ರೀತಿ ಹೇಳಿದವು. ಹರಿಶ್ಚಂದ್ರ ಭಾರ್ಯಾಪುತ್ರ ಸಮೇತನಾಗಿ ಹೊರಟು ಪವಿತ್ರವಾದ ವಾರಣಾಸೀ ಕ್ಷೇತ್ರಕ್ಕೆ ಬಂದ. ಆಗಲೇ ತಿಂಗಳ ಕೊನೇ ದಿನ. ಆಗಲೇ ಮಧ್ಯಾಹ್ನವಾಗಿದೆ. ವಿಶ್ವಾಮಿತ್ರರು ಕಾಣಿಸಿಕೊಂಡರು. ದಕ್ಷಿಣೆ ಬರಲಿಲ್ಲವೆಂದರು. ಹರಿಶ್ಚಂದ್ರ ದಿಗ್ಭ್ರಾಂಗತನಾದ. ಇನ್ನು ಅರ್ಧ ದಿವಸ ಇದೆ ಎಂದ. ಮತ್ತೆ ಬರುವೆನೆಂದು ಹೊರಟರು ವಿಶ್ವಾಮಿತ್ರರು. ಹರಿಶ್ಚಂದ್ರ ಪರಿತಪಿಸಿದ. ಮುಕ್ಕಾಲು ಸಂಪಾದನೆ ಇಲ್ಲ ಹೇಗೆ ಕೊಟ್ಟ ಮಾತು ಉಳಿಸಲಿ. ಬ್ರಾಹ್ಮಣನಿಗೆ ಕೊಟ್ಟ ಭಾಷೆಯನ್ನು ಈಡೇರಿಸದೆ ಯಾವ ನರಕದ ಬಾಗಿಲಿಗೆ ಬೀಳಲಿ. ಹೀಗೆ ಶಾರೀರಿಕವಾಗಿ ಮಾನಸಿಕವಾಗಿ ಬಳಲಿ ತೊಳಲಾಡುವ ಹರಿಶ್ಚಂದ್ರನನ್ನು ಕುರಿತು ಮಡದಿ ಶೈಬ್ಯೆ ಹೇಳಿದಳು. ಸತ್ಯವಚನದಿಂದ ಭ್ರಷ್ಟನಾದವ ಸ್ಮಶಾನದಂತೆ ಬಹಿಷ್ಕೃತನಾಗುತ್ತಾನೆ. ಕೊಟ್ಟ ಮಾತಿನ ರಕ್ಷಣೆ ಆದ್ಯ ಕರ್ತವ್ಯ. ಪತ್ನಿಯ ಈ ಮಾತು ಕೇಳಿ ತನ್ನ ಅಸಹಾಯಕತೆಗೆ ಗಟ್ಟಿಯಾಗಿ ಅತ್ತು ಬಿಟ್ಟ. ವಚನ ಪರಿಪಾಲನೆಯ ಮಾರ್ಗವೇನಾದರೂ ತಿಳಿದರೆ ಹೇಳೆಂದ. ಆಗ ಶೈಬ್ಯೆ ತನ್ನ ಮಾತಿನಿಂದ ಹರಿಶ್ಚಂದ್ರನಲ್ಲಿ ಭರವಸೆಯನ್ನು ತುಂಬುತ್ತಾಳೆ. ನಾನು ನನ್ನ ಮಗ ಇದ್ದೇವೆ ತಾನೆ. ನಮ್ಮನ್ನು ಮಾರಿ ಬಂದ ಗಳಿಕೆಯಲ್ಲಿ ಮಾತು ಉಳಿಸಿ. ಪತ್ನಿಯ ಮಾತು ಕೇಳಿ ರಾಜನ ತಲೆಗೆ ಬಂಡೆ ಬಿದ್ದ ಅನುಭವ. ಮೂರ್ಛಿತನಾಗಿ ಮತ್ತೆ ಎಚ್ಚತ್ತು ನುಡಿದ. ಪತ್ನಿಯಿಂದ ಇಂತಹ ಮಾತನ್ನು ಕೇಳಿಕೊಂಡು ಬದುಕಿರುವ ದುರ್ಭಾಗ್ಯನಾದ ನನ್ನ ಜನ್ಮಕ್ಕೆ ಧಿಕ್ಕಾರ ಎನ್ನುತ್ತ ಮೂರ್ಛಿತನಾಗಿ ಮತ್ತೆ ಬಿದ್ದ. ಲೋಕನಾಥನಾಗಿದ್ದ ತನ್ನ ಪತಿ ಅನಾಥನಂತೆ ಭೂಮಿಯಲ್ಲಿ ಬಿದ್ದುದ್ದನ್ನು ಕಂಡು ಶೈಬ್ಯೆ ತಾನೂ ಮೂರ್ಛಿತಳಾದಳು. ತಂದೆ ತಾಯಿಯರಿಬ್ಬರೂ ಮೂರ್ಛಿತರಾದುದನ್ನು ಕಂಡು ಮಗು ರೋಹಿತ ತಾನೂ ಹಸಿವಿನಿಂದ ಬೊಬ್ಬಿಡುತ್ತಿದ್ದಾನೆ. ಇಷ್ಟೊತ್ತಿಗೆ ಕಾಲಾನನಸನ್ನಿಭರಾಗಿ ವಿಶ್ವಾಮಿತ್ರರು ಮತ್ತೆ ಪ್ರತ್ಯಕ್ಷರಾದರು. ದಕ್ಷಿಣೆ ಕೊಡೆಂದರು. ಸತ್ಯದ ಪಂಚಾಂಗದ ಮೇಲೆ ಜಗತ್ ಸೌಧ ನಿಂತಿದೆ. ನೀನು ಮಾತನ್ನು ಉಳಿಸಿಕೊಳ್ಳುತ್ತಿಲ್ಲ. ಸೂರ್ಯ ಅಸ್ತಾಚಲವನ್ನು ಸೇರುವ ವೇಳೆ ಕೊಡದೇ

ಜೀವನದಲ್ಲಿ ಪ್ರತಿಯೊಂದು ವಿಷಯವನ್ನು ಧನಾತ್ಮಕವಾಗಿಯೇ ಚಿಂತಿಸಿರಿ

ಹೋದರೆ ಶಪಿಸಿ ಬಿಡುವೆನೆಂದು ಆರ್ಭಟಿಸಿ ಹೋದರು. ಸೂರ್ಯಾಸ್ತಮಾನಕ್ಕಿನ್ನೇನು ಕೆಲವು ಕ್ಷಣಗಳು. ಪತ್ನಿ ಮತ್ತೆ ಮತ್ತೆ ಮಾರಾಟದ ಮಾತುಗಳನ್ನೇ ಆಡುತ್ತಿದ್ದಾಳೆ. ಅನ್ಯ ಮಾರ್ಗವಿಲ್ಲ. ಕೊಟ್ಟ ಮಾತನ್ನುಳಿಸುವುದಕ್ಕೆ ಯಾವ ತ್ಯಾಗಕ್ಕೂ ಸಿದ್ಧನಾಗಬೇಕಿದೆ. ಎದ್ದ, ಅತ್ತು ಅತ್ತು ಕಣ್ಣೀರು ಬತ್ತಿ ಹೋಗಿದೆ. ನಾಗರೀಕರನ್ನು ಉದ್ದೇಶಿಸಿ ಹೇಳಿದ 'ಯಾರು, ಏನು, ಯಾಕೆಂದು ಈ ಪಾಪಿಯನ್ನು ಕೇಳಬೇಡಿ. ಹೆಂಡತಿಯನ್ನು ಮಾರಿ ಬದುಕುವ ಪಾಡು ನನಗೆ ಒದಗಿದೆ. ದಾಸಿಯಂತೆ ನನ್ನಾಕೆ ನಿಮ್ಮಲ್ಲಿ ದುಡಿಯುತ್ತಾಳೆ. ಅಪೇಕ್ಷೆಯುಳ್ಳವರು ಮುಂದೆ ಬನ್ನಿ' ಈ ರೀತಿ ಮತ್ತೆ ಮತ್ತೆ ಕೂಗಿದ. ಆಗ ವೃದ್ಧ ಬ್ರಾಹ್ಮಣ ಅಲ್ಲಿಗೆ ಬಂದ. ನನಗೆ ಕೆಲಸದವಳ ಅವಶ್ಯಕತೆ ಇದೆ. ನನ್ನ ಮಡದಿ ಸುಕುಮಾರಿ. ಮನೆಗೆಲಸಕ್ಕೆ ಅವಳಿಗೆ ಜನ ಬೇಕು. ಅವಳ ಮೌಲ್ಯವೇನು? ಎಂದು ಕೇಳಿ ಹೇಳಿದ ಹಣ  ತೆತ್ತು ಶೈಬ್ಯೆಯನ್ನು ತನ್ನ ತೊತ್ತಾಗಿ ಮಾಡಿಕೊಂಡ. ಆ ಬ್ರಾಹ್ಮಣನ ಹಿಂದೆ ಆಕೆ ಹೊರಟಾಗ ತಾಯಿಯ ಅಗಲುವಿಕೆಯನ್ನು ಸಹಿಸದ ರೋಹಿತ ಅಮ್ಮ ನಾನೂ ಬರುವೆನೆಂದು ಬೊಬ್ಬಿಟ್ಟಾಗ ಹೆತ್ತ ಕರುಳು ಹೀಗೆಂದಿತು ಬ್ರಾಹ್ಮಣನಲ್ಲಿ ನನ್ನ ಮಗುವಿಗೂ  ಕ್ರಯ ಕೊಟ್ಟು ನಿಮ್ಮದಾಗಿಸಿಕೊಳ್ಳಿ ಎಂದಾಗ ರೋಹಿತನಿಗೂ ಕ್ರಯಕೊಟ್ಟು ತಾಯಿ ಮಗುವನ್ನು ಕರೆದುಕೊಂಡು ಹೋದ. ಈ ಕರುಳು ಹಿಂಡುವ ದೃಶ್ಯವನ್ನು ನೋಡಿ ಹರಿಶ್ಚಂದ್ರ ಚಿಂತಿಸಿದ. ಅಲ್ಲಾ ಇದನ್ನು ನೋಡಿಯೂ ಇನ್ನು ತಾನು ಬದುಕಿರುವೆನೇ, ಇನ್ನು ನನ್ನ ಬದುಕಿನಲ್ಲಿ ಹೆಂಡತಿ ಮಗುವಿನ ದರ್ಶನ ಮಾಡುವ ಯೋಗ ಇದ್ದೀತೆ. **'ದೈವಾಧೀನಾಂ ದಶಾಂ ಪ್ರಾಪ್ತಃ ನಮೃತೋಽಸ್ಮಿತಥಾಪಿಧಿಕ್'** ಆ ದುಡ್ಡನ್ನು ವಿಶ್ವಾಮಿತ್ರರಿಗೆ ಅರ್ಪಿಸಿದ. ಅದರಿಂದ ತೃಪ್ತಿ ಕಾಣದ ಅವರು ನನ್ನಂತಹ ಮಹಾ ಬ್ರಾಹ್ಮಣನಿಗೆ ನೀನು ಕೊಟ್ಟ ದಕ್ಷಿಣೆ ಅತ್ಯಲ್ಪ. ಅದೂ ಅತ್ತು ಬಹಳ ಕಷ್ಟದಿಂದ ಕೊಟ್ಟಿರುವೆ. ಸಾಕಾಗದು ಎಂದಾಗ, ಇನ್ನೂ ಕೊಡುತ್ತೇನೆ ಕಾಲಾವಕಾಶ ಕೊಡಿ ಎಂದು ಬೇಡಿದ ಹರಿಶ್ಚಂದ್ರ ಹಗಲಿನ ಕಾಲು ಭಾಗವಿರುವುದು ಬೇಗ ಕೊಡು ಎಂದು ಅದೃಶ್ಯರಾದರು ವಿಶ್ವಾಮಿತ್ರರು. ಹರಿಶ್ಚಂದ್ರ ಮತ್ತೆ ಕೂಗಿ ಕರೆದ 'ದುಡ್ಡಿನ ಆಸೆಗಾಗಿ ನಾನು ನನ್ನನ್ನೇ ಮಾರಿಕೊಳ್ಳುತ್ತಿದ್ದೇನೆ ಸೂರ್ಯ ಕಂತುವುದರೊಳಗಾಗಿ ನನ್ನ ಮಾರಾಟವಾಗಬೇಕಾಗಿದೆ. ಅವಶ್ಯಕತೆ ಇದ್ದವರು ಮುಂದೆ ಬನ್ನಿ. ಆಗೊಬ್ಬ ಚಂಡಾಲ ಬಂದ. ನಾಲ್ಕಾರು ನಾಯಿಗಳು ಬೇರೆ ಸುತ್ತ ಕರಾಳವಾದ ದಂಡ ಒಂದು ಕೈಯಲ್ಲಿ, ನನಗೊಬ್ಬ ಸಹಾಯಕ ಬೇಕಾಗಿದ್ದಾನೆ. ನಿನ್ನನ್ನು ನಾನು ಪಡೆಯುತ್ತೇನೆ. ನಿನ್ನ ಕ್ರಯವೆಷ್ಟು? ನಾನು ಚಂಡಾಲ ಪ್ರವೀರನೆಂದು ನನ್ನ ಹೆಸರು. ಸ್ಮಶಾನದಲ್ಲಿ ನನ್ನ ಕೆಲಸ. ಈ ಮಾತು ಕೇಳಿ ರಾಜ ಹಿಂದೇಟು ಹಾಕಿದ.

**(ಸಶೇಷ)**

**ಅತಿಥಿ ಸತ್ಕಾರವನ್ನು ತಪ್ಪದೆ ನಡೆಸಿರಿ**

ಪುರಾಣ ಪರಿಚಯ

ಭಾಗ-29

# ಶ್ರೀವಿಷ್ಣುಪುರಾಣ

## ಹಿರಿತನಕ್ಕೆ ವಯಸ್ಸು ಮುಖ್ಯವಲ್ಲ, ತಪಸ್ಸು ಮುಖ್ಯ.

-ಸ್ಫೂರ್ತಿ

'ದಕ್ಷ ಪ್ರಜಾಪತಿಯು ಗಂಡು ಮಕ್ಕಳಿಂದ ಪ್ರಜಾವೃದ್ಧಿಯಾಗದ್ದನ್ನು ಕಂಡು ವೈರುಣಿ (ಅಸಿಕ್ನಿ)ಯಲ್ಲಿ ಅರವತ್ತು ಹೆಣ್ಣುಮಕ್ಕಳನ್ನು ಪಡೆದನು. ಅವರಲ್ಲಿ ಹತ್ತು ಹೆಣ್ಮಕ್ಕಳನ್ನು ಧರ್ಮನಿಗೆ, ಹದಿಮೂರು ಕಶ್ಯಪರಿಗೆ, ಇಪ್ಪತ್ತೇಳು ಚಂದ್ರನಿಗೆ, ನಾಲ್ಕು ಅರಿಷ್ಟನೇಮಿಗೆ, ಎರಡು ಬಹುಪುತ್ರರಿಗೆ, ಎರಡು ಅಂಗಿರಸರಿಗೆ, ಎರಡು ಹೆಣ್ಮಕ್ಕಳನ್ನು ಕೃಶಾಶ್ವರಿಗೆ ವಿವಾಹ ಮಾಡಿಕೊಟ್ಟನು' ಎಂದು ಪರಾಶರರು ತಿಳಿಸಲು ಮೈತ್ರೇಯರು ಪ್ರಶ್ನಿಸುತ್ತಾರೆ.

'ಹಿಂದೆ ದಕ್ಷನು ಚತುರ್ಮುಖನ ಬಲಗೈ ಅಂಗುಷ್ಠದಿಂದ ಜನಿಸಿದನೆಂದು ನಾನು ಕೇಳಿದ್ದೆ. ಅವನು ಮತ್ತೆ ಪ್ರಚೇತಸರ ಮಗನಾಗಿ ಹುಟ್ಟುವುದು ಹೇಗೆ? ಇದೇ ದಕ್ಷನು ಚಂದ್ರನ ಸಾಕುಮಗಳಾದ ಮಾರಿಷೆಯಲ್ಲಿ ಪ್ರಚೇತಸರಿಂದ ಜನಿಸಿ ಚಂದ್ರನಿಗೆ ದೌಹಿತ್ರ (ಮಗಳಮಗ)ನಾದನು. ಅಂದರೆ ಚಂದ್ರನು ದಕ್ಷನಿಗೆ ಅಜ್ಜನ ಸ್ಥಾನದಲ್ಲಿರುವವನು. ಆದರೆ ಮುಂದೆ ದಕ್ಷನು ತನ್ನ ಇಪ್ಪತ್ತೇಳು ಹೆಣ್ಮಕ್ಕಳನ್ನು ಚಂದ್ರನಿಗೆ ಕೊಟ್ಟು ವಿವಾಹ ಮಾಡಿದನೆಂದು ತಿಳಿಸಿದಿರಿ. ಇದು ಹೇಗೆ ಸಾಧ್ಯ? ಚಂದ್ರನ ಮೊಮ್ಮಗನಾದ ದಕ್ಷನು ಅದೇ ಚಂದ್ರನಿಗೆ ಹೆಣ್ಣುಕೊಟ್ಟು ಮಾವನಾಗುವುದಾದರೂ ಹೇಗೆ? ಮೊಮ್ಮಗನದ್ದು ಕಿರಿಯ ಸ್ಥಾನ, ಮಾವನದ್ದು ಹಿರಿಯ ಸ್ಥಾನವಷ್ಟೇ'.

ಪರಾಶರರು ಉತ್ತರಿಸುತ್ತ ಸೃಷ್ಟಿ ಹಾಗೂ ಸಂಹಾರವು ಯಾವತ್ತೂ ಇರುವಂಥದ್ದು. ಜ್ಞಾನಿಗಳು ಈ ವಿಷಯದಲ್ಲಿ ಮೋಹಕ್ಕೊಳಗಾಗುವುದಿಲ್ಲ. ದಕ್ಷನೇ ಮೊದಲಾದವರು ಪ್ರತಿಯುಗದಲ್ಲಿಯೂ ಜನಿಸಿ ಬರುತ್ತಾರೆ. ಆದ್ದರಿಂದ ಒಮ್ಮೆ ಚತುರ್ಮುಖನಿಂದ ಜನಿಸಿ ಬಂದರೆ ಮತ್ತೊಮ್ಮೆ ಪ್ರಚೇತಸರಿಂದ ಜನಿಸಿ ಬರುತ್ತಾನೆ. ಇದರಲ್ಲಿ ಗೊಂದಲಕ್ಕೆ ಅವಕಾಶವಿಲ್ಲ.

ಹಿಂದೆ ಕಿರಿಯರು, ಹಿರಿಯರು ಎಂಬುವುದು ವಯಸ್ಸಿನಿಂದ ಗುರುತಿಸಲ್ಪಡುತ್ತಿರಲಿಲ್ಲ. ಪ್ರತಿಯೊಬ್ಬರ ತಪಸ್ಸು ಹಾಗೂ ಪ್ರಕೃಷ್ಟವಾದ ಭಕ್ತಿಗನುಗುಣವಾಗಿ ಕಿರಿಯರು ಹಾಗೂ ಹಿರಿಯರೆಂದು ಗುರುತಿಸಲ್ಪಡುತ್ತಿತ್ತು.

**ಕಾನಿಷ್ಠ್ಯಂ ಜ್ಯೈಷ್ಠ್ಯಮಪ್ಯೇಷಾಂ ಪೂರ್ವಂ ನಾಭೂದ್ದ್ವಿಜೋತ್ತಮ ।**

**ತಪ ಏವ ಗರಿಯೋಽಭೂತ್ ಪ್ರಭಾವಶ್ಚೈವ ಕಾರಣಮ್** ॥ (ವಿ.ಪು.1-15-84)

ರಾಮಾಯಣ-ಮಹಾಭಾರತ-ಭಾಗವತವನ್ನು ಕೇಳುತ್ತಿರಿ, ಓದುತ್ತಿರಿ

ಯಾರು ಹೆಚ್ಚು ತಪಸ್ಸು, ಭಕ್ತಿಯುಳ್ಳವರೋ, ಅವರು ಹಿರಿಯರೆಂದು, ಕಡಿಮೆ ತಪಸ್ಸು, ಭಕ್ತಿಯುಳ್ಳವರು ಕಿರಿಯರೆಂದೂ ಗುರುತಿಸಲ್ಪಡುತ್ತಿತ್ತು. ಆದ್ದರಿಂದಲೇ ದಕ್ಷನು ಚಂದ್ರನ ಮೊಮ್ಮಗನಾಗಿದ್ದು ಹೆಣ್ಣುಕೊಟ್ಟ ಮಾವನಾಗಬಹುದೇ ಎಂದು ಸಂಶಯಪಡುವಂತಿಲ್ಲ. ಚಂದ್ರನು ತಪಸ್ಸು ಹಾಗೂ ಭಗವದ್ಭಕ್ತಿಯಲ್ಲಿ ದಕ್ಷನಿಗಿಂತ ಬಹಳ ಎತ್ತರದಲ್ಲಿದ್ದಾನೆ. ಅದರಿಂದಲೆ ಅವನು ದಕ್ಷನ ಅಳಿಯನೆಂದು ಪರಿಗಣಿಸಿದರೂ ಹಿರಿಯನೇ ಆಗುತ್ತಾನೆ ಎಂದು ಉತ್ತರಿಸಿ ಮುಂದೆ ದಕ್ಷನ ಹೆಣ್ಮಕ್ಕಳ ವಂಶವಿಸ್ತಾರವನ್ನು ವಿವರಿಸುತ್ತ– ದಕ್ಷನು ತನ್ನ ಹತ್ತು ಹೆಣ್ಮಕ್ಕಳನ್ನು ಧರ್ಮನಿಗೆ ಕೊಟ್ಟು ವಿವಾಹ ಮಾಡಿದನು.

ಅರುಂಧತೀ, ವಸು, ಯಾಮೀ, ಲಂಬಾ, ಭಾನು, ಮರುತ್ವತೀ, ಸಂಕಲ್ಪಾ, ಮುಹೂರ್ತಾ, ಸಾಧ್ಯಾ ಹಾಗೂ ವಿಶ್ವಾ–ಇವರು ಹತ್ತು ಧರ್ಮನ ಪತ್ನಿಯರು.

ಇವರಲ್ಲಿ ವಿಶ್ವಾಳಿಂದ ವಿಶ್ವೇದೇವತೆಗಳು ಜನಿಸಿದರು. ಸಾಧ್ಯಾಳಿಂದ ಸಾಧ್ಯರ ಗಣ ಜನಿಸಿತು. ವಸುವಿನಿಂದ ಅಷ್ಟವಸುಗಳು ಜನಿಸಿದರು. ಮರುತ್ವತಿಯಿಂದ ಮರುತ್ವಂತರು, ಜನಿಸಿದರು. ಉಳಿದ ಪತ್ನಿಯರಿಂದಲೂ ಪ್ರಜಾವೃದ್ಧಿಯಾಯಿತು. ವಸ್ತುತಃ ಭಾಗವತದಲ್ಲಿ ಬರುವ ಧರ್ಮನ ಹತ್ತು ಪತ್ನಿಯರಿಗೂ, ವಿಷ್ಣುಪುರಾಣ ತಿಳಿಸುವ ಹತ್ತು ಧರ್ಮಪತ್ನಿಯರಿಗೂ ಹೆಸರಿನಲ್ಲಿ, ಮಕ್ಕಳು, ಅವರ ಕಾರ್ಯದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಅದನ್ನು ಮನ್ವಂತರ ಭೇದದಿಂದ, ಸರಿಹೊಂದಿಸಬಹುದು. ಅಥವಾ ಭಾಗವತದಲ್ಲಿ ತಿಳಿಸಿದ ಧರ್ಮನ ಪತ್ನಿಯರನ್ನೇ ಬೇರೆ ಹೆಸರಿನಿಂದ ವಿಷ್ಣುಪುರಾಣ ಉಲ್ಲೇಖಿಸಿದೆ ಎಂದು ತಿಳಿಯಬಹುದು. ಉದಾ: ಭಾಗವತದಲ್ಲಿ ಕಕುಬ್, ಜಾಮಿ ಎಂದು ತಿಳಿಸಿದ ಧರ್ಮನ ಪತ್ನಿಯರನ್ನೇ ವಿಷ್ಣುಪುರಾಣವು ಅರುಂಧತೀ, ಯಾಮಿ ಎಂದು ತಿಳಿಸಿದೆ. ಏಕೆಂದರೆ ಉಳಿದ ಎಂಟು ಧರ್ಮನ ಪತ್ನಿಯರ ಹೆಸರು ಎರಡು ಪುರಾಣಗಳಲ್ಲಿಯೂ ಸಮಾನವಾಗಿದೆ. ಇಲ್ಲಿ ಬರುವ ಅರುಂಧತೀ ವಸಿಷ್ಠರ ಪತ್ನಿಯಲ್ಲ. ಅವಳಿಗಿಂತ ಬೇರೆಯವಳು. ಏಕೆಂದರೆ ವಸಿಷ್ಠ ಪತ್ನಿಯಾದ ಅರುಂಧತೀ ಕರ್ದಮ–ದೇವಹೂತಿಯರ ಮಗಳು. ಅಷ್ಟವಸುಗಳನ್ನು ವಿಷ್ಣುಪುರಾಣವು ಭಾಗವತಕ್ಕಿಂತ ಬೇರೆಯೇ ಹೆಸರಿನಿಂದ ಉಲ್ಲೇಖಿಸುತ್ತದೆ. ಉದಾ: ಭಾಗವತ ವಸ್ತು ಎಂದು ಕರೆದ ವಸುವನ್ನು ವಿಷ್ಣುಪುರಾಣವು ಪ್ರಭಾಸ ಎಂದು ಕರೆದಿದೆ. ವಸುತ್ತಃ ಈ ಎರಡು ಒಬ್ಬನೇ ವಸುವಿನ ನಾಮಾಂತರಗಳು. ಏಕೆಂದರೆ ಎರಡೂ ಪುರಾಣವು ದೇವಶಿಲ್ಪಿಯಾದ ವಿಶ್ವಕರ್ಮಾ ಇವರ ಮಗನೆಂದು ಉಲ್ಲೇಖಿಸಿವೆ.

**(ಸಶೇಷ)**

ಇಂದ್ರಿಯಗಳೆಂಬ ಕುದುರೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ

# ತತ್ವವಾದದಿಂದಲೆ ಮೋಕ್ಷಪ್ರಾಪ್ತಿ

–ಅನಂತಕೃಷ್ಣಾಚಾರ್ಯ

'ಭಗವಂತನ ಉಪದೇಶಗಳೇ ಧರ್ಮಾಧರ್ಮಗಳ ವಿಷಯದಲ್ಲಿ ಪರಮ ಪ್ರಮಾಣವೆನ್ನೋಣ. ಅದಕ್ಕಾಗಿ ಯಾರಿಂದಲೂ ರಚಿಸಲ್ಪಡದ ವೇದಗಳನ್ನು ಒಪ್ಪುವ ಅವಶ್ಯಕತೆಯಿಲ್ಲ ಎನ್ನುವಂತಿಲ್ಲ. ಏಕೆಂದರೆ ಇಲ್ಲಿಯೂ ಸಮಸ್ಯೆ ಇದೆ. ಮೊದಲು ಭಗವಂತನು ಯಾರೆಂದು ತಿಳಿದರೆ ಬಳಿಕ ಅವನ ಉಪದೇಶಗಳನ್ನು ಪರಮಪ್ರಮಾಣವೆನ್ನಬಹುದು. ಆದರೆ ಅವನ ಉಪದೇಶವನ್ನರಿಯದೆ ಎಂದಿಗೂ ಅವನ ಪರಿಚಯವಾಗದು. ದೇವರು ಯಾರೆಂದು ತಿಳಿಯದೆ ಅವನ ಉಪದೇಶದಲ್ಲಿ ನಂಬಿಕೆ ಬರದು. ಉಪದೇಶವನ್ನರಿಯದೆ ದೇವರಲ್ಲಿ ನಂಬಿಕೆ ಇರದು. ಹೀಗೆ ಇದೊಂದು ಕಗ್ಗಂಟು. ಆದ್ದರಿಂದ ದೇವರನ್ನು ಅರಿಯಲು ಯಾರಿಂದಲೂ ರಚಿಸಲ್ಪಡದ ಅಪೌರುಷೇಯವಾದ, ಅನಾದಿಯಾದ ವೇದವನ್ನು ಪರಮಪ್ರಮಾಣವೆಂದು ಒಪ್ಪಲೇ ಬೇಕಾಗುತ್ತದೆ'.

ಹೀಗೆ ಆಚಾರ್ಯರು ವೇದದ ಮಹತ್ವವನ್ನು ಸಾರುತ್ತಾ 'ವೇದವನ್ನೊಪ್ಪದ; ವೇದಗಳ ಅಭಿಪ್ರಾಯಕ್ಕೆ ವಿರುದ್ಧವಾದ ಶಾಸ್ತ್ರಗಳೆಲ್ಲವೂ ಕೆಟ್ಟಶಾಸ್ತ್ರಗಳೆಂದೇ ಅಭಿಪ್ರಾಯ. ಇಂಥ ಕೆಟ್ಟ ಶಾಸ್ತ್ರಗಳಲ್ಲಿ ಕೆಟ್ಟ ಹಠಮಾರಿತನವನ್ನು ಹೊಂದಿದರೆ ಭಗವಂತನ ಬಗೆಗೆ ತಪ್ಪು ಕಲ್ಪನೆಯನ್ನೇ ಬೆಳೆಸಿಕೊಂಡಂತಾಗುತ್ತದೆ. ಹೀಗೆ ಭಗವಂತನನ್ನು ತಪ್ಪಾಗಿ ತಿಳಿದಿದ್ದರಿಂದಲೇ ಅತ್ಯಂತ ಭಯಾನಕವಾದ ದುಃಖದ ನೆಲೆಯಾದ ನಾಶರಹಿತವಾದ ಲೋಕವು ಹಠಮಾರಿಗಳಿಗೆ ತಪ್ಪಿದ್ದಲ್ಲ'.

'ನಾವು ವೇದ–ಶಾಸ್ತ್ರಗಳ ಆಧಾರದಿಂದ ಪ್ರತಿಪಾದಿಸಿದ ಸಿದ್ಧಾಂತವನ್ನು ಪ್ರಮಾಣವೆಂದು ಅಂಗೀಕರಿಸಿ ಆ ಮಾರ್ಗದಲ್ಲಿ ಭಗವಂತನನ್ನು ಆರಾಧಿಸಿದರೆ ಭಗವಂತನು ಈ ಸಂಸಾರದಿಂದ ಬಿಡುಗಡೆಯನ್ನು ಕರುಣಿಸುತ್ತಾನೆ. ಕಣ್ಣಿಗೆ ಗೋಚರಿಸದ ಭಗವಂತನೂ ಗೋಚರಿಸುತ್ತಾನೆ. ತನ್ನ ಲೋಕಕ್ಕೆ ಕರೆದೊಯ್ಯುತ್ತಾನೆ. ಅಲ್ಲಿ ಮುಕ್ತರು ಆನಂದಸ್ವರೂಪರಾಗಿ ಬಗೆಬಗೆಯ ವಿಷಯಭೋಗಗಳನ್ನು ಅನುಭವಿಸುತ್ತಾರೆ. ಇದು ವೇದ–ಶಾಸ್ತ್ರಗಳ ಅಭಿಪ್ರಾಯದಿಂದ ಒಡಮೂಡಿದ ಸಿದ್ಧಾಂತ'.

'ಹೀಗೆ ಪ್ರತಿಪಾದಿಸಿದಾಗ ಕೆಲವರು ನಿರ್ವಿಶೇಷ ಬ್ರಹ್ಮಪ್ರಾಪ್ತಿಯೇ ಮೋಕ್ಷವಾಗಿರುವಾಗ

ಸತ್ಯ, ಪ್ರಿಯ ಮತ್ತು ಹಿತನುಡಿಗಳು ನಿಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರಲಿ

ಅಲ್ಲಿ ಆನಂದ ಇರುವುದಾದರೂ ಹೇಗೆ? ಹಾಗೆ ಮೋಕ್ಷದಲ್ಲಿ ಆನಂದವಿದೆಯೆಂದರೆ ನಿರ್ವಿಶೇಷ ಬ್ರಹ್ಮನಲ್ಲಿ ವಿಶೇಷ ಬಂದಂತಾಗಿ ವೇದಗಳ ಅಭಿಪ್ರಾಯಕ್ಕೆ ವಿರುದ್ಧವಾಗುತ್ತದೆಂದು ಆಕ್ಷೇಪಿಸಬಹುದು. ಇದು ಸರಿಯಲ್ಲ. ನಿರ್ವಿಶೇಷಬ್ರಹ್ಮಪ್ರಾಪ್ತಿಯೇ ಮೋಕ್ಷವೆಂಬುದು ವೇದಗಳ ಅಭಿಪ್ರಾಯವಲ್ಲ. ಏಕೆಂದರೆ ಹಾಗೆ ಪ್ರತಿಪಾದಿಸಿದರೆ ಅನೇಕ ದೋಷಗಳು ಬರುತ್ತವೆ. ಉದಾ: ನಿರ್ವಿಶೇಷಬ್ರಹ್ಮಸ್ಥಿತಿಯೇ ಮೋಕ್ಷವೆಂದಾಗ 'ಯಾವಾಗ ನಿರ್ವಿಶೇಷ ಮೋಕ್ಷ'ವೆಂದು ಪ್ರಶ್ನೆ ಬರುತ್ತದೆ. ಅದಕ್ಕೆ ಜೀವ-ಬ್ರಹ್ಮೈಕ್ಯಜ್ಞಾನ ಪರಿಪಕ್ವವಾದ ಬಳಿಕ ನಿರ್ವಿಶೇಷ ಮೋಕ್ಷವೆಂದಾಗ ಯಾವ ವಿಶೇಷವೂ ಇಲ್ಲದ ಮೋಕ್ಷದಲ್ಲಿ 'ಐಕ್ಯಜ್ಞಾನಪರಿಪಕ್ವವಾದನಂತರ' ಎಂದು ಕಾಲವಿಶೇಷ ಬಂದಿತಲ್ಲವೆ. ನಿರ್ವಿಶೇಷನಲ್ಲಿ ವಿಶೇಷ ಬರುವುದೆಂತು? ಇದು ತನಗೆ ತಾನೇ ವಿರುದ್ಧವಾಗಿ ನುಡಿದಂತೆ.

ಇಷ್ಟೇ ಅಲ್ಲದೆ ಏನೂ ಇಲ್ಲದ ಮೋಕ್ಷವೆಂದರೆ ಬುದ್ಧಿ, ಇಂದ್ರಿಯಗಳು, ಅಂತಃಕರಣ, ಇದ್ಯಾವುದೂ ಇಲ್ಲವೆಂದಾಯಿತಷ್ಟೆ. ಇದೆಂತಹ ಪುರುಷಾರ್ಥ, ಜೀವ ಜೀವನದುದ್ದಕ್ಕೂ ಪ್ರಯತ್ನಿಸುವುದೇ ಆನಂದಪ್ರಾಪ್ತಿಗಾಗಿ. ಆ ಆನಂದವನ್ನು ಬುದ್ಧಿ, ಇಂದ್ರಿಯ, ಅಂತಃಕರಣ ಮುಂತಾದುವುಗಳು ಇದ್ದರೆ ಮಾತ್ರ ಅನುಭವಿಸಲು ಸಾಧ್ಯ. ಇದ್ಯಾವುದೂ ಇಲ್ಲವೆಂದರೆ ಮರದಗೊಂಬೆಯಂತಾಯಿತು ಮೋಕ್ಷದ ಅವಸ್ಥೆ. ಯಾವ ಮನುಷ್ಯನು ಮರದಗೊಂಬೆಯಾಗಲು ಬಯಸಿಯಾನು? ಆದ್ದರಿಂದ ನಿರ್ವಿಶೇಷ ಮೋಕ್ಷವೆಂಬುದು ವೇದ-ಶಾಸ್ತ್ರ ವಿರುದ್ಧವಾದ, ಅನುಭವಕ್ಕೆ ವಿರುದ್ಧವಾದ ವಿಚಾರ.

ಭಗವಂತನಲ್ಲಿ ಜ್ಞಾನವಿದೆ, ಪ್ರಯತ್ನವಿದೆ, ಇಚ್ಛೆಯಿದೆ. ಅವನಿಗೆ ಸ್ವಂತ ಸಾಮರ್ಥ್ಯದಿಂದಲೆ ಯಾವ ಅಶುಭ ಭೋಗಗಳೂ ಇಲ್ಲ. ಅಂತಹ ಭಗವಂತನು ತನ್ನನ್ನು ಭಕ್ತಿಯಿಂದ ಭಜಿಸಿದ ಭಕ್ತನನ್ನು ಬುದ್ಧಿ, ಅಂತಃಕರಣ; ಇಂದ್ರಿಯರಹಿತನನ್ನಾಗಿ ಮಾಡುವನೆ? ಎಲ್ಲರ ಬುದ್ಧಿಯ ಒಡೆಯನಾದ ಭಗವಂತ ತನ್ನ ಭಕ್ತನನ್ನು ಬುದ್ಧಿರಹಿತನನ್ನಾಗಿಸುವನೆ?ಬುದ್ಧಿ ಹೀನನಾದವನಷ್ಟೇ ಭಗವಂತನನ್ನು ಹೀಗೆ ಹೇಳುತ್ತಾನೆ ಹೊರತು ಭಗವಂತನನ್ನು ಭಜಿಸಿ ಬುದ್ಧಿಹೀನನಾಗುವುದಿಲ್ಲ. ತನ್ನನ್ನು ಭಜಿಸಿದ ಭಕ್ತನನ್ನು ಭಗವಂತನು ತನ್ನಂತೆಯೇ ಜ್ಞಾನ, ಪ್ರಯತ್ನ, ಇಚ್ಛಾ ಸಹಿತನನ್ನಾಗಿ ಮಾಡಿ ಬೇಕಾದ ಸುಖವನ್ನಿತ್ತು ಅನುಗ್ರಹಿಸುತ್ತಾನೆ. ಹೀಗೆ ನಿರ್ವಿಶೇಷ ಸ್ಥಿತಿಯೇ ಮೋಕ್ಷ ಎಂಬುದು ಯುಕ್ತಿವಿರುದ್ಧವೂ ಆಗಿದೆ. ಆದ್ದರಿಂದ ನಾವು ಪ್ರತಿಪಾದಿಸಿದಂತೆ ಭಗವಂತನನ್ನು ಆರಾಧಿಸುವುದರಿಂದಲೆ ಭಗವಂತನು ಆನಂದರೂಪವಾದ ಮೋಕ್ಷವನ್ನು ಕರುಣಿಸುತ್ತಾನೆ' ಎಂದು ಆಚಾರ್ಯ ಮಧ್ವರು ಪ್ರತಿಪಾದಿಸಿದರು.

**(ಸಶೇಷ)**

ನಿಮ್ಮನೇ ನಂಬಿ ಬದುಕುವ ಜನರನ್ನು ರಕ್ಷಿಸಿರಿ

ಭಾಗ–9

# ಹರಿಕಥಾಮೃತಸಾರ

ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಸ್ವತಃ ಜಗನ್ನಾಥದಾಸರೇ

'ಶ್ರವಣ ಮನಕಾನಂದ ವೀವುದು
ಭವಜನಿತ ದುಃಖಗಳ ಕಳೆವುದು
ವಿವಿಧ ಭೋಗಗಳಿಹಪರಂಗಳ ಲಿತ್ತು ಸಲಹುವುದು
ಭುವನ ಪಾವನ ವೆನಿಪ ಲಕ್ಷ್ಮೀ
ಧವನ ಮಂಗಳ ಕಥೆಯ ಪರಮೋ
ತ್ಸವದಿ ಕಿವಿಗೊಟ್ಟಾಲಿಪುದು ಭೂಸುರರು ದಿನದಿನದಿ ॥' ಎಂದು ಹೇಳಿದರೆ,

ಅವರ ಪರಮಪ್ರಿಯ ಶಿಷ್ಯ ಶ್ರೀದವಿಠಲರು

'ಸಾರವೆಂದರೆ ಹರಿಕಥಾಮೃತ–
ಸಾರ ವೆಂಬುದು ಎಮ್ಮ ಗುರುವರ
ಸಾರಿದಲ್ಲದೆ ತಿಳಿಯದೆನುತ ಮಹೇಂದ್ರನಂದನನ
ಸಾರಥಿಯ ಬಲಗೊಂಡು ಸಾರಾ–
ಸಾರಗಳ ನಿರ್ಣಯಿಸಿ ಪೇಳ್ದನು–
ಸಾರ ನಡೆವ ಮಹಾತ್ಮರಿಗೆ ಸಂಸಾರವೆಲ್ಲಿಹದೋ' ॥ ಎಂದು ಹೇಳಿ

ಗುರುಗಳ ಗ್ರಂಥದದ ವೈಶಿಷ್ಟ್ಯವನ್ನು, ವೈಭವವನ್ನೂ, ಮಹಿಮೆಯನ್ನೂ ಗ್ರಂಥದಿಂದ ದೊರೆಯಬಹುದಾದ ಫಲವನ್ನೂ ಸ್ಪಷ್ಟಪಡಿಸಿರುವರು.

ರಂಗವಲಿದ ದಾಸಾರ್ಯರಾದರೋ 'ಸಪ್ತಮೋ ಮತ್ಸಮೋ ಯೋಗೀ ವರದೇಂದ್ರೋ ಭವಿಷ್ಯತಿ' ಎಂದು ಪರಿಮಳಾಚಾರ್ಯರಿಂದ ಆದಿಯಲ್ಲೇ ಆಶೀರ್ವದಿಸಿಕೊಂಡ ಶ್ರೀವರದೇಂದ್ರಗುರುಸಾರ್ವಭೌಮರ ಪ್ರೀತಿಗೆ ಪಾತ್ರರು. ವೈರಾಗ್ಯಮೂರ್ತಿಮತ್ಸ್ಯರೂಪರಾದ ಗೋಪಾಲದಾಸರಿಂದ ಆಯುರ್ದಾನ ಪಡೆದ ಧನ್ಯಜೀವಿಗಳು. ವಿಜಯರಾಯರ ಪರಮಾನುಗ್ರಹಕ್ಕೆ ಪಾತ್ರರಾದ ಮಹಾನ್ ಚೇತನರು. ಪಂಢರಾಪುರಾಧೀಶನಿಂದತಾ 'ಜಗನ್ನಾಥವಿಠಲ' ಎಂದು ಅಂಕಿತ ಪಡೆದ ಪೂತಾತ್ಮರು ಹರಿಕಥಾಮೃತಸಾರ ಗ್ರಂಥದ ರಚನೆಯ ಸಂದರ್ಭದಲ್ಲಿ ವರ್ಣಾಭಿಮಾನಿಗಳೂ, ವರ್ಣನಿಯಾಮಕರೂ, ವರ್ಣವಾಚ್ಯರೂ ಆದ ಅಜಾದಿ ಭಗವದ್ರೂಪಗಳು ತಾವು ಮುಂದು ತಾವು ಮುಂದು ಎಂದು ದಾಸರ ಮುಖಕಮಲದಿಂದ ಪ್ರಕೃತಗ್ರಂಥದ ರೂಪದಲ್ಲಿ ಹೊರಬಂದು ಲೋಕಕ್ಕಾನಂದವನ್ನಿತ್ತಿದ್ದಾರೆ.

ದೀನ–ದುಃಖಿತರಿಗೆ ನಿಮ್ಮಲ್ಲಿರುವುದನ್ನು ಕೊಡಿ

ಜಗನ್ನಾಥದಾಸರ ಭಾಗ್ಯಸ್ವರೂಪದಂತಿರುವ ಗ್ರಂಥದ ಪ್ರಾಶಸ್ತ್ಯವನ್ನೂ ಯಾರಿಂದ ತಾನೇ ವರ್ಣಿಸಲು ಸಾಧ್ಯ? ದಾಸರ ಪರಮಾನುಗ್ರಹಕ್ಕೆ ಪಾತ್ರರಾದ ಗುರುಜಗನ್ನಾಥದಾಸರು ಜಗನ್ನಾಥದಾಸರನ್ನೂ ಹರಿಕಥಾಮೃತಸಾರಗ್ರಂಥವನ್ನೂ ಮುಕ್ತಕಂಠದಿಂದ ಹೊಗಳುತ್ತಾ

ರಂಗ ಒಲಿದ ದಾಸರಾಯರ ಪಾದಪದುಮ
ಕಂಗಳಿಂದ ನೋಡಿದಾವರ ಪಾಪಂಗಳೆಲ್ಲ
ಹಿಂಗಿ ಪೋಪವಲ್ಲೋ ಸತ್ತ್ವರ ಏನು ಪೇಳಲಿವರ
ಮಂಗಳಾಂಗ ರಂಗನಿವರ ಅಂಗದೊಳಗೆ ನಿಂತು ಸದಾ
ತುಂಗಮಹಿಮೆ ತೋರಿ ಜನಕೆ ಮಂಗಳಾವ ಕೊಡುವಂಥಾ ॥
ಪರಮತತ್ತ್ವಸಾರಪುಂಜ ಹರಿಕಥಾಮೃತಸಾರ
ಹರುಷದಿಂದ ರಚಿಸಿ ಹರಿಯ ಚರಣ ಭಜಿಪ ಜನಕೆವುಣಿಸಿ
ಪರಮಗೋಪ್ಯಭಾವ ತಿಳಿಸಿದ–ಸಾಧುಜನಕೆ
ಅರಿವು ಮಾಡಿರೆಂದು ಪೇಳಿದ–ಮೂಢಜನಕೆ
ದೊರೆಯದೆಂದು ತಾನೆ ಪೇಳಿದ–ತನ್ನ ಜನಕೆ
ಪರದಿಸೌಖ್ಯಗರೆವೊ ಬಿಂಬಕುರುಹು ನೋಳ್ಪ ಬಗೆಯ ಜನಕೆ
ಪರಮಸುಲಭ ತೋರಿ ಮುದದಿ ಪರಿಪರಿಯಲಿ ಪೊರೆವರಿಂಥಾ ॥

ಎಂದು ವರ್ಣಿಸಿರುವರು.

ಆಚಾರ್ಯರ ಸಿದ್ಧಾಂತಕ್ಕನುಗುಣವಾಗಿ ಭಗವನ್ಮಹಾಮಹಿಮೆಯನ್ನು ಕೇವಲ ಪುರಂದರದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಮಾತ್ರ ಕನ್ನಡ ಭಾಷೆಯಲ್ಲಿ ಕೃತಿಗಳ ರೂಪದಲ್ಲಿ ರಚಿಸಿಲ್ಲ. ಇದಕ್ಕೂ ಪ್ರಾಚೀನರಾದ ವೇದವೇದಾಂತಗಳಲ್ಲಿ ನಿಷ್ಣಾತರಾದ ಆಚಾರ್ಯರ ಸಾಕ್ಷಾತ್ ಶಿಷ್ಯರೆನಿಸಿದ ನರಹರಿ ತೀರ್ಥರೇ ಮೊದಲಾದ ಮಹಿತಾತ್ಮರು ಸಹ ಈ ಮಾರ್ಗವನ್ನನುಸರಿಸಿದುದು ಸರ್ವವಿದಿತ. ಅನೇಕ ವ್ಯಾಖ್ಯಾನ ಗ್ರಂಥಗಳನ್ನೂ ಸ್ವತಂತ್ರಗ್ರಂಥಗಳನ್ನೂ ರಚಿಸಿ ದಿಗ್ಗಜಗಳಂತೆ ಮೆರೆದ ವ್ಯಾಸರಾಜಾದಿ ಪ್ರಭೃತಿಗಳು ಅನೇಕ ಪದ–ಪದ್ಯ–ಸುಳಾದಿ–ಉಗಾಭೋಗಗಳನ್ನು ರಚಿಸುತ್ತಾ ಅವುಗಳ ಕೊನೆಯಲ್ಲಿ ಫಲಗಳನ್ನು ಸಹಾ ಹೇಳಿರುವರು. ಋಜುಪುಂಗವರಾದ ವಾದಿರಾಜರು ತಮ್ಮ ವೈಕುಂಠ ವರ್ಣನೆಯ ಸಮಾಪ್ತಿಯಲ್ಲಿ ಫಲವನ್ನು ಹೇಳುತ್ತಾ

**(ಸಶೇಷ)**

**ಗಳಿಸಿದ ಹಣವನ್ನು ಕೇವಲ ವಿಲಾಸ ಜೀವನಕ್ಕಾಗಿಯೇ ಪೋಲು ಮಾಡದಿರಿ**

# ಏನ ಬೇಡಲಿ ನಿನ್ನ ಬಳಿಗೆ ಬಂದು....

ಅನುಗ್ರಹ– ಶ್ರೀ ವಿಶ್ವಪ್ರಿಯತೀರ್ಥರು ಸಂಗ್ರಹ–ಸಗ್ರಿ

'ಏನ ಬೇಡಲಿ ನಿನ್ನ ಬಳಿಗೆ ಬಂದು....'– ಎಂದು ಗೋಪಾಲದಾಸರಿಗೆ ಬಂದ ಸಮಸ್ಯೆ ದೇವರ ಗುಡಿಗೆ ಹೋಗುವ ಪ್ರತಿಯೊಬ್ಬನಿಗೂ ಎದುರಾಗುವುದು. ಇದಕ್ಕೆ ಕಾರಣ ಗೋಪಾಲದಾಸರೇ ವಿಶ್ಲೇಷಿಸಿದಂತೆ 'ನೀನಿತ್ತ ಸೌಭಾಗ್ಯ ನಿಬಿಡವಾಗಿದೆ ಎನಗೆ'– **'ವಿನಾ ದೈನ್ಯೇನ ಜೀವನಂ'** ನಡೆಸಲು ಏನು ಬೇಕೋ ಅವೆಲ್ಲವನ್ನೂ ಭಗವಂತ ಈಗಾಗಲೇ ಕೊಟ್ಟಿದ್ದಾನೆ ಎಂಬುದು ಒಂದಾದರೆ, ಮತ್ತೊಂದು 'ಜನನಿಯ ಕೊಡು ಎಂದು.....' ಇತ್ಯಾದಿಯಾಗಿ ನಾಲ್ಕು ನುಡಿಗಳಲ್ಲಿ ವಿವೇಚಿಸಿರುವಂತೆ ಜನನಿ, ಜನಕ, ಅನುಜ, ಧನ, ಸತಿ, ಸುತರು ಬಂಧುಗಳು ಹಾಗೂ ಅಂದಣ ಮುಂತಾದ ಲೌಕಿಕ ಪದಾರ್ಥಗಳಾವುವೂ ಸುಖ ಸಾಧನಗಳಾಗಿಯೇ ತೀರುವವೆಂಬ ನಿಯಮವೇನೂ ಇಲ್ಲದಿರುವುದರಿಂದ ಅವುಗಳಲ್ಲಿ ಯಾವೊಂದನ್ನೂ ಬೇಡಿ ಉಪಯೋಗವಿಲ್ಲ ಎಂಬುದು ಮತ್ತೊಂದು ಕಾರಣ.

ಇದಕ್ಕಾಗಿ **'ಪರರ ಬೇಡದಂತೆ ಎನ್ನ ಮಾಡಯ್ಯ ಹರಿಯೆ'** ಎಂದು ಭಗವಂತನಲ್ಲಿ ಬೇಡಿಕೊಳ್ಳಬೇಕಾದಂತೆ ಮತ್ತೊಂದು ಬಗೆಯ ಬೇಡಿಕೆಯನ್ನೂ ಅವನಲ್ಲಿ ಸಲ್ಲಿಸಬಹುದು; ಸಲ್ಲಿಸಬೇಕು.

## ಶ್ರೀ ವಿಶ್ವಪ್ರಿಯತೀರ್ಥರ ವಿಶ್ಲೇಷಣೆ:

ಆ ಬೇಡಿಕೆಯ ಬಗ್ಗೆ ಶ್ರೀವಿಶ್ವಪ್ರಿಯತೀರ್ಥರು ಉತ್ತಮ ದೃಷ್ಟಾಂತದೊಂದಿಗೆ ಬೆಳಕು ಚೆಲ್ಲಿರುವರು–ಅರ್ಜುನ ಹಾಗೂ ದುರ್ಯೋಧನ ಇಬ್ಬರೂ ಮುಂದೆ ನಡೆಯಲಿರುವ ಮಹಾಭಾರತ ಯುದ್ಧದಲ್ಲಿ ಸಹಾಯವನ್ನು ಬೇಡುವುದಕ್ಕಾಗಿ ಶ್ರೀಕೃಷ್ಣನಲ್ಲಿಗೆ ಹೋಗುವರು. ಕೃಷ್ಣ ಒಂದು ಪಕ್ಷಕ್ಕೆ ತಾನು ನಿರಾಯುಧನಾಗಿ, ಯುದ್ಧ ಮಾಡದೆ ಭಾಗವಹಿಸುವುದಾದರೆ, ಮತ್ತೊಂದು ಪಕ್ಷಕ್ಕೆ ತನ್ನ ಹತ್ತು ಲಕ್ಷ ಶೂರರಾದ ಪುತ್ರರು– ಎಂದು ವಿಭಜಿಸಿ ಪ್ರಸ್ತುತಪಡಿಸಿದಾಗ ಅರ್ಜುನ ನಿರಾಯುಧನಾದರೂ, ಯುದ್ಧ ಮಾಡದಿದ್ದರೂ ಪರವಾಗಿಲ್ಲ. ತಮಗೆ ಶ್ರೀಕೃಷ್ಣನೇ ಬೇಕು– ಎಂದು ಕೃಷ್ಣನನ್ನು ಆಯ್ಕೆ ಮಾಡಿದ. ದಶಲಕ್ಷ ಕೃಷ್ಣನ ಮಕ್ಕಳನ್ನು, ಅವರು ಕೃಷ್ಣನ ಮಕ್ಕಳು ಎಂಬ ಭಾವನೆಯಿಲ್ಲದೆ, ಯುದ್ಧ ಮಾಡಬಲ್ಲ ಶೂರರು ಎಂಬ ದೃಷ್ಟಿಯಿಂದಷ್ಟೇ ದುರ್ಯೋಧನ ಆಯ್ಕೆ ಮಾಡಿದ. ಕೃಷ್ಣನನ್ನು ಆಯ್ಕೆ ಮಾಡಿಕೊಂಡ

ಅರ್ಜುನ **'ಯತ್ರ ಯೋಗೇಶ್ವರಃ ಕೃಷ್ಣೋ..... ತತ್ರ ಶ್ರೀರ್ವಿಜಯೋ ಭೂತಿಃ ನೀತಿಃ'**– ಎಂದು ಭಗವದ್ಗೀತೆ ಉದ್ಘೋಷಿಸಿರುವಂತೆ ಸಂಪತ್ತು, ವಿಜಯ, ಉನ್ನತಿ, ನೀತಿ– ಇವನ್ನೆಲ್ಲ ಹೊಂದುವಂತಾಯಿತು. ಕೃಷ್ಣನನ್ನು ದೂರ ಮಾಡಿ ಹತ್ತು ಲಕ್ಷ ಅವನ ಮಕ್ಕಳನ್ನು ಆಯ್ಕೆ ಮಾಡಿದ ದುರ್ಯೋಧನ ಮಣ್ಣು ಮುಕ್ಕಿದ.

## ತ್ವಂ ವೈ ಪುರುಷಾರ್ಥಮಯಃ ಫಲಾತ್ಮಾ....

ದೇವಸ್ಥಾನಕ್ಕೆ ದೇವರಲ್ಲಿಗೆ ಹೋಗುವ ನಾವೂ ಅರ್ಜುನನ ಆದರ್ಶವನ್ನು ಅಳವಡಿಸಿಕೊಂಡು ದೇವರಲ್ಲಿ 'ಬೇಡಿದರೆ ನಿನ್ನನ್ನೇ ಬೇಡುವೆನು.....' ಎಂದು ಬೇಡೋಣ. **'ತ್ವಂ ವೈ ಸಮಸ್ತಪುರುಷಾರ್ಥಮಯಃ ಫಲಾತ್ಮಾ....'**–ಎಂದು ರುಗ್ಮಿಣೀದೇವಿ (ಭಾಗ.10–82–42) ಭಗವಂತನಲ್ಲಿ ನಿವೇದಿಸಿಕೊಂಡಿರುವಂತೆ ಭಗವಂತನು ಸುಖಸ್ವರೂಪಿಯಾಗಿರುವುದರಿಂದ ಪ್ರತಿಯೊಬ್ಬ ಪುರುಷನಿಂದಲೂ ಬೇಡಲ್ಪಡಲು ಯೋಗ್ಯವಾದ ವ್ಯಕ್ತಿತ್ವವನ್ನು ಒಳಗೊಂಡಿರುವನು ತಾನೇ?

ಶ್ರೀಕೃಷ್ಣನ ಮಕ್ಕಳೇ ಮುಂತಾದ ಅವನ ಸಂಬಂಧಿಕರನ್ನೇ ಆದರೂ ಅವರು ಶ್ರೀಕೃಷ್ಣನ ಸಂಬಂಧಿಗಳಾಗಿದ್ದು, ಅವನ ಪರಿವಾರಕ್ಕೆ ಸೇರಿದವರು– ಎಂಬ ದೃಷ್ಟಿಯ ಹಿನ್ನಲೆಯಿಲ್ಲದೆ ಆಯ್ಕೆ ಮಾಡಿಕೊಳ್ಳದಿರೋಣ.

(ಏಕವಾಟದ ಮಹಾವಿಷ್ಣುವಿನ ದೇವಾಲಯದಲ್ಲಿ 4–2–2009ರಂದು ನಡೆದ ಮಧ್ವನವಮಿಮಹೋತ್ಸವದ ಅಧ್ಯಕ್ಷತೆ ವಹಿಸಿದ್ದ ಶ್ರೀವಿಶ್ವಪ್ರಿಯತೀರ್ಥರು ಏಕವಾಟದ ಭಕ್ತಜನತೆಗೆ ಉಪದೇಶಿಸಿದ ಕಿವಿ ಮಾತು) ★


## ಶ್ರೀ ಪಲಿಮಾರು ಮಠದ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರೊಂದಿಗೆ

**ಉತ್ತರ ಭಾರತ ಯತ್ರಾ ಪವಾಸ (ರೈಲು ಮತ್ತು ಬಸ್ಸುಗಳಲ್ಲಿ)**

**ಜೂನ್ 3ರಿಂದ 19, 2009 (17 ದಿನಗಳು)**

**ಸಂದರ್ಶಿಸುವ ಸ್ಥಳಗಳು:** ರಾಜಮಂಡ್ರಿ, ಭುವನೇಶ್ವರ, ಪುರಿಜಗನ್ನಾಥ, ಕೋನಾರ್ಕ್, ಗಯಾ, ಕಾಶಿ, ಪ್ರಯಾಗ, ಅಯೋಧ್ಯ, ಹರಿದ್ವಾರ, ಬದರೀನಾಥ, ದಿಲ್ಲಿ, ಮಥುರಾ, ಬೃಂದಾವನ, ಉಜ್ಜೈನಿ, ನರ್ಮದಾ

ವಿ.ಸೂ ಪ್ರತಿದಿನ ಆಯಾ ಕ್ಷೇತ್ರದ ಬಗ್ಗೆ ಸ್ವಾಮೀಜಿಯವರಿಂದ ಪ್ರವಚನ ಇದೆ.

–––––––––––––ಹೆಚ್ಚಿನ ವಿವರಗಳಿಗೆ––––––––––

ಬಿ. ಮಧುಸೂದನ ಆಚಾರ್ಯ
ಪಲಿಮಾರು ಮಠ, ಉಡುಪಿ–576 101,
ಫೋನ್: 2534960 (O) 2542425 (R)
ಮೊಬೈಲ್: 9448607425, 9008415704

ಎ.ಆರ್ ತಂತ್ರಿ, ಬೆಂಗಳೂರು
ಮೊಬೈಲ್: 9448073119
ರಂಗನಾಥ ದಿಗ್ಗಾವಿ, ಬೆಳಗಾಂ
ಮೊಬೈಲ್ : 9448506017


**ಎಲ್ಲಾ ಭಾಷೆಗಳ ಮಾತೃಭಾಷೆಯಾದ ಸಂಸ್ಕೃತವನ್ನು ಕಲಿಯಿರಿ**

ಮುಖಪುಟಲೇಖನ

# ಮಾಧವ

–ಬೊಮ್ಮರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಕೇಶವಾದಿ ರೂಪಗಳಲ್ಲಿ ಮೂರನೆಯದ್ದು ಮಾಧವರೂಪ. ಮಾಘಮಾಸಕ್ಕೆ ನಿಯಾಮಕನಾದ ಈ ಮಾಧವನು ಮೇಲಿನ ಬಲಗೈಯಲ್ಲಿ ಚಕ್ರವನ್ನು ಎಡಗೈಯಲ್ಲಿ ಶಂಖವನ್ನು ಕೆಳಗಿನ ಎಡಗೈಯಲ್ಲಿ ಪದ್ಮವನ್ನು ಬಲಗೈಯಲ್ಲಿ ಗದೆಯನ್ನು ಧರಿಸಿದ್ದಾನೆ. ಎಂದು ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ.

ಭಗವಂತನಿಗೆ ಮಾಧವ ಶಬ್ದವಾಚ್ಯತ್ವವು ಹೇಗೆ ಎಂದರೆ,

1.**"ಮಾಯಾಃ+ಧವಃ"** ಬ್ರಹ್ಮಾದಿ ತೃಣಪರ್ಯಂತ ಎಲ್ಲಾ ಜೀವರಾಶಿಗಳಿಗೆ ತಾಯಿಯಾದ್ದರಿಂದ ಲಕ್ಷ್ಮೀಗೆ **"ಮಾ"** ಎಂದು ಹೆಸರು. ಅಂತಹ ಲಕ್ಷ್ಮೀಗೆ **"ಧವ=ಒಡೆಯ"**ನಾದ್ದರಿಂದ ಭಗವಂತನಿಗೆ ಮಾಧವ ಎಂಬ ಅಭಿಧಾನ.

2.**"ಮಾ"** ಎಂದರೆ ಜ್ಞಾನ ಎಂದರ್ಥ. ಜ್ಞಾನಕ್ಕೆ ಧವ ಒಡೆಯನಾದ್ದರಿಂದ ಭಗವಂತನಿಗೆ ಮಾಧವ ಎಂಬ ಹೆಸರು.

3.**"ಮಾ"** ಎಂಬುದು ನಿಷೇಧಾರ್ಥಕವಾದ ಅವ್ಯಯ. ಮಾಧವ ಅಂದರೆ ಭಗವಂತನಿಗೆ ಯಾರೂ ಒಡೆಯರಿಲ್ಲ. ಅವನೇ ಸರ್ವೋತ್ತಮ ಎಂಬ ಅರ್ಥದಲ್ಲಿಯೂ ಮಾಧವ ಶಬ್ದವು ಭಗವದ್ವಾಚಕವಾಗಿದೆ.

4.ಆನಂದಾರ್ಥಕವಾದ ಮಧು ಶಬ್ದಕ್ಕೆ ಸಂಬಂಧಾರ್ಥದಲ್ಲಿ ಅಣ್ ಪ್ರತ್ಯಯ ಬಂದು ಮಾಧವ ಎಂಬ ರೂಪವಾಗುತ್ತದೆ. ಅಂದರೆ ಆನಂದಕ್ಕೆ ಸಂಬಂಧಿಸಿದವ ಎಂದು ಅರ್ಥ. ಆನಂದ ಪೂರ್ಣವಾಗಿವುಳ್ಳವ ಆನಂದ ದಾತೃ ಮುಂತಾದ ಅರ್ಥಗಳಿಂದಲೂ ಮಾಧವ ಶಬ್ದವಾಚ್ಯತ್ವ ಭಗವಂತನಿಗೆ ಕೂಡುತ್ತದೆ.

ಶ್ರೀಮದ್‌ಭಾಗವತದ ನಾರಾಯಣವರ್ಮದಲ್ಲಿ **ಸಾಯಂ ತ್ರಿಧಾಮಾಽವತು ಮಾಧವೋ ಮಾಮ್।** ಎಂಬುದಾಗಿ ಸಾಯಂಕಾಲದ ಹೊತ್ತು ವೈಕುಂಠ, ಅನಂತಾಸನ, ಕ್ಷೀರಸಾಗರ ಎಂಬ ಮೂರು ಮನೆಗಳುಳ್ಳ ಮಾಧವನೇ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸಬೇಕೆಂದು ತಿಳಿಸಿದ್ದಾರೆ.

ಮಲಗುವ ಮೊದಲು ಹೇಳುವ **ಜಲೇರಕ್ಷತು ವಾರಾಹಃ ಸ್ಥಲೇರಕ್ಷತು ವಾಮನಃ। ಅಟವ್ಯಾಂ ನಾರಸಿಂಹಶ್ಚ ಶಯನೇ ಪಾತು ಮಾಧವಃ॥** ಎಂಬ ಪ್ರಸಿದ್ಧವಾದ ಶ್ಲೋಕದಲ್ಲಿ ನಾವು ಮಲಗುವಾಗ ನಮ್ಮನ್ನು ರಕ್ಷಿಸುವವನು ಮಾಧವರೂಪಿ ಪರಮಾತ್ಮ ಎಂದು ತಿಳಿಸಿದ್ದಾರೆ. ನಾವು ಮಲಗಿ ನಿದ್ರಿಸಿದೆವೆಂದಾದರೆ ನಮ್ಮ ಸುತ್ತ–ಮುತ್ತ ಏನು ನಡೆಯುತ್ತದೆ ಎಂಬುದೇ

**ಹಸಿದವರಿಗೆ ಅನ್ನವನ್ನು ನೀಡಿ**

ನಮಗೆ ತಿಳಿಯುವುದಿಲ್ಲ. ಮಾಧವ ಎಂಬ ಶಬ್ದಕ್ಕೆ ಆನಂದದಾತೃ ಎಂಬ ಅರ್ಥವನ್ನು ಹಿಂದೆ ನೋಡಿದ್ದೇವೆ. ಅವನನ್ನು ಧ್ಯಾನಿಸಿ ಮಲಗಿದರೆ ಆನಂದಮಯವಾದ ನಿದ್ದೆಯನ್ನು ಕರುಣಿಸುತ್ತಾನೆ. ನಿದ್ದೆಹೋದ ನಾವು ಸೌಖ್ಯದಿಂದ ಎದ್ದೇಳಬೇಕೆಂದರೆ ಮಲಗುವ ಮುನ್ನ ಮಾಧವ ರೂಪಿ ಪರಮಾತ್ಮನನ್ನು ಧ್ಯಾನಿಸಿ ಮಲಗಬೇಕು. ಹಾಗಾದಾಗ ಭಗವಂತನು ನಮಗೆ ಯಾವುದೇ ಅನಾಹುತವಾಗದಂತೆ ಸುಖವಾದ ನಿದ್ರೆಯನ್ನು ಕೊಟ್ಟು ರಕ್ಷಿಸುತ್ತಾನೆ.

ಶ್ರೀಮಧ್ವಾಚಾರ್ಯರು ದ್ವಾದಶಸ್ತೋತ್ರದಲ್ಲಿ **ಮಾಧವ ಮಾಧವ ಸಾಧಕ ವಂದೇ ಬಾಧಕ ಬೋಧಕ ಶುದ್ಧಸಮಾಧೇ** ಎಂಬುದಾಗಿ ಒಳ್ಳೆಕೆಲಸ ಮಾಡುವವರಿಗೆ ಸಾಧಕನಾದ, ಕೆಟ್ಟ ಕೆಲಸ ಮಾಡುವವರಿಗೆ ಬಾಧಕನಾದ, ಸಜ್ಜನರಿಗೆ ಒಳ್ಳೆಯ ಯಥಾರ್ಥ ಜ್ಞಾನವನ್ನು ಬೋಧಿಸುವ ನಿರ್ಮಲಚಿತ್ತನಾದ ಮಾಧವನಿಗೆ ನಮಸ್ಕಾರ ಎಂಬುದಾಗಿ ಸ್ತುತಿಸಿದ್ದಾರೆ.

ಕನಕದಾಸರು **ಶೋಧಿಸೆನ್ನ ಭವದ ಕಲುಷ ಬೋಧಿಸಯ್ಯ ಜ್ಞಾನವೆನಗೆ**
**ಬಾಧಿಸುವ ಯಮನ ಬಾಧೆ ಬಿಡಿಸು ಮಾಧವ**

ಎಂದು ಪ್ರಾರ್ಥಿಸಿದ್ದಾರೆ. ಶೋಧಿಸೆನ್ನ ಭವದ ಕಲುಷ ಎಂದರೆ ನಮ್ಮ ಸಂಸಾರಾವಸ್ಥೆಯನ್ನು ನಾಶಮಾಡಬೇಕು ಎಂದು ಅರ್ಥ. ಮಾಧವ ಜ್ಞಾನಕ್ಕೆ ಒಡೆಯ. ಆದ್ದರಿಂದಲೇ ಅವನು ಸರ್ವಜ್ಞ. ನಮ್ಮ ಸಂಸಾರಾವಸ್ಥೆಗೆ ಕಾರಣವಾದ ಪಾಪ ಯಾವುದೆಂದು ಸರ್ವಜ್ಞನಾದ ಭಗವಂತನಿಗೆ ತಿಳಿದಿದೆ. ನಾವು ಭಗವಂತನನ್ನು ಭಕ್ತಿಯಿಂದ ಪ್ರಾರ್ಥಿಸಿದರೆ ಈ ಭವರೋಗಕ್ಕೆ ಕಾರಣವಾದ ಪಾಪವನ್ನು ನಾಶಮಾಡಿ ಸದ್ಗತಿಯನ್ನೀಯುತ್ತಾನೆ ಎಂಬುದು ಕನಕದಾಸರ ಮಾತಿನ ತಾತ್ಪರ್ಯ. **ಬೋಧಿಸಯ್ಯ ಜ್ಞಾನವೆನಗೆ** ಎಂದು ಹೇಳಿದ್ದಾರೆ. ಭಗವಂತ ಜ್ಞಾನಕ್ಕೆ ಒಡೆಯ ನಾವು ಏನಾದರೂ ಬೇಡುವುದಾದರೆ ನಾವು ಬೇಡುವ ವಸ್ತು ಯಾರಲ್ಲಿ ಇದೆಯೋ ಅವರಲ್ಲಿಯೇ ಕೇಳಬೇಕು. ಭಗವಂತನು ಪೂರ್ಣವಾದ ಜ್ಞಾನವುಳ್ಳವನಾದ್ದರಿಂದಲೇ ಅವನು ಮಾಧವ. ನಮಗೆ ಯಥಾರ್ಥಜ್ಞಾನವನ್ನು ಕೊಡು ಎಂದು ಮಾಧವನಲ್ಲಿಯೇ ಪ್ರಾರ್ಥಿಸಬೇಕು. ಅದನ್ನೇ ದಾಸರು ಕೃತಿಯಲ್ಲಿ ತಿಳಿಸಿದ್ದಾರೆ. ಮಾಧವ ಎಂದರೆ ಯಾರೂ ಒಡೆಯರು ಇಲ್ಲದಿರುವವ ಎಂಬ ಅರ್ಥವನ್ನು ಹಿಂದೆ ನೋಡಿದ್ದೇವೆ. ಅಂದರೆ ಅವನು ಸರ್ವೋತ್ತಮ ಎಲ್ಲರೂ ಅವನ ಅಧೀನ. ಯಮನೂ ಕೂಡ ಭಗವಂತನ ಅಧೀನ. ಆದ್ದರಿಂದ ಯಮನ ಭಾದೆಯನ್ನು ಬಿಡಿಸು ಎಂದು ಪ್ರಾರ್ಥಿಸಿದರೆ ಯಮನು ಕೊಡುವ ನರಕಾದಿಗಳು ನಮಗೆ ಪ್ರಾಪ್ತವಾಗದಂತೆ ತಡೆಯುತ್ತಾನೆ. ಅದಕ್ಕಾಗಿಯೇ ಕನಕದಾಸರು ಭಾದಿಸುವ ಯಮನ ಬಾಧೆ ಬಿಡಿಸು ಮಾಧವ ಎಂದು ಪ್ರಾರ್ಥಿಸಿದ್ದಾರೆ. ಈ ರೀತಿಯಾಗಿ ಪುರಾಣ, ಇತಿಹಾಸಗಳು ಆಚಾರ್ಯಮಧ್ವರು ದಾಸಶ್ರೇಷ್ಠರು ತಿಳಿಸಿದಂತೆ ಸ್ವತಂತ್ರನಾದ ಸರ್ವಜ್ಞನಾದ ಸರ್ವೋತ್ತಮನಾದ ಮಾಧವರೂಪಿ ಪರಮಾತ್ಮನನ್ನು ಧ್ಯಾನಿಸಿ ಭಗವಂತನ ಯಥಾರ್ಥಜ್ಞಾನವನ್ನು ಪಡೆಯೋಣ.

★

**ಬಾಯಾರಿದವರನ್ನು ನೀರಿನಿಂದ ತೃಪ್ತಿಗೊಳಿಸಿ**

# ಸುಂದರನೊಳಡಗಿದ ಸೌಂದರ್ಯ

ವಿ॥ ಡಿ. ಗುರುಪ್ರಸಾದ ಭಟ್

**'ಸುಂದರಸ್ಯ ಭಾವಃ ಸೌಂದರ್ಯಂ'** ಎಂಬುದಾಗಿ ನಾವು ತಿಳಿದುಕೊಂಡಿದ್ದೇವೆ. ಆದರೆ ಸುಂದರ ಅಂದರೆ ಏನು? ಯಾವುದು ಸುಂದರ? ಯಾವುದು ಅಸುಂದರ? ಸುಂದರತ್ವದ ಲಕ್ಷಣ ಏನು? ಈ ಪ್ರಶ್ನೆಗಳಿಗೆ ಉತ್ತರ ದೊರೆಯುವುದು ಸುಲಭ ಸಾಧ್ಯವಲ್ಲ. ಸೌಂದರ್ಯವು ದೃಶ್ಯ (ವಸ್ತು) ನಿಷ್ಠವೋ? ಅಥವಾ ದ್ರಷ್ಟೃ ನಿಷ್ಠವೋ? ವಸ್ತು ನಿಷ್ಠವಾಗಿದ್ದರೆ ಅದು ವಸ್ತು ಧರ್ಮವೇ ಆಗಿರುತ್ತದೆ. ಆಗ ಯಾವತ್ತೂ ಎಲ್ಲರಿಗೂ ಸುಂದರವಾಗಿಯೇ ಕಾಣಬೇಕು. ಯಾಕೆಂದರೆ ವಸ್ತು ಯಾವಾಗಲೂ ತನ್ನ ಧರ್ಮವನ್ನು ಬಿಡಲಾರದು.

ಆದರೆ ಸಾಮಾನ್ಯವಾಗಿ ನಮ್ಮ ಅನುಭವದ ಹಿನ್ನಲೆಯಲ್ಲಿ ನೋಡುವುದಾದರೆ ಒಂದು ಸುಂದರವಾದ ವಸ್ತು ಒಬ್ಬನಿಗೆ ಸುಂದರವಾಗಿ ಕಂಡರೆ, ಇನ್ನೊಬ್ಬನಿಗೆ ಸುಂದರವಾಗಿಯೇ ತೋರಬೇಕೆಂಬ ನಿಯಮವಿಲ್ಲ. ಮೊದಲ ದಿನದಲ್ಲಿ ಸುಂದರವಾಗಿ ಅನುಭೂತವಾದದ್ದು, ಎರಡನೆಯ ದಿನದಲ್ಲೇ ಅಸುಂದರವಾಗಿ ತೋರಬಹುದು. ಇದನ್ನೆಲ್ಲಾ ಪರಿಶೀಲಿಸಿದಾಗ ಸೌಂದರ್ಯವನ್ನು ಅಳೆಯಲು ನಿಜವಾದ ಮಾನದಂಡ ಯಾವುದೆಂಬ ಜಿಜ್ಞಾಸೆ ಮನದಲ್ಲಿ ಉದ್ಭವಿಸುತ್ತದೆ.

ಪ್ರಕೃತ ರಾಮಾಯಣದ ಸುಂದರನ (ಹನುಮನ) ಬಗ್ಗೆ ವಿಶ್ಲೇಷಿಸುವುದಾದರೆ ಶ್ರೀಮದ್ರಾಮಾಯಣವೇ ಒಂದು ಸೌಂದರ್ಯವಾಗಿದೆ. ವಾಲ್ಮೀಕಿಗಳು ರಾಮಾಯಣದ ಐದನೆಯ ಕಾಂಡಕ್ಕೆ ಸುಂದರಕಾಂಡವೆಂದು ನಾಮಕರಣಮಾಡಿದ್ದಾರೆ. ಕಥಾದೃಷ್ಟಿಯಿಂದ ಲಂಕಾಕಾಂಡವೆಂದೋ, ಹನುಮತ್ಕಾಂಡವೆಂದೋ ಕರೆಯಬಹುದಿತ್ತು. ಇದು ವಾನರಾಗ್ರೇಸರನಾದ ಆಂಜನೇಯನಿಗೆ ಸಮ್ಮತವಾಗಲಾರದು ಎಂಬುದು ಕವಿಯ ಆಶಯ. ಸುಂದರನು ಈ ಕಾಂಡದ ಮುಖ್ಯ ಪಾತ್ರ. ಯಾರು ಆ ಸುಂದರ? **'ಸುಂದರಃ ಕಪಿಮುಖ್ಯೇ ಸ್ಯಾತ್ ಕಾಮೇಚ ಮಣಿಸೂರ್ಯಯೋಃ'** ಎಂದು ಕೋಶ ಹೇಳುತ್ತದೆ. ಸುಂದರನೆಂದರೆ ಆಂಜನೇಯನೇ. **'ಸುಂದರೇ ಸುಂದರಸ್ಸೋಽಯಂ, ಅಂಜನಾನಂದನೋದ್ಭವಃ'** ಎಂಬಂತೆ ಅವನ ಬಾಹ್ಯರೂಪವೂ ಸುಂದರವಾದದ್ದು. ಅದಕ್ಕಿಂತಲೂ ಅವನ ಗುಣ ಸಮೂಹಗಳು ಇನ್ನೂ ಹೆಚ್ಚು ಸೌಂದರ್ಯದ ರಾಶಿಯನ್ನು ಹೊಂದಿದೆ. ದಾಸವರೇಣ್ಯ ಶ್ರೀ ಪುರಂದರದಾಸರೂ

**ಪ್ರಾಣಿಹಿಂಸೆ ಮಾಡಬೇಡಿ**

ಕೂಡ 'ಸುಂದರ ಮೂರುತಿ ಮುಖ್ಯಪ್ರಾಣ ಬಂದ ಮನೆಗೆ' ಎಂದು ಹಾಡಿರುವರಲ್ಲವೇ?

ಲೌಕಿಕ ದೃಷ್ಟಿಯಿಂದ ಕಂಡಾಗ ಹನುಮ ಒಬ್ಬ ಕಪಿ. ಕಪಿಯಲ್ಲೇನು ಸೌಂದರ್ಯ? ಎಂಬ ಜಿಜ್ಞಾಸೆ ಬರಬಹುದು. ಆದರೆ ನಮ್ಮ ಶಾಸ್ತ್ರವು ಸೌಂದರ್ಯವನ್ನು ಕೇವಲ ಬಾಹ್ಯ ದೃಷ್ಟಿಯಿಂದ ನೋಡಿಲ್ಲ. ಆಂತರಿಕ ಸೌಂದರ್ಯವೇ ಪ್ರಾಮುಖ್ಯವಾದದ್ದು ಅನ್ನುತ್ತೆ ಶಾಸ್ತ್ರ. ನ್ಯಾಯಶಾಸ್ತ್ರವೂ ಕೂಡ ರೂಪವು ಒಂದು ಗುಣ ಎಂದು ಅಂಗೀಕರಿಸಿದೆ ಒಳಗಿನ ಗುಣವು ಹೊರಗಿನ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ಆದ್ದರಿಂದ ಒಳ್ಳೆಯ ಗುಣ ಇದ್ದಲ್ಲಿ ರೂಪವೂ ಸೌಂದರ್ಯ ಯುಕ್ತವಾಗಿ ತೋರುತ್ತದೆ. ಹನುಮನಲ್ಲಿ ನಾವು ಇದನ್ನು ಕಾಣಬಹುದು. ಲೌಕಿಕ ಕಪಿಗಳ ಕಲ್ಪನೆಯೊಂದಿಗೆ ನಿಕೃಷ್ಟವಾಗಿ ಹನುಮನನ್ನು ಎಂದಿಗೂ ನಾವು ಅಳೆಯಬಾರದು. ಯೋಗಿಗಳ ಒಳ-ಹೊರ ದೃಷ್ಟಿಗಳಿಗೆ ಉತ್ಸವವಾಗುವ ದಿವ್ಯ ಸೌಂದರ್ಯದ ರಾಶಿಯೇ ಆತನ ದೇಹ. **'ಕಾಂಚನಾದ್ರಿ ಕಮನೀಯ ವಿಗ್ರಹಂ'** ಅಲ್ಲವೇ ಅವನು? ಪರಾಕ್ರಮಗಳು ಮಾತ್ರವಲ್ಲದೇ ಗುಣಶೀಲಗಳಲ್ಲೂ ಅವನಲ್ಲಿ ನಾವು ಸೌಂದರ್ಯವನ್ನು ಕಾಣಬಹುದು.

ಹನುಮನಿಗೆ ಸುಂದರ ಎಂಬುದು ಅನ್ವರ್ಥ ನಾಮ. ತನ್ನ ಮಾತಿನ ಜಾಣ್ಮೆಯಿಂದಲೂ ಅವನು ಸಂದರ. ರಾಮನ ಪರಿಚಯ ಸುಗ್ರೀವನಿಂದ ಮೊದಲು ಆದಾಗ ರಾಮನ ಹೃದಯವನ್ನು ಸೂರೆಗೊಳ್ಳುವ ಚಿತ್ರಣ ಸುಂದರಕಾಂಡದಲ್ಲಿ ನಾವು ಕಾಣಬಹುದು. ಸೀತಾದೇವಿಗೆ ಶ್ರೀರಾಮನ ಸಂದೇಶವನ್ನು ತಿಳಿಸಿ, ನಂಬಿಕೆಯನ್ನುಂಟುಮಾಡಿ ಸಮಾಧಾನ ಹೇಳುವಾಗಲೂ, ರಾವಣಾದಿ ರಾಕ್ಷಸರಿಗೆ ಸವಾಲೊಡ್ಡುವಾಗಲೂ, ರಾವಣನಿಗೆ ತಿಳುವಳಿಕೆ ಮತ್ತು ಎಚ್ಚರಿಕೆಯ ಮಾತುಗಳನ್ನಾಡುವಾಗಲೂ, ಶ್ರೀರಾಮನಿಗೆ ಸೀತಾದೇವಿಯ ಸಮಾಚಾರ-ಸಂದೇಶಗಳನ್ನು ತಲುಪಿಸುವಾಗಲೂ ಇದೇ ಮಾತಿನ ಪಾಟವವನ್ನು ನಾವು ಅವನಲ್ಲಿ ಕಾಣುತ್ತೇವೆ. ಅವನ ಸ್ಮರಣೆ ಮಾತ್ರವೇ ಮಾತಿನ ಪಾಟವಕ್ಕೆ ಕಾರಣವಾಗುತ್ತದೆಯಲ್ಲವೆ?

**'ಅಜಾಡ್ಯಂ ವಾಕ್‌ಪಟುತ್ವಂ ಚ ಹನೂಮತ್ಸ್ಮರಣಾದ್ ಭವೇತ್'**

ಆಚಾರ್ಯಮಧ್ವರ ತಾತ್ಪರ್ಯನಿರ್ಣಯದಲ್ಲಂತೂ ಸುಂದರನ ಸೌಂದರ್ಯವು ಹಾಗೂ ನೈತಿಕ ಮೌಲ್ಯಗಳು ಹೃದಯಂಗಮವಾಗಿ ಚಿತ್ರಿತವಾಗಿವೆ. ತಾನು ಪೂರ್ಣವಾದ ಜ್ಞಾನಬಲ, ದೇಹಬಲ ಉಳ್ಳವನಾಗಿದ್ದರೂ ಅಹಂಕಾರದ ಲವ-ಲೇಶವೂ ಇಲ್ಲದೇ ಪೂರ್ಣ ವಿನಯದಿಂದ ಭಕ್ತಿಯಿಂದ ಕೂಡಿದ ಆಂಜನೇಯ ತನ್ನಲ್ಲಿರತಕ್ಕ ಎಲ್ಲಾ ವಿಧದ ಬಲಗಳೂ (ಬುದ್ಧಿ ಬಲ, ದೇಹಬಲ, ಆತ್ಮಬಲ, ಮನೋಬಲ) ರಾಮನ ಅನುಗ್ರಹದಿಂದಲೇ

**ನೀಚರನ್ನಾಶ್ರಯಿಸಿ ಕೆಡಬೇಡಿ**

ಬಂದಿರತಕ್ಕದ್ದು. ಅವನೇ ನನ್ನ ಸ್ವಾಮಿ, ನಾನು ಅವನ ದಾಸ ಎಂಬ ಭಾವನೆಯೊಂದಿಗೆ ರಾಮನನ್ನು ಹೃದಯದಲ್ಲಿ ಭಕ್ತಿಯಿಂದ ಸ್ಮರಿಸುತ್ತಾ, ನಮಸ್ಕರಿಸುತ್ತಾ ಸಮುದ್ರವನ್ನು ದಾಟಿ ಲಂಕೆಗೆ ಹೋಗಲು ಮೇಲಕ್ಕೆ ನೆಗೆಯುತ್ತಾನೆ. ಮುಂದೆ ರಾವಣ ಹನುಮನನ್ನು ಕುರಿತು ನೀನು ಯಾರು? ಎಂದು ಕೇಳಿದಾಗಲೂ ಕೂಡಲೇ ಉತ್ತರಿಸದೇ, **'ಪ್ರಣಮ್ಯ ರಾಮಮೀಶ್ವರಂ'** ಅಂದರೆ ರಾಮನನ್ನು ನಮಸ್ಕರಿಸಿಯೇ ಉತ್ತರಿಸುತ್ತಾನೆ. ರಾವಣನಿಗೆ ತನ್ನ ಪರಿಚಯವನ್ನು ತಿಳಿಸುವಾಗಲೂ ತಾನು ಇಷ್ಟೆಲ್ಲಾ ಘನಕಾರ್ಯ ಮಾಡಿದ ಮಹಾಪರಾಕ್ರಮಿ, ಅಂಜನಾದೇವಿಯ ಮಗನಾದ ನಾನು ಆಂಜನೇಯ ಎಂದು ಹೇಳದೇ **'ಅವೈಹಿ ದೂತಮಾಗತಂ ದುರಂತವಿಕ್ರಮಸ್ಯಮಾಂ'** ಅನ್ನುತ್ತಾನೆ. ಅಂದರೆ ಕೇವಲ ನಾನು ರಾಮನದೂತ ಎಂದು ತನ್ನನ್ನು ಪರಿಚಯಿಸಿಕೊಳ್ಳುತ್ತಾನೆ. ಇದನ್ನೇ ವಾಲ್ಮೀಕಿಗಳು ರಾಮಾಯಣದಲ್ಲಿ **ದಾಸೋಹಂ ಕೋಸಲೇಂದ್ರಸ್ಯ** ಎಂದು ಹನುಮನಿಂದ ಹೇಳಿಸುತ್ತಾರೆ. ಅವನಿಗೆ ತಾನು ರಾಮನ ದಾಸ ಎಂಬುದೇ ಹೆಗ್ಗಳಿಕೆ ಅಲ್ಲವೇ? ಇಂಥಹ ಗುಣಗಳಿಂದಲೇ ಅವನಲ್ಲಿ ನಿಜವಾದ ಸೌಂದರ್ಯವನ್ನು ನಾವು ಕಾಣಬಹುದು. ಮುಂದೆ ಸೀತೆ ನೀಡಿದ ಶಿರೋರತ್ನವನ್ನು ತಾನೊಬ್ಬನೇ ನೇರವಾಗಿ ರಾಮನ ಬಳಿ ಹೋಗಿ ಅರ್ಪಿಸಬಹುದಿತ್ತು. ಆದರೆ **ಸರ್ವ ಕಪಿವೀರವರೈಃ** ಅನ್ನುತ್ತಾರೆ ಆಚಾರ್ಯರು. ಅಂದರೆ ಎಲ್ಲ ಕಪಿಶ್ರೇಷ್ಠರಿಂದೊಡಗೂಡಿಯೇ ತಾನು ಭಕ್ತಿಯಿಂದ, ರಾಮನ ಕರಗಳಲ್ಲಿ ನೇರವಾಗಿ ಅರ್ಪಿಸದೇ ರಾಮನ ಪಾದಗಳ ಬಳಿಇಟ್ಟು ಅಷ್ಟಾಂಗಗಳಿಂದ ಭಕ್ತಿಯಿಂದ ನಮಸ್ಕರಿಸುತ್ತಾನೆ. ಇಂತಹ ಪರಿಪೂರ್ಣವಾದ ನಿರ್ವ್ಯಾಜವಾದ ದೃಢವಾದ ಭಕ್ತಿ, ವಿನಯತೆ, ಜೀವಕೋಟಿಯಲ್ಲೇ ಉತ್ತಮರಾದ ಹನುಮಂತ ದೇವರಿಗಲ್ಲದೇ ಇನ್ನ್ಯಾವನಿಗೆ ಇರಲು ಸಾಧ್ಯ? ಅದಕ್ಕಾಗಿಯೇ ರಾಮನಿಗೆ ಇವನು ಮಾಡಿದ ಸೇವೆಗೆ ಏನು ಕೊಡಬೇಕೆಂದು ತಿಳಿಯದೆ ತನ್ನನ್ನೇ ತಾನು ಅವನಿಗೆ ಅರ್ಪಿಸುತ್ತಾನೆ. **'ಸ್ವಾತ್ಮಪ್ರದಾನಮಧಿಕಂ ಪವನಾತ್ಮಜಸ್ಯ ಕುರ್ವನ್ ಸಮಾಶ್ಲಿಷದಮುಂ ಪರಮಾಭಿತುಷ್ಟಃ'**

ಇಂತಹ ಗುಣಗಳಿಂದ ಕೂಡಿದ ಹನುಮನಲ್ಲೇ ನಿಜವಾದ ಸೌಂದರ್ಯ ಇರುವುದಲ್ಲವೇ? ಅವನೇ ಸುಂದರ. ಸುಂದರಕಾಂಡದ ಅಧ್ಯಯನದಿಂದ ನಾವೂ ಕೂಡ ಹನುಮಂತನಲ್ಲಿರತಕ್ಕ ಗುಣಗಳನ್ನು ಅವನ ಚರಿತ್ರೆಯ ನೈತಿಕ ಮೌಲ್ಯಗಳನ್ನು ಕಿಂಚಿತ್ತಾದರೂ ನಮ್ಮ ಬದುಕಲ್ಲಿ ಅಳವಡಿಸಲು ಪ್ರಯತ್ನಿಸೋಣ. ಆ ಮೂಲಕ ರಾಮ–ಹನುಮರ (ಹರಿವಾಯುಗಳ) ಅನುಗ್ರಹಕ್ಕೆ ಪಾತ್ರರಾಗೋಣ. ★

**ಹೆಂಡತಿ ಮಕ್ಕಳಿಗೆ ಹಿತೋಪದೇಶವನ್ನು ಮಾಡುತ್ತಾ ಕುಟುಂಬವನ್ನು ಸಾಗಿಸುತ್ತಿರಿ**

ಅನುಭವ ಕಥನ

# ಮಾಘದ ಪ್ರಯಾಗ

ನದಿಗಳಲ್ಲೇ ಶ್ರೇಷ್ಠವಾದುದು ತ್ರಿಲೋಕಗಾಮಿನಿಯಾದ ವಿಷ್ಣುಪಾದೋದಕವಾದ ಗಂಗೆ. ಯಮರಾಜನ ತಂಗಿಯಾದ ಯಮುನಾ ನದಿಯು ಶ್ರೇಷ್ಠನದಿಯ ಸಾಲಿನಲ್ಲಿ ನಿಲ್ಲುವ ಇನ್ನೊಂದು ಪವಿತ್ರ ನದಿ. ಇವೆರಡರ ನಡುವೆ ಗುಪ್ತಗಾಮಿನಿಯಾದ ಸರಸ್ವತೀ ನದಿ. ಈ ಮೂರು ಮಹಾನದಿಗಳು ಸಂಗಮಿಸುವ ಪರಮ ಪವಿತ್ರ ಸ್ಥಳವೇ ತ್ರಿವೇಣಿ ಸಂಗಮದ ಪ್ರಯಾಗ.

**ಯತ್ರ ಗಂಗಾ ಚ ಯಮುನಾ ಯತ್ರ ಪ್ರಾಚೀ ಸರಸ್ವತೀ।**
**ಯತ್ರ ಸೋಮೇಶ್ವರೋ ದೇವಃ ತತ್ರ ಮಾಮಮೃತಂ ಕೃಧಿ ಇಂದ್ರಾಯೇಂದೋ ಪರಿಸ್ರವ॥**

ಎಂಬುದಾಗಿ ವೇದದಲ್ಲಿಯೇ ಪ್ರಸಿದ್ಧವಾದ ಈ ಸ್ಥಳ. ಒಂದು ಸ್ಥಳದಲ್ಲಿ ಪವಿತ್ರವಾದ ನದಿ ಸರೋವರಾದಿಗಳು ಇದ್ದರೆ ಆ ಸ್ಥಳಕ್ಕೆ ತೀರ್ಥ ಎಂದು ಹೆಸರು. ಪ್ರಸಿದ್ಧ ದೇವಳವಿದ್ದರೆ ಆ ಜಾಗಕ್ಕೆ ಕ್ಷೇತ್ರ ಎಂದು ಹೆಸರು. ಈ ಪ್ರಯಾಗವು ತೀರ್ಥವೂ ಹೌದು, ಕ್ಷೇತ್ರವೂ ಹೌದು. ತ್ರಿವೇಣಿಸಂಗಮವಾಗುವುದರಿಂದ ತೀರ್ಥವೆನಿಸಿದರೆ, ಕ್ಷೇತ್ರಸ್ವಾಮಿ ವೇಣಿಮಾಧವ ಹಾಗೂ ಪರಮವೈಷ್ಣವಸೋಮೇಶ್ವರದೇವರಿಂದಾಗಿ ಕ್ಷೇತ್ರವೆನಿಸಿಕೊಂಡಿದೆ. ಪರಮ ಪವಿತ್ರ ಕ್ಷೇತ್ರವಾದ್ದರಿಂದಲೇ ಪ್ರತಿನಿತ್ಯವೂ "ಪ್ರಯಾಗ-ಪ್ರಯಾಗ" ಎಂದು ಈ ಸ್ಥಳದ ಸ್ಮರಣಪೂರ್ವಕವಾಗಿಯೇ ಸ್ನಾನಮಾಡುವ ಸಂಪ್ರದಾಯವು ಹಿಂದಿನಕಾಲದಿಂದಲೂ ಬಂದಿದೆ. ಇಂತಹ ಪ್ರಯಾಗದಲ್ಲಿ ಪ್ರತಿನಿತ್ಯವೂ ಸ್ನಾನ ಮಾಡುವ ಭಕ್ತರು ಬಹಳಷ್ಟು ಮಂದಿ. ಅದರಲ್ಲೂ ಪುಷ್ಯಮಾಸದ ಹುಣ್ಣಿಮೆಯಿಂದ ಮಾಘಮಾಸದ ಹುಣ್ಣಿಮೆಯವರೆಗೆ ಒಂದು ತಿಂಗಳಕಾಲ ಈ ಸಂಗಮ ಸ್ನಾನ ಬಹಳ ವಿಶೇಷವಾದ್ದರಿಂದ ದೇಶದ ಎಲ್ಲಾ ಕಡೆಗಳಿಂದಲೂ ಅಸಂಖ್ಯಾತ ಜನರು ಸಂಗಮ ಸ್ನಾನಕೋಸ್ಕರ ಬರುತ್ತಾರೆ. ಈ ಒಂದು ತಿಂಗಳಲ್ಲಿ ಪುಷ್ಯಪೂರ್ಣಿಮಾ-ಮಕರಸಂಕ್ರಾತಿ-ಪುಷ್ಯಅಮಾವಾಸ್ಯೆ-ವಸಂತಪಂಚಮೀ-ಮಾಘಹುಣ್ಣಿಮೆ ಈ ಐದು ದಿನಗಳ ಸ್ನಾನಗಳು ಪಂಚಶಾಹಿ(ಪವಿತ್ರ)ಸ್ನಾನಗಳು ಎಂದು ಪ್ರಸಿದ್ಧ ಮಾಘಮೇಳ ಎಂದೇ ಕರೆಯಲ್ಪಡುವ ಈ ಉತ್ಸವದಲ್ಲಿ ಒಂದು ತಿಂಗಳು ಪ್ರಯಾಗದಲ್ಲೇ ಇದ್ದು ಪ್ರತಿನಿತ್ಯವು ಸಂಗಮ ಸ್ನಾನಮಾಡುವ ಭಕ್ತರು ಲಕ್ಷಾಂತರ ಮಂದಿ. ಇಂತಹ ಭಕ್ತರಿಗೆ ಉತ್ತರಪ್ರದೇಶದ ಸರ್ಕಾರವೇ ವಸತಿ ವಿದ್ಯುತ್, ನೀರು, ಶೌಚಾಲಯ ಮುಂತಾದ ಮೂಲಭೂತ ಸೌಕರ್ಯಗಳನ್ನು ಕೋಟ್ಯಂತರ ರೂಗಳನ್ನು ವೆಚ್ಚಮಾಡಿ ಉಚಿತವಾಗಿ ನೀಡುವುದಲ್ಲದೇ, ಪ್ರವಚನ-ಪಾಠ-ಭಜನೆ ಮುಂತಾದವುಗಳಿಗೆ

**ಭಗವದ್ಭಕ್ತರನ್ನು ಎಂದಿಗೂ ನಿಂದಿಸದಿರಿ**

ಬೇಕಾದ ಧ್ವನಿವರ್ಧಕ, ಅದಕ್ಕೆ ಪ್ರತ್ಯೇಕ ಬ್ಯಾಟರಿ ಮುಂತಾದವುಗಳನ್ನೂ ಸಹ ಉಚಿತವಾಗಿ ನೀಡುತ್ತದೆ. ಇಂತಹ ಮಾಘಮೇಳಕ್ಕೆ ಪ್ರತಿವರ್ಷವೂ ಎರಡು ಮೂರು ದಿನಗಳು ಮಾತ್ರ ತೆರಳುತ್ತಿದ್ದ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶತೀರ್ಥರು ಈ ವರ್ಷ ಒಂದು ತಿಂಗಳು ಪೂರ್ತಿ ಅಲ್ಲೇ ವಾಸವಾಗಿದ್ದರು. ತೆರಳುವ ಮೊದಲು ವ್ಯವಸ್ಥೆಯ ಬಗ್ಗೆ ಚಿಂತಿತರಾಗಿದ್ದ ನಾವೆಲ್ಲರು ಅಲ್ಲಿಯ ವ್ಯವಸ್ಥೆಯನ್ನು ನೋಡಿ ಬೆಕ್ಕಸ ಬೆರಗಾದೆವು. ಒಂದು ಎಕರೆಯಷ್ಟು ಜಾಗಕ್ಕೆ ಕಬ್ಬಿಣದ ಶೀಟುಗಳಿಂದ ಕಾವಲು ಗೋಡೆಯನ್ನು ನಿರ್ಮಿಸಿ ಅದರ ಒಳಗೆ ಹತ್ತಾರು ವಸ್ತ್ರದ ಮನೆಗಳನ್ನು (ಟೆಂಟ್) ನಿರ್ಮಿಸಿ ಅದರಲ್ಲಿ ವಸತಿಗೆ ವ್ಯವಸ್ಥೆಯನ್ನು ಕಲಿಸಿದ್ದರು. ಇಂತಹದ್ದೇ ಸಾವಿರಾರು ಟೆಂಟ್‌ಗಳ ಸಮೂಹಗಳನ್ನು ಅಲ್ಲಿ ನಿರ್ಮಿಸಿ ಬೇರೆ ಬೇರೆ ಆಶ್ರಮದವರಿಗೆ ಉಚಿತವಾಗಿ ನೀಡಿದ್ದರು. ಅದರಲ್ಲಿ ಅದ್ವೈತ-ವಿಶಿಷ್ಟಾದ್ವೈತ ಮುಂತಾದ ಬೇರೆ ಬೇರೆ ಮತದವರು ವಾಸವಾಗಿದ್ದರು. ನಮ್ಮ ಶ್ರೀಮಠದ ಪಟ್ಟದದೇವರ ಪೂಜೆಗಾಗಿ ಕಬ್ಬಿಣದ ತಗಡುಗಳಿಂದ ಮಡಿಗೆ ಅನುಕೂಲವಾಗುವಂತಹ ಪೂಜಾಗೃಹವನ್ನು ನಿರ್ಮಿಸಿದ್ದರು. ಹಾಗೇಯೇ ದೇವರ ನೈವೇದ್ಯಕ್ಕೂ ಕೂಡ ಅಂತಹದೇ ಕೋಣೆಯನ್ನು ನಿರ್ಮಿಸಿದ್ದರು. ಸಂಗಮಕ್ಕೆ ತೆರಳಲು ತಮ್ಮ ತಮ್ಮ ಟೆಂಟ್‌ಗಳಿಗೆ ತೆರಳಲು ವಿಶಾಲವಾದ ಮುಖ್ಯರಸ್ತೆಯನ್ನು ನಿರ್ಮಿಸಿದ್ದರು. ಅದಕ್ಕೆ ಪ್ರಕಾಶಮಾನವಾದ ವಿದ್ಯುತ್ ದೀಪಗಳ ವ್ಯವಸ್ಥೆಯನ್ನು ಮಾಡಿದ್ದರು. ಪೂರ್ಣ ಧಾರ್ಮಿಕ ವಾತಾವರಣವನ್ನು ಹೇಗೆ ನಿರ್ಮಿಸಿದ್ದರೆಂದರೆ ಒಳಗಡೆ ಯಾವುದೇ ಧಾರ್ಮಿಕ ಹೊರತಾದ ವಸ್ತುಗಳು ದೊರಕುತ್ತಿರಲಿಲ್ಲ. ಯಾವುದೇ ವಾಹನಕ್ಕೂ ಅವಕಾಶವಿರಲಿಲ್ಲ. ಇಷ್ಟೆಲ್ಲಾ ವ್ಯವಸ್ಥೆಯನ್ನು ನೋಡುವಾಗ ಅತ್ಯಾಶ್ಚರ್ಯವಾಗುತ್ತದೆ. ಏಕೆಂದರೆ ಈ ರಸ್ತೆ ಇರುವ ಜಾಗ ಟೆಂಟ್‌ಗಳು ಇರುವ ಜಾಗ ಎಲ್ಲವೂ ಕೂಡ ಗಂಗಾಪಾತ್ರವಾದ್ದರಿಂದ ಮಳೆಗಾಲದಲ್ಲಿ ಸಂಪೂರ್ಣ ಜಲಾವೃತವಾಗಿರುತ್ತದೆ. ಈ ಒಂದು ತಿಂಗಳಿಗೋಸ್ಕರ ಮಾಯಾನಗರಿಯನ್ನೇ ರಚಿಸಿದ್ದಾರೆ. ಇಲ್ಲಿನ ಸ್ವಚ್ಛತೆಯ ವ್ಯವಸ್ಥೆ ಮೆಚ್ಚಬೇಕಾದ್ದದ್ದೇ. ಒಂದು ತಿಂಗಳಕಾಲ ನಿರಂತರ ಜನರ ಪ್ರವಾಹವಿದ್ದರೂ ಒಂದೇ ಒಂದು ಸೊಳ್ಳೆ, ನೊಣ ಇತ್ಯಾದಿ ಕ್ರಿಮಿಗಳು ಅಲ್ಲಿ ಇರಲಿಲ್ಲ. ಎಲ್ಲಿಯೂ ಹೊಲಸು ಇರಲಿಲ್ಲ. ಅಂದರೆ ಅದಕ್ಕೆ ವಹಿಸಿದ ಶ್ರಮ ನಿಜಕ್ಕೂ ಶ್ಲಾಘನೀಯ. ಈ ಎಲ್ಲಾ ವ್ಯವಸ್ಥೆಗಳು ಎಷ್ಟೋ ವರ್ಷಗಳಿಂದ ನಡೆಯತ್ತಿದೆ. ಆದ್ದರಿಂದ ಇಂದು ಯಾವ ನಾಸ್ತಿಕ ಸರಕಾರವಿದ್ದರೂ, ಆ ಸರಕಾರಕ್ಕೆ ಇಷ್ಟು ವ್ಯವಸ್ಥೆ ಮಾಡುವುದು ಅತಿ ಅನಿವಾರ್ಯವಾಗಿದೆ. ಇಂತಹ ಸಂಗಮಪುರಿಯಲ್ಲಿ ಗುರುಗಳು ಪ್ರತಿದಿನ ಬೆಳಗ್ಗೆ ವಿದ್ಯಾರ್ಥಿಗಳಿಗೆ ಸುಧಾ ಪಾಠವನ್ನು ನೆರವೇರಿಸಿ, ನಂತರ ಸಂಗಮ ಸ್ನಾನಕ್ಕೆ ತೆರಳುತ್ತಿದ್ದರು. ನಂತರ ಟೆಂಟ್‌ನಲ್ಲಿ ಶ್ರೀರಾಮದೇವರ ಪೂಜೆ ವೈಭವವಾಗಿ ನೆರವೇರುತ್ತಿತ್ತು.

ನ್ಯಾಯಮಾರ್ಗದಿಂದ ಹಣ ಗಳಿಸಿರಿ, ನೀಚಮಾರ್ಗಬೇಡ.

ನಂತರ ಪೂಜಾ ಸಂದರ್ಭದಲ್ಲಿ ಭಾಗವಹಿಸುದ ಭಕ್ತರಿಗೆ ಪ್ರಸಾದ ವಿತರಣೆಯಾಗುತ್ತಿತ್ತು. ಮಧ್ಯಾಹ್ನ ಪುನಃ ಶ್ರೀಸುಧಾ ಪಾಠ ನಡೆಯುತಿತ್ತು. ಉತ್ತರಭಾರತದಲ್ಲಿ ಶ್ರೀಮದ್ವಮತ ಪ್ರಚಾರವಾಗಬೇಕೆಂಬ ಹೆಬ್ಬಯಕಯಿಂದ ಪ್ರಾತಃಸ್ಮರಣೀಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರು ಪ್ರಯಾಗದಲ್ಲಿ ರಾಮಾಚಾರ್ಯರು ಎಂಬ ಗೃಹಸ್ಥಾಶ್ರಮಿಗೆ ಸಂನ್ಯಾಸಾಶ್ರಮವನ್ನು ನೀಡಿ ಶ್ರೀವಿದ್ಯಾವಲ್ಲಭ ತೀರ್ಥರೆಂಬ ನಾಮಧೇಯವನ್ನಿತ್ತು ಪ್ರಯಾಗಮಠಾಧೀಶರನ್ನಾಗಿ ಮಾಡಿ ಅವರನ್ನು ಪಾಠ-ಪ್ರವಚನಕ್ಕಾಗಿ ನಿಯೋಜಿಸಿದ್ದರು. ಅದನ್ನು ಯಶ್ವಸಿಯಾಗಿ ನಿಭಾಯಿಸಿದ ಶ್ರೀವಿದ್ಯಾವಲ್ಲಭ ತೀರ್ಥರು ಅಪಾರ ಶಿಷ್ಯಸಂಪತ್ತನ್ನು ಬೆಳೆಸಿದರು. ಅವರ ಶ್ರಮದ ಫಲವಾಗಿಯೇ ಇಂದಿಗೂ ಕೂಡ ಸರ್ವಮೂಲ ಗ್ರಂಥಗಳ ಅಧ್ಯಯನ-ಅಧ್ಯಾಪನಗಳು ಯಶಸ್ವಿಯಾಗಿ ನಡೆಯುತ್ತಿವೆ. ಈ ಶಿಷ್ಯರಿಗೆ ಗುರುಗಳು ಪ್ರತಿದಿನ ಸಾಯಂಕಾಲ ಬ್ರಹ್ಮಸೂತ್ರಭಾಷ್ಯ, ಶ್ರೀಸೂಕ್ತ-ಪುರುಷಸೂಕ್ತ ಪಾಠ, ಭಾಗವತ ಉಪನ್ಯಾಸವನ್ನು ಹಿಂದಿಯಲ್ಲಿಯೇ ನೀಡುತ್ತಿದ್ದರು. ಈಗಿನ ಪ್ರಯಾಗ ಮಠಾಧೀಶರಾದ ಶ್ರೀ ವಿದ್ಯಾತ್ಮತೀರ್ಥರು ಭಗವದ್ಗೀತೆಯ ಉಪನ್ಯಾಸವನ್ನು ನೀಡುತ್ತಿದ್ದರು. ಈ ಮಾಘಮಾಸದಲ್ಲಿಯೇ ಬರತಕ್ಕಂತಹ ರಥಸಪ್ತಮಿ, ಭೀಷ್ಮಾಷ್ಟಮಿ, ಶ್ರೀಮಧ್ವನವಮಿ ಉತ್ಸವಗಳು ವಿಜೃಂಭಣೆಯಿಂದ ನಡೆದವು. ರಥಸಪ್ತಮಿಯಂದು ಶ್ರೀಮಧ್ವವಿಜಯದಲ್ಲಿ ನಿಜಶಿಷ್ಯಪ್ರವರರೆಂದೇ ಉಲ್ಲೇಖಿಸಲ್ಪಟ್ಟ ಪಲಿಮಾರುಮಠದ ಮೂಲಪುರುಷರಾದ ತ್ರಿವೇಣಿಸಂಗಮದಲ್ಲಿಯೇ ದೇಹತ್ಯಾಗಮಾಡಿದ ಪ್ರಾತಃ ಸ್ಮರಣೀಯರಾದ ಶ್ರೀ ಶ್ರೀ ಹೃಷೀಕೇಶತೀರ್ಥರ ಆರಾಧನೆಯು ನಡೆಯಿತು. ಮಧ್ವನವಮಿಯಂದು ವಿಶೇಷವಾದ ಸಭಾಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅಲ್ಲಿನ ಶಿಷ್ಯರಾದ ಗಿರಿಧರಲಾಲ್ ಮಿಶ್ರಾ, ಭರತ್‌ಶುಕ್ಲ, ಬಿ.ಡಿ. ಸಿಂಗ್, ಮಾನ್‌ಸಿಂಗ್ ಮುಂತಾದವರು ವಾಯುಸ್ತುತಿ, ಮಧ್ವವಿಜಯ, ಸರ್ವಮೂಲ ಗ್ರಂಥಗಳ ಬಗ್ಗೆ ತಮ್ಮದೇ ಆದ ರೀತಿಯಲ್ಲಿ ಉಪನ್ಯಾಸವನ್ನು ನಡೆಸಿದರು. ಮಾಧ್ವ ಪರಂಪರೆಯ ಸಂಬಂಧವುಳ್ಳ ಈವರೆಗೆ ಅಜ್ಞಾತರಾಗೇ ಇದ್ದ ಮಧ್ಯಪ್ರದೇಶ **ಮೈಹರ್** ನ ಸೀತಾವಲ್ಲಭ ಸ್ವಾಮಿ ಹಾಗೂ **ರೇವಾದ** ರಾಮಚಂದ್ರಸ್ವಾಮೀಜಿಯವರು ಶ್ರೀಮದ್ವ ಭಾಷ್ಯದ ಬಗ್ಗೆ ಪ್ರವಚನವನ್ನು ನೀಡಿದರು. ಪ್ರಯಾಗಮಠಾಧೀಶರಾದ ಶ್ರೀ ವಿದ್ಯಾತ್ಮತೀರ್ಥರು ಹಿಂದಿಯಲ್ಲಿ ಅನುವಾದಿಸಿದ ಶ್ರೀಭಾಗವತ ಚತುರ್ಥಸ್ಕಂದದ ಪುಸ್ತಕವು ಈ ಸಂದರ್ಭದಲ್ಲಿ ಬಿಡುಗಡೆಯಾಯಿತು. ಸರ್ವಮೂಲಗ್ರಂಥವನ್ನು ಅಧ್ಯಯನ ನಡೆಸುತ್ತಿರುವ ಅಲ್ಲಿನ ಹನ್ನೆರಡು ಮಂದಿ ಜಿಜ್ಞಾಸುಗಳನ್ನು ಸನ್ಮಾನಿಸಲಾಯಿತು. ಶ್ರೀಮಧ್ವಾಚಾರ್ಯರ ಪ್ರತಿಕೃತಿಗೆ ಪುಷ್ಪವೃಷ್ಟಿಯನ್ನು ಮಾಡುವ ಮೂಲಕ ಈ ಎಲ್ಲಾ ಕಾರ್ಯಕ್ರಮವನ್ನು ಶ್ರೀ ಮಧ್ವಾಂತರ್ಗತ ಶ್ರೀವೇದವ್ಯಾಸರಿಗೆ ಅರ್ಪಿಸಲಾಯಿತು. ★

**ಬಂದ ಹಣದಲ್ಲಿ ಸ್ವಲ್ಪಭಾಗವನ್ನು ಧಾರ್ಮಿಕ ಕಾರ್ಯಕ್ಕಾಗಿ, ಬಡಬಗ್ಗರಿಗಾಗಿ ವಿನಿಯೋಗಿಸಿ**

**ಪ್ರಶ್ನೋತ್ತರ–ಪದಬಂಧ**

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ಬೆವರದ ಪ್ರಾಣಿ ಯಾವುದು?

2) ಕಲ್ಪಗಳೆಷ್ಟು? ಈಗ ಯಾವ ಕಲ್ಪ ನಡೆಯುತ್ತಿದೆ?

3) 'ಹರ್ಷಚರಿತ'ವನ್ನು ಬರೆದವರಾರು?

4) 'ಅಭಿನವ ಪಂಪ' ಯಾರು?

5) 'ಚಹಾ' ಯಾವ ದೇಶದ ಪಾನೀಯ?

6) ಗಾದೆ ಪೂರ್ಣಗೊಳಿಸಿ– ಆಕಳು ಕಪ್ಪಾದರೆ -------?

7) 'ವಂಶವೃಕ್ಷ' ಇದು ಯಾರ ಕಾದಂಬರಿ?

8) ಕರ್ನಾಟಕದ ಅತ್ಯಂತ ಎತ್ತರವಾದ ಶಿಖರ ಯಾವುದು?

9) ಚೋಮನದುಡಿ ಯಾರ ಕೃತಿ?

10) ನೀವು ಹುಟ್ಟಿದ ವಾರ ತಿಳಿಯಬೇಕೆ?

## ಪದ ಬಂಧದ ಉತ್ತರ

1) ಮಧುಸೂದನ ಸರಸ್ವತಿಗಳು 2) ಮಹಾಭಾರತ 3) ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ 4) ಕುರುಕ್ಷೇತ್ರ 5) ಮೂಕಜ್ಜಿಯ ಕನಸುಗಳು 6) 888+88+8+8+8

7) ಅರ್ಜುನನಿಗೆ 8) ಶ್ರೀರುಗ್ಮಿಣೀಶ ವಿಜಯ 10) ರಾಜ್ಞೀ

| | | | | | | | | |
|---|---|---|---|---|---|---|---|---|
| 1 ರಾ | ಜ | | 2 ಮೋ | ಡಿ | | 3 ದಾ | ರಿ | |
| ಗ | | | ಹ | | | ಮಿ | | 5 ಉ |
| 4 ಮಾ | ಧ | ವ | ನ | ಭಾ | ಮಿ | ನಿ | 6 ರ | ಮೆ |
| ಲಿ | | | | | | | ಕ್ಷಾ | |
| 7 ಕೆ | 9 ರ | ಳಿ | ದ | 10 ಕೇ | 11 ಸ | ರಿ | | 8 ಸು |
| | ಜಾ | | | ರ | | ಸಾ | | ಹಾ |
| 12 ಪ್ರೀ | | 13 ಭ | | ಳೀ | 14 ಕಾ | | 15 ಅ | ಸಿ |
| 18 ತ್ರಿ | ಮಿ | ರ | | 17 ಯ | ಮ | ಜ | | ನೀ |
| | | 16 ತ | ಮ | | 19 ದ | ಗ | ಕಾ | |

**ನಿಜವಾದ ಮರ್ಮವನ್ನರಿಯದ ಮೂರ್ಖರನ್ನು ಎಂದಿಗೂ ಗುರುವೆಂದು ನಂಬದಿರಿ**

## ಎಡದಿಂದ ಬಲಕ್ಕೆ:

1) ಈ ಶತಮಾನ ಕಂಡ ಶ್ರೇಷ್ಠ ಯತಿಗಳು (7)
5) ಕೀರ್ತಿ ಕೈ ಹಿಡಿದಿದೆ (4)
8) ಹಂದಿಯನ್ನು ಹೀಗೆ ಕರೆಯೋಣ (2)
9) ನೀಚರಾದ ರಾಕ್ಷಸರೊಡೆಯ (6)
11) 'ನಾಶ' ತಿರುಗಿದೆ (2)
12) ಶಾಪ ಅಲ್ಲ, ತಿರುಗಿ ಹಗ್ಗವಾಗಿದೆ (2)
13) ಬ್ರಹದ್ರಥ ಈ ಊರಿನರಸ (3)
15) ಎರಡಕ್ಷರದ ಮಾನವ (2)
16) ಇದು ಇಲ್ಲದಿರೆ ಮನೆ ನಿಲ್ಲೋಲ್ಲ (2)




ಉತ್ತರ ಮುಂದಿನ ಸಂಚಿಕೆಯಲ್ಲಿ

## ಮೇಲಿನಿಂದ ಕೆಳಕ್ಕೆ:

1) ವಿದ್ಯೆಯಿಂದ ಬರುವಂತದ್ದು (3)
2) ಹಾರವನ್ನು ಹಾಕಿಕೊಂಡ ಒಡೆಯನ ಮಗ (4)
3) ಮನ್ಮಥನ ಹೆಂಡತಿಯ ಶತ್ರು ಈ ಸಮುದ್ರ ಬದಿ (2)
4) ವಾದಿರಾಜರ ಅಮೋಘ ಕೃತಿ (7)
6) ರಾಮನಿಂದ ಉದ್ಧೃತನಾದ ಮುನಿ (4)
7) ಕನ್ನಡ ಜಲ, ಸಂಸ್ಕೃತದಲ್ಲಿ ತಿರುಗಿದೆ (2)
8) ನೋಡಲು ಕೆಟ್ಟವನಾಗಿದ್ದರೆ, ಹೀಗೆ ಹೇಳಿ (3)
10) ಉತ್ತರಭಾರತದ ಪ್ರಸಿದ್ಧ ತಿನಿಸು (3)
14) ಹಸುವಲ್ಲ, ವಸು (2)

ಜೀವನವೇ ಭಗವಂತನ ಪೂಜಾರೂಪವಾದ ಯಜ್ಞವಾಗಲಿ